6) ಶಾಸಕರ ದಿನಾಚರಣೆ

ಬುಧವಾರ, ದಿನಾಂಕ 7-9-1994 1) ಪ್ರಶ್ನೆಗಳು

2) ಗಮನ ಸೆಳೆಯುವ ಸೂಚನೆಗಳು

3) ಶಾಸನ ರಚನೆ

ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಈ ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಆಗಸ್ಟ್ 15ನೇ ತಾರೀಖು ಹುಬ್ಬಳ್ಳಿಯಲ್ಲಿ ನಡೆದಂತಹ ದುರದೃಷ್ಠ ಘಟನೆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನಾನು ಕರ್ನಾಟಕ ರಾಜ್ಯದ ವ್ಯವಸ್ಥೆಯನ್ನು ಪ್ರಸ್ತಾಪಿಸುತ್ತಿದ್ದೆ. ಆ ವ್ಯವಸ್ಥೆ ಇದೆ ಎಂದು ನೆನಪು ಕೊಡುವುದಕ್ಕಾಗಿ ಗೃಹಸಚಿವರು ಸದನದಲ್ಲಿ ಹಾಜರಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಡಿಸೆಂಬರ್ 6, 1992ರಲ್ಲಿ ಅಯೋಧ್ಯೆಯಲ್ಲಿ ನಡೆದ ಘಟನೆ ಸಂದರ್ಭದಲ್ಲಿ ಇಂಗುತಿಂದ ಮಂಗನಂತಿದ್ದ ಬಿಜೆಪಿಯವರು ಹುಬ್ಬಳ್ಳಿಯಲ್ಲಿ ಗೋಲಿಬಾರಾದಾಗ ಗಾಂಧಿ ಪ್ರತಿಮೆ ಕೆಳಗೆ ಕುಳಿತು ಭಜನೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಉತ್ತರಪ್ರದೇಶದಲ್ಲಿ ಚುನಾವಣೆ ಇತ್ತು. ಅದರ ಲಾಭಕ್ಕಾಗಿ ಮಾಡಿದರು. ಈಗಿಲ್ಲಿ ಕೂಡ ಅಂತಹುದೇ ಲಾಭ ಸಿಕ್ಕೀತು ಅನ್ನುವಂತಹ ಪ್ರಯತ್ನ ನಡೆಯಿತು. ಇದರ ಪರಿಣಾಮ ಯವ ದಿನವನ್ನು ನಾವು ಸಂತೋಷ, ಆನಂದ ಅಭಿಮಾನ ಮತ್ತು ಒಂದು ರಾಷ್ಟ್ರದ ಅತ್ಯಂತ ಸಂತಸ ಪಡುವಂತಹ ದಿನವನ್ನು ಭೀಕರವಾದ ಸ್ಮಶಾನಸದೃಶವಾದ ಸಂದರ್ಭವನ್ನು ಸೃಷ್ಟಿ ಮಾಡಿದ್ದಾರೆ. ಇದು ಎಲ್ಲರೂ ಆಲೋಚನೆ ಮಾಡಬೇಕಾದ್ದೆ. ಇಲ್ಲಿ ನಾಲ್ಕು ಪ್ರಶ್ನೆಗಳಿಗೆ ನಾವು ಉತ್ತರ ಹೇಳಬೇಕಾಗುತ್ತದೆ. ಒಂದು, ಗೋಲಿಬಾರ್ ಅನಿವಾರ್ಯವಾಗಿತ್ತೆ, ಹೀಗೆ ಅನಿವಾರ್ಯ ಎಂದು ಕಂಡರೆ ಯಾರಿಂದ ಗೋಲಿಬಾರ್ ನಡೆಯಿತು ಮತ್ತು ಮೂರನೆಯದು ಪರಿಹಾರ ಏನು ಒದಗಿಸಿದ್ದಾರೆ ಇದು ಯಾರು ಕೊಡಬೇಕು, ನಾಲ್ಕನೆಯದು ನ್ಯಾಯಾಂಗ ತನಿಖೆ, ಹೀಗೆ ನಾಲ್ಕು ಭಾಗವಾಗಿ ವಿಚಾರವನ್ನು ಚರ್ಚೆ ಮಾಡಬೇಕೆಂದಿದ್ದೇನೆ. ದಿನಾಂಕ 15ಕ್ಕೆ ಮುನ್ನ ಒಂದು ವಾರಕ್ಕೆ ಮುಂಚೆ ರಾಜ್ಯ ಸರ್ಕಾರದವರು ಮರಾಠ ಇನ್ಫೆನ್ಟ್ರಿಯ ಎರಡು ತುಕಡಿ ಕರೆಸಿದರು, ಆರ್‌ಎಎಫ್ ಜವಾನರು ಬಂದಿದ್ದರು, ಕ್ಷಿಪ್ರ ಕಾರ್‍ಯಾಚರಣೆ ಪಡೆ ರಾಜ್ಯಕ್ಕೆ ರವಾನೆಯಾಗಿತ್ತು. ಅಗತ್ಯ ಬಿದ್ದರೆ ದೆಹಲಿಯಿಂದ ಅರೆಸೇನಾಪಡೆ ತರಿಸುವಂತಹ ಆಲೋಚನೆ ಸರ್ಕಾರಕ್ಕಿತ್ತು. ಇವೆಲ್ಲ ಸಾಲದು ಎಂದು ಈದ್ಗಾ ಮೈದಾನದ ಸುತ್ತ ತಂತಿಬೇಲಿ ಹಾಕಿಸಿದರು. ಇವು ಸಾಲದು ಎಂದು ಹೊರಗಡೆ ಸಹಸ್ರಾರು ಜನರ ಬಂಧನ ಆಯಿತು. ಸಿಕಂದರ್‌ಭಕ್ತ್ ಅವರನ್ನು 13ನೇ ತಾರೀಖು ಬೆಂಗಳೂರಿನಲ್ಲಿ ಬಂಧಿಸಿದರು. ಕುಮಾರಿ ಉಮಾಭಾರತಿಯವರು ನನ್ನನ್ನು ಬಂಧಿಸಿ ಎಂಬ ಸವಾಲು ಎಸೆದಿದ್ದರು. ಆ ಸವಾಲು ಸ್ವೀಕರಿಸಲು ನೀವು ಸಮರ್ಥರಾಗಲಿಲ್ಲ ಚೌಡರೆಡ್ಡಿಯವರೇ. ಉಮಾಭಾರತಿಯವರು, ಯಡಿಯೂರಪ್ಪನವರು, ಈಶ್ವರಪ್ಪನವರು - ಇವರೆಲ್ಲಾ ಹುಬ್ಬಳ್ಳಿಯನ್ನು ತಲುಪಿಬಿಟ್ಟರು, ಅವರನ್ನು ತಡೆಯುವುದು ಸಾಧ್ಯವಾಗಲಿಲ್ಲ, ಇಷ್ಟೆಲ್ಲಾ ವ್ಯವಸ್ಥೆ ಸರ್ಕಾರ ಮಾಡಿದ್ದರೂ ಮತ್ತೂ ಗೋಲಿಬಾರ್ ಮಾಡಬೇಕಾದಂತಹ ಸ್ಥಿತಿ ಉಂಟಾದದ್ದು ನಮ್ಮ ಆಡಳಿತ ವ್ಯವಸ್ಥೆಗೊಡ್ಡಿದ ಒಂದು ದೊಡ್ಡ ಸವಾಲು. ಈ ಸವಾಲನ್ನು ಸರ್ಕಾರ ಹೇಗೆ ಸ್ವೀಕರಿಸುತ್ತದೋ ನಾನು ಆ ವಿವರಣೆಗೆ ಹೋಗುವುದಿಲ್ಲ, ಆ ದಿವಸ ಗೋಲಿಬಾರ್ ದುರದೃಷ್ಟಕರ ಎಂದು ಅನೇಕರು ಹೇಳಿದ್ದಾರೆ. ಇದಕ್ಕೆ ಪೋಲಿಸರಿಂದ ಕೂಡ ವಿವರಣೆ ಬಂದಿದೆ. "ಗೋಲಿಬಾರ್ ಅವಶ್ಯಕತೆ ಇತ್ತೇ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಶಾಂತಿ ಸುವ್ಯವಸ್ಥೆ ಪ್ರಶ್ನೆಯಾಗಿದ್ದು ಪೋಲಿಸರು ಲಾಠಿಚಾರ್ಜ್ ಅಶ್ರುವಾಯು ರಬ್ಬರುಗುಂಡು ಪ್ರಯೋಗಿಸಿ ಪರಿಸ್ಥಿತಿ ಹತೋಟಿಗೆ ಬರದಿದ್ದಾಗ ಗೋಲಿಬಾರ್ ಮಾಡಿದ್ದಾರೆ" ಎಂದು ಹೇಳಿದ್ದಾರೆ.

ಸುಮಾರು 8 ಪೋಲೀಸ್ ಠಾಣೆಗಳಲ್ಲಿ ಕರ್ಫ್ಯೂ ಜಾರಿಯಲ್ಲಿತ್ತು, ಸಹಸ್ರಾರು ಮಂದಿಯ ಬಂಧನವಾಗಿತ್ತು. ಈ ಎಲ್ಲ ನಿಮ್ಮ ಪ್ರಯತ್ನವನ್ನು ಬಿಜೆಪಿಯ ಕಾರ್ಯಕರ್ತರು ನಷ್ಟಗೊಳಿಸಿದರು ಭ್ರಷ್ಟಗೊಳಿಸಿದರು, ಪ್ರವೇಶ ಮಾಡಿದರು, ಬಾವುಟ ಹಾರಿಸಿದರು ಎಂದು ಅವರು ಹೇಳಿಕೊಳ್ಳುತ್ತಾರೆ, ಇವರು ಇಲ್ಲ ಎಂದು ಹೇಳಿಕೊಳ್ಳುತ್ತಾರೆ. ನಡೆಯಿತು ಬಿಡುತೋ ಗೊತ್ತಿಲ್ಲ, ಆ ದಿವಸ ಗೋಲಿಬಾರ್ ಮಾಡಿ ಆಯಿತು, ಐದು ಜನ ಸತ್ತರು, ಗೋಲಿಬಾರನ್ನು ಯಾರು ಮಾಡಿದವರು! ಇದು ಪ್ರಶ್ನೆ. ಯಾವ ವ್ಯವಸ್ಥೆಯ ಸಂಪೂರ್ಣ ಜವಾಬ್ದಾರಿ ಹೊತ್ತ ರಾಜ್ಯದ ಗೃಹಖಾತೆಯೇ ಈ ವೈಫಲ್ಯಕ್ಕೆ ಕಾರಣ ಎಂದು ಹೇಳಬೇಕಾಗುತ್ತದೆ. ನೀವು ಇಂತಹ ವಿಶೇಷ ಪಡೆಗಳನ್ನು ಕರೆಸಿದ ಉದ್ದೇಶ ಇಲ್ಲಿಯ ಅಹಿತಕರ ಘಟನೆಗಳನ್ನು ತಡೆಯುವುದಕ್ಕಾಗಿ. ಆದರೆ ನಿಮ್ಮಿಂದ ಸಾಧ್ಯವಾಗಲಿಲ್ಲ. ಗೋಲಿಬಾರೂ ಆಯಿತು, ಗೋಲಿಬಾರ್ ಆಗದ್ದನ್ನು ಆಗಸ್ಟ್ 16ನೇ ತಾರೀಖು ಮೈಸೂರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟುಮಟ್ಟಿಗೆ ಡಿಫೆನ್ಡ್ ಮಾಡಿಕೊಂಡರು. ಗೋಲಿಬಾರ್ ಮಾಡಿದ್ದು ಅನಿವಾರ್ಯವಾಗಿತ್ತು, ಸರಿಯಾದ ಕೆಲಸಾನೇ ಮಾಡಿದ್ದಾರೆ ಪೋಲಿಸರು ಎಂದು ಹೇಳಿದ್ದಾರೆ. ಯಾರು ಗೋಲಿಬಾರ್ ಮಾಡಿದರು ಅನ್ನುವ ಮಾಹಿತಿಯನ್ನು ಈ ಸದನಕ್ಕೆ ನೀವು ಕೊಡಬೇಕಾಗುತ್ತದೆ. ಬರ್ಮನ್ರವರು ಒಂದು ಹೇಳಿಕೆ ಕೊಡುತ್ತಾರೆ ಗುಂಡು ಹಾರಿಸೇ ಇಲ್ಲ ಎಂದು. ಅದು 20ನೇ ತಾರೀಖು. ಗುಂಡು ಹಾರಿಸಿದ ಮೇಲೆ ಕೂಡ, ಯಾವಾಗ ಗುಂಡು ಹಾರಿಸಿದ್ದು? ಪ್ರಕರಣ ನಡೆಯುವಂತಹ ಸಮಯದಲ್ಲಲ್ಲ, ನಾವು ರಾಷ್ಟ್ರಧ್ವಜವನ್ನು ಹಾರಿಸಿದ್ದೇವೆ, ಅದರ ಸಂತೋಷ ಆಚರಣೆ ಮಾಡಬೇಕೆಂದು ಹೊರಟ ಕಾಲದಲ್ಲಿ ಗೋಲಿಬಾರಾಯಿತು ಎನ್ನುವುದು ಶ್ರೀ ಯಡಿಯೂರಪ್ಪ ಮತ್ತವರ ಮಿತ್ರ ವಾದ. ಆದರೆ ಈ ವಿಚಾರಕ್ಕೆ ಆಯಾಮ.. ರಾಜ್ಯ, ದೇಶ ವ್ಯಾಪ್ತಿಮೀರಿ ಭಾರತದ ಅತ್ಯುಚ್ಚ ಚುನಾಯಿತ .ಸ್ಥಾನ ಸಂಸತ್ತಿನಲ್ಲಿ ಚರ್ಚೆಗೆ ಬಂತು. ಇಷ್ಟು ದೊಡ್ಡ ಆಯಾಮ ಕೊಟ್ಟಿದ್ದೀರಿ ಎಂದರೆ ಸಂಸತ್ತಿನಲ್ಲಿ ಅನೇಕ ವಿಚಾರಗಳನ್ನು ಬದಿಗೊತ್ತಿ ಈ ವಿಚಾರ ಚರ್ಚೆಮಾಡುವಂತಹ ಎತ್ತರಕ್ಕೆ ಪ್ರಸ್ತಾಪ ಮಾಡಿದರು.

ಅಲ್ಲಿ ಕೇಂದ್ರದ ಮಂತ್ರಿಗಳು ಜವಾಬ್ದಾರಿಯಿಂದ ಸಂಸತ್ತಿಗೆ ಉತ್ತರ ಹೇಳುತ್ತಾ ಈ ಗೋಲಿಬಾರ್ನು ತಪ್ಪಿಸಬಹುದಿತ್ತು, ಯಾರು ತಪ್ಪಿಸಬಹುದಿತ್ತು ಎಂದರೆ ಆಳತಕ್ಕಂತಹ ಸರಕಾರ ತಪ್ಪಿಸಬಹುದಿತ್ತು. ವ್ಯವಸ್ಥೆಯ ಜವಾಬ್ದಾರಿ ಹೊತ್ತಂತಹ ಜನ ತಪ್ಪಿಸಬಹುದಿತ್ತು ಇನ್ನೂ ವ್ಯಾಪಕವಾದಂತಹ ವ್ಯವಸ್ಥೆ ಮಾಡಬೇಕಾದರೆ ತಪ್ಪಿಸಬಹುದಿತ್ತು ಎಂದು ವ್ಯಕ್ತ ಮಾಡಿದ್ದಾರೆ. ಹೀಗೆಲ್ಲಾ ಆದ ಮೇಲೂ ಉಮಾಭಾರತಿಯವರ ಬಂಧನದ ನಂತರ ಹುಬ್ಬಳ್ಳಿಯಲ್ಲಿ ಪೋಲಿಸರು ಗುಂಡು ಹಾರಿಸಿದ್ದನ್ನು 15-8-94 ರಂದು ಶ್ರೀಮಾನ್ ವೀರಪ್ಪ ಮೊಯಿಲಿಯವರು ಬಲವಾಗಿ ಸಮರ್ಥಿಸಿಕೊಂಡರು. ಈ ಸಮರ್ಥನೆಗೆ ಮುನ್ನಾ ಪೋಲಿಸ್ ಮುಖ್ಯಾಧಿಕಾರಿಗಳಾದ ರಾಮಲಿಂಗಮ್ ಅವರು ಅಲ್ಲಿ ಒಂದು ಹೇಳಿಕೆ ಮಾಡಿದ್ದಾರೆ. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಅವರು ಗೋಲಿಬಾರ್ನು ಅಷ್ಟಾಗಿ ಸಮರ್ಥಿಸಿದ ಹಾಗೆ ಕಾಣಲಿಲ್ಲ; ಸಮರ್ಥನೆ ಮಾಡಿದ ಹಾಗೆ ಕಾಣಲಿಲ್ಲ. ಒಂದು ಮಾತನ್ನು ಅವರು ಅಲ್ಲಿ ಸ್ಥಳೀಯ ಮುಖಂಡರಿಗೆ ಭರವಸೆ ಕೊಡುತ್ತಾರೆ. ತನಿಖೆ ಅಗತ್ಯ, ಯಾವ ರೀತಿ ತನಿಖೆ ಮಾಡಬೇಕೆನ್ನುವುದನ್ನು ಅಂದರೆ ಅವರು ಇಲಾಖೆಯ ತನಿಖೆ ಮಾಡುತ್ತೇವೆಂದು ಹೇಳಿದರು. ಅದರ ಜೊತೆಯಲ್ಲಿ ಜನ ಹುಚ್ಚೆದ್ದು ಅವರನ್ನು ಪ್ರಶ್ನೆ ಮಾಡಿದಾಗ ಬರೀ ಪೋಲೀಸರನ್ನಷ್ಟೇ ಏಕೆ ಬಯ್ಯುವುದು ಆಗ ಜನರಿಗೆ ಕಂಡಿದ್ದುದು. ಅದರ ಅರ್ಥ ಸರಕಾರವು ಇದರ ಹೊಣೆ ಎಂದು ಈ ಹೊಣೆಗಾರಿಕೆಯನ್ನು ಅವರು ಸರಕಾರದ ಮೇಲೆ ಹಾಕಿದ್ದಾರೆ. ಅದು ಏನೇ ಇರಲಿ; ಗೋಲಿಬಾರ್ ಅನಿವಾರ್ಯವಾಗಿತ್ತು ಎಂದು ಮಾನ್ಯ ಮುಖ್ಯಮಂತ್ರಿಗಳು ಬಲವಾಗಿ ಸಮರ್ಥಿಸಿಕೊಂಡ ಮಾರನೆಯ ದಿವಸ ಅಥವಾ ಅದೇ ದಿವಸವೋ ನ್ಯಾಯಾಂಗ

ತನಿಖೆಗೂ ಆಜ್ಞೆ ಮಾಡಿದರು. ಗೋಲಿಬಾರ್ ಅನಿವಾರ್ಯವೆಂದು ಹೇಳಿದ ಮೇಲೆ ಪೋಲಿಸರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆಂದು ಹೇಳಿದ ಮೇಲೆ ವಿಧಿಯಿಲ್ಲದೆ ಈ ಕೆಲಸ ಮಾಡಬೇಕಾಯಿತೆಂದು ಹೇಳಿದ ಮೇಲೆ ನ್ಯಾಯಾಂಗ ತನಿಖೆ ಮಾಡಿದರೆ ನ್ಯಾಯಾಂಗ ತನಿಖೆಯ ಪರಿಣಾಮ ಇದರ ಮೇಲೆನಾಗುತ್ತದೆಂದು ತಿಳಿಯಬಹುದು. ಮಾನ್ಯ ಮುಖ್ಯಮಂತ್ರಿಗಳು ಪೋಲಿಸರು ಮಾಡಿದ್ದು ಸರಿ ಎಂದು ಹೇಳಿ ಅವರೇ ಮತ್ತೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದರೆ ನ್ಯಾಯಾಂಗ ತನಿಖೆ ಮಾಡತಕ್ಕಂತಹ ನ್ಯಾಯಾಧೀಶರು ಹೇಗೆ ತನಿಖೆ ಮಾಡುತ್ತಾರೆಂದು ವಿಚಾರ ಮಾಡಿ. ಯಾವ ಮುಖ್ಯ ಮಂತ್ರಿಗಳೂ ಇದನ್ನು ಹೇಳಬಾರದು. ನ್ಯಾಯಾಂಗ ತನಿಖೆ ಮಾಡಬೇಕೆಂದು ಮನಸ್ಸಿನಲ್ಲಿದ್ದರೆ ಪೋಲಿಸರ ಕ್ರಮವನ್ನು ಸಮರ್ಥನೆ ಮಾಡಬಾರದಾಗಿತ್ತು. ಆಗ ನ್ಯಾಯಾಂಗ ತನಿಖೆ ನಿಷ್ಪಕ್ಷಪಾತವಾಗಿ ಆಗುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳು ಈಗ ಮಾಡಿದ್ದು ಸರಿಯಾಗಿದೆ ಎಂದು ಹೇಳಿ ಪುನಃ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದರೆ ಅದರ ಪರಿಣಾಮವೇನಾಗಬಹುದು ನ್ಯಾಯಾಂಗ ತನಿಖೆ ನಿಷ್ಪಕ್ಷಪಾತವಾಗಿ ಇರುವುದಕ್ಕೆ ಸಾಧ್ಯವಾಗುತ್ತದೆಯೇ? ಇದು ಮೂಲಭೂತವಾದ ಪ್ರಶ್ನೆ. ಈ ನ್ಯಾಯಾಂಗ ತನಿಖೆಗೆ ಆಜ್ಞೆಯನ್ನು ಹೊರಗಡೆ ಬಹಿರಂಗಗೊಳಿಸುವುದಕ್ಕೆ ಮುಂಚೆ ಇನ್ನೊಂದು ಮಾತನ್ನು ಅವರು ಹೇಳಿದ್ದಾರೆ. ಪೋಲಿಸ್ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅವರು ಕೊಟ್ಟಂತಹ ಗೌಪ್ಯ ವರದಿಯನ್ನು ಆಧರಿಸಿ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಪೋಲಿಸರು ಕೊಟ್ಟಂತಹ ಗೌಪ್ಯವಾದ ವರದಿ ಏನು? What is that secret report. ಆ ಸೀಕ್ರೇಟ್ ರಿಪೋರ್ಟಿನಲ್ಲಿ ಪೋಲೀಸರು ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡಿದ್ದಾರೆಂದಾದರೆ, ಪೋಲಿಸ್ ಇಲಾಖೆಯೇ ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡಿದೆ ಎಂದು ನಾನು ಅರ್ಥೈಸಿದರೆ ತಾವು ತಪ್ಪಾಗಿ ತಿಳಿಯಬಾರದು. ಅರ್ಥಾತ್ ಪೋಲಿಸ್ ಇಲಾಖೆಯವರೇ ತಾವು ಮಾಡಿದಂತಹ ಕಾರ್ಯಾಚರಣೆಯಲ್ಲಿ ಮೇಲಾಧಿಕಾರಿಗಳಿಗೆ ಸಮಾಧಾನವಾಗಿಲ್ಲವೆನ್ನುವ ಸತ್ಯ ಸಂಗತಿ ಸಾರ್ವಜನಿಕವಾಗಿ ಬಯಲಾಗಿದೆ.

ಇಲಾಖೆಯಲ್ಲಿ ದೋಷ ಆಗಿದೆ ಎನ್ನತಕ್ಕದ್ದನ್ನು ಗೋಪ್ಯ ವರದಿಯಲ್ಲಿ ಮುಖ್ಯಮಂತ್ರಿಗಳಿಗೆ ಅವರು ಕೊಟ್ಟಿದ್ದರೆ ಆ ವರದಿಯ ಆಧಾರದ ಮೇಲೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದರೆ ನೇರವಾಗಿ ಕಾರಣರಾದವರಿಗೆ ಶಿಕ್ಷೆಗೆ ಗುರಿಪಡಿಸಬಹುದಿತ್ತೇ ಹೊರತು ಮತ್ತೊಂದು ನ್ಯಾಯಾಂಗ ತನಿಖೆಯ ಅವಶ್ಯಕತೆ ಇರಲಿಲ್ಲ. ಆದ್ದರಿಂದ ಅದು ಏನು? ಶ್ರೀಮಾನ್ ರಾಮಲಿಂಗಮ್ ಅವರು ಹುಬ್ಬಳ್ಳಿಯಿಂದ ಬೆಂಗಳೂರಿಗೆ ತಲುಪಿದ ಕೆಲವೇ ಸಮಯದಲ್ಲಿ, ಕೆಲವು ಗಂಟೆಗಳಲ್ಲಿ ನ್ಯಾಯಾಂಗ ತನಿಖೆ ನಿರ್ಧಾರ ಆಗುತ್ತದೆ. ಅರ್ಥಾತ್ ಪೋಲಿಸ್ ಮಹಾನಿರ್ದೇಶಕರಿಗೆ ಇದು ದೋಷಪೂರ್ಣ ಆಗಿಲ್ಲ ಎನ್ನುವಂತಹ ಸಂಶಯ ಏನು ಇತ್ತು, ಆ ಸಂಶಯ ಬಲವಾಗಿದೆ ಎನ್ನುವಂತಹದ್ದು ನಾನು ಈ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡೆ. ಇದು ಆದ ಮೇಲೆ ಪರಿಹಾರದ ವಿಚಾರ. ತಪ್ಪು ಮಾಡಿದವರು, ಭಾರತೀಯ ಜನತಾಪಕ್ಷದವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಈದ್ಗಾ ಮೈದಾನದಲ್ಲಿ ಬಾವುಟ ಹಾರಿಸತಕ್ಕ ಕೆಲಸಕ್ಕೆ ಕೈ ಹಾಕಿದರು. ಸಾವಿರಾರು ಜನರ ಬಂಧನ ಮಾಡಿದರು. ಹತ್ತಾರು ಕೋಟಿ ರೂಪಾಯಿ ವೆಚ್ಚ ಆಯಿತು. ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರ ಪ್ರತಿ ನಿತ್ಯ ಒಂದು ಕೋಟಿ ರೂಪಾಯಿಯನ್ನು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಈ ರಾಜ್ಯಕ್ಕೆ ಕೊಡುತ್ತದೆ. ಒಂದು ಕೋಟಿ ರೂಪಾಯಿ ಹುಬ್ಬಳ್ಳಿನಗರ ಕೊಡುತ್ತದೆ. ಅಂಥಾದ್ದರಲ್ಲಿ ಸರ್ಕಾರಕ್ಕೆ ಬರತಕ್ಕ ಆದಾಯವೂ ಹೋಯಿತು. ಹೊಡೆದು ಹಾಕಿದವರು ಅವರು; ಸತ್ತವರು ಇವರು. ಪರಿಹಾರ ಕೊಡುವುದಕ್ಕೆ ಸರ್ಕಾರವೂ ಮುಂದೆ ಆಯಿತು. ಜೊತೆಗೆ ಈಗ ತನಿಖೆಗೆ ರಾಜ್ಯ ಸರ್ಕಾರ ಏನು ತೀರ್ಮಾನ ಮಾಡಿದೆ ಈ

ತೀರ್ಮಾನವನ್ನು ಮಂತ್ರಿ ಮಂಡಲದ ಸಭೆ ಒಪ್ಪಿಕೊಂಡಿದೆ ಎನ್ನುವುದು ನನಗೆ ಬಂದಿರತಕ್ಕ ವರದಿ. ಹೋಮ್ ಮಿನಿಸ್ಟರ್ ಹೇಳಿದರು. ಟರ್ಮ್ಸ್ ಆಫ್ ರೆಫರೆನ್ಸ್ ಏನು? under the commission of Enquiries Act terms iof reference ಏನು? ಪೋಲಿಸರ ನಿಷ್ಕ್ರಿಯತೆ ಕೂಡ ಒಂದು ಟರ್ಮ್ಸ್ ಆಫ್ ರೆಫರೆನ್ಸ್ ಆದರೆ ಅದನ್ನು ಆಗಲೇ ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಎಂದು ಹೇಳಿದ್ದಾರೆ. We have to distinguish between the two. ಆಗಲೇ ಇಲ್ಲ ಎಂದು ಹೇಳಿಬಿಟ್ಟಿದ್ದಾರೆ. ಇಲ್ಲ ಎಂದು ಹೇಳಿದ ಮೇಲೆ Could that be a term of reference? Terms of reference ಆಗುತ್ತದೆಯೋ? ಆದ್ದರಿಂದ ತಮ್ಮ ಟರ್ಮ್ಸ್ ಆಫ್ ರೆಫರೆನ್ಸ್ ಏನು ಎನ್ನುವುದು ನಮಗೆ ಬೇಕು. ಈಗ ಅದು ಇನ್ನೂ ಇಶ್ಯೂ ಆಗಿಲ್ಲ ಎನ್ನುವ ಮಾಹಿತಿ ನನಗೆ ಬಂದಿದೆ. ಆದರೆ ಇದರಲ್ಲಿ ಕೊನೆಯದಾಗಿ ಈಗ ನ್ಯಾಯಾಂಗ ತನಿಖೆಯ ಪರಿಣಾಮ ಏನು ಆಗುತ್ತದೆ. ಅದರ ಶಾಶ್ವತವಾದಂತಹ ಪರಿಹಾರ ಏನು? ವಿನಾಕಾರಣವಾಗಿ ಕೋಮು ದಳ್ಳುರಿಯನ್ನು ಎಬ್ಬಿಸಿ ಸಾಮರಸ್ಯದಿಂದ ಬದುಕುತ್ತಿದ್ದ ಜನಕ್ಕೆ ವಿಷಹಾಕಿ, ನಿತ್ಯ ಸಂಶಯವನ್ನು ಮೂಡಿಸಿರತಕ್ಕ ಈ ವಾತಾವರಣದಲ್ಲಿ ಸತ್ಯ ಶೋಧನೆಯ ಕೆಲಸದ ಜೊತೆಯಲ್ಲಿ ಸ್ನೇಹ, ಸೌಹಾರ್ದ, ಸಮನ್ವಯ, ಸ್ವಾತಂತ್ರ್ಯದ ಅರ್ಥ ಇದನ್ನೆಲ್ಲಾ ತಿಳಿ ಹೇಳತಕ್ಕಂಥ ಒಂದು ಶಾಶ್ವತ ವ್ಯವಸ್ಥೆ ಆಗಬೇಕು. ಏನು ಮಾಡಬೇಕು ಎಂದು ಇದ್ದೀರಿ. ಮತ್ತೆ ಜನವರಿ 26ಕ್ಕೆ ಜಗಳ ಮಾಡುವುದೇ? ಏನಾದರೂ ಒಂದು ಶಾಶ್ವತ ಪರಿಹಾರ ಬೇಕು. ಈ ಶಾಶ್ವತ ಪರಿಹಾರ ಸರ್ವೋಚ್ಚ ನ್ಯಾಯಾಲಯದ ಹೆಸರನ್ನು ಹೇಳಿ ಮುಚ್ಚಿ ಹಾಕುವುದಕ್ಕೆ ಆಗುವುದಿಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿರತಕ್ಕಂಥಾದ್ದು, ಅಲ್ಲಿ ಇವತ್ತಿಗೂ ಪ್ರೇಯರ್ ಮಾಡುತ್ತಾರೆ, ಸಾರ್ವಜನಿಕ ಸಭೆಗಳು ಆಗುತ್ತವೆ. ಅಂಗಡಿ ಕಟ್ಟತಕ್ಕ ಕೆಲಸ ಪ್ರಾರಂಭ ಆದಾಗ ಕೋರ್ಟಿಗೆ ಹೋದರು. ಅದು ಕಟ್ಟಬೇಕೇ ಬೇಡವೇ ಎನ್ನುವ ಬಗ್ಗೆ ಕೋರ್ಟಿಗೆ ಹೋದರು. ಧ್ವಜಾ ಹಾರಿಸಬೇಡಿ ಎಂದು ಸುಪ್ರೀಂ ಕೋರ್ಟು ನಿಮಗೆ ಎಲ್ಲೂ ಹೇಳಿಲ್ಲ. ಆದ್ದರಿಂದ ಶಾಶ್ವತವಾಗಿ ಅಲ್ಲಿ ಒಂದು ಪರಿಹಾರ ಬೇಕು. ಅನೇಕ ಸಂದರ್ಭದಲ್ಲಿ ಇಂತಹ ಒಂದು ಪರಿಸ್ಥಿತಿ ಬಂದಾಗ ತತ್ಕ್ಷಣ ಮಾಡುತ್ತಾ ಇದ್ದಂತಹ ಕೆಲಸ ಏನು? ಒಂದು ಶಾಂತಿ ಸಮಿತಿಯನ್ನು ನೇಮಕ ಮಾಡುವುದು. ಆ ನೇಮಕದಲ್ಲಿ ಎಲ್ಲ ಪಕ್ಷಗಳ ಪ್ರತಿನಿಧಿಗಳು ಇರುತ್ತಿದ್ದರು. ರಾಜ್ಯಮಟ್ಟದಲ್ಲಿ ನಿಮಗೆ ಸಮಿತಿ ಮಾಡಲಿಕ್ಕೆ ಸಾಧ್ಯವಾಗದೇ ಇದ್ದರೆ ಸ್ಥಳೀಯ ಮುಖಂಡರುಗಳ ಒಂದು ಶಾಂತಿ ಸಮಿತಿಯನ್ನಾದರೂ ರಚನೆ ಮಾಡಬಹುದಿತ್ತು. ಅವರಿಗೆ ನೀವು ಜವಾಬ್ದಾರಿಯನ್ನು ವಹಿಸಬಹುದಾಗಿತ್ತು. ಅಂದರೆ ನಿಮಗೆ ವಿಶ್ವಾಸ ಇರುವುದು ಗುಂಡಿನಲ್ಲಿ. ನಿಮ್ಮ ಸರ್ಕಾರಕ್ಕೆ ಇರತಕ್ಕ ವಿಶ್ವಾಸ ಗುಂಡು ಹೊಡೆಯುವುದರಲ್ಲಿ. ಅವರಿಗೆ ಇರತಕ್ಕಂಥ ವಿಶ್ವಾಸ ರಕ್ತದ ಓಕುಳಿ ಆಡುವುದು. ಮಧ್ಯೆ ಎಲ್ಲಾದರೂ ಒಂದು ಕಡೆ ನೆಮ್ಮದಿಯ ಉಸಿರು ಬಿಡತಕ್ಕ ಕೆಲವು ಜನ ಇದ್ದಾರೆ. ನಾನು ನೋಡಿದೆ, ಅನೇಕ ಜನ ಸಾಹಿತಿಗಳು, ಹಿರಿಯರು ಸೇರಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಅಂತಹ ಒಂದು ವ್ಯವಸ್ಥೆಗೆ, ಶಾಶ್ವತವಾದ ಪರಿಹಾರಕ್ಕೆ ಏನಾದರೂ ತಾವು ಯೋಚನೆ ಮಾಡಿದ್ದೀರಾ? ಆ ಪರಿಹಾರ ಸಾಧ್ಯ ಇದೆ. ಇದು ಮೈಟ್ ಈಸ್ ರೈಟ್ ಎನ್ನತಕ್ಕ ಕಾಲ ಅಲ್ಲ. ತಕ್ಷಣ ಒಂದು ಶಾಂತಿ ಸಮಿತಿಯನ್ನು ನೇಮಕ ಮಾಡಿ ಅದಕ್ಕೆ ಬೇಕಾಗಿರತಕ್ಕ ಜನ ಸೇರಿಸಿ, ಕಾಲಾವಕಾಶವನ್ನು ಕೊಟ್ಟು ಏನಾದರೂ ಪರಿಹಾರಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕದ್ದು ನನ್ನ ಒಂದು ಸಲಹೆ. ಮತ್ತೊಂದು ಸಲಹೆ, ನಾನು ಅತ್ಯಂತ ವಿನಯದಿಂದ ಮಾನ್ಯ ಯಡಿಯೂರಪ್ಪನವರನ್ನು ಪ್ರಾರ್ಥನೆ ಮಾಡುತ್ತೇನೆ. ಮೊನ್ನೆ ಒಂದು ಕಾರ್ಯಕ್ರಮ ಬೆಂಗಳೂರಿನಲ್ಲಿ ಮಾಡಿದ್ದೀರಿ; ತುಂಬಾ ಸಂತೋಷ. ಅಲ್ಲಿ ಹೊಸದಾಗಿ ನಿಮ್ಮ ಜೊತೆ ಬಂದಿರತಕ್ಕ ಜನರು ಎಲ್ಲ ನಿಮಗೆ ಏನೇನು ಘೋಷಣೆಗಳು ಇರಬೇಕು ಎಂದು ಕೆಲವನ್ನು ಹೇಳಿದ್ದಾರೆ. ಹೊಸ ಹೊಸದಾಗಿ ಸೇರಿದವರು ಹೇಳಿದ್ದಾರೆ. 'ವಂದೇಮಾತರಂ' ಮತ್ತು ಬಿಜೆಪಿ ಜಿಂದಾಬಾದ್

ಎರಡೇ. ವಂದೇಮಾತರಂ ಎನ್ನುವ ಪಡೆದ ಅರ್ಥದ ಪೂರ್ಣ ಮಾಹಿತಿ ಮತ್ತು ನಿಜವಾದ ಕಳಕಳಿ ನಿಮಗೆ ಇದ್ದರೆ, ಎಲ್ಲರೂ ಒಂದಾಗಿ ಬಾಳತಕ್ಕ ಸಂದೇಶ ನೀವು ಏನು ಕೊಟ್ಟಿರಿ, ಇದು ಏತಕ್ಕೆ ಬಂತೋ ಗೊತ್ತಿಲ್ಲ. ಸಮರ್ಪಣಾ ಸಮ್ಮೇಳನದಲ್ಲಿ ವಂದೇಮಾತರಂ ಮತ್ತು ಬಿಜೆಪಿ ಜಿಂದಾಬಾದ್. ಯಡಿಯೂರಪ್ಪನೂ ಜಿಂದಾಬಾದ್ ಇಲ್ಲ, ಚಂದ್ರೇಗೌಡನೂ ಜಿಂದಾಬಾದ್ ಇಲ್ಲ. ಬರೇ ಬಿಜೆಪಿ ಜಿಂದಾಬಾದ್. ಅದು ಜಿಂದಾಬಾದ್ ಆದರೂ ಮಾಡಲಿ. ಆದರೆ ಸಾರ್ವಜನಿಕ ಜೀವದ ಜೊತೆ ಚೆಲ್ಲಾಟ ಆಡತಕ್ಕ ಕೆಲಸ ಇದೆಯಲ್ಲಾ ಇದನ್ನು ನಿಲ್ಲಿಸಿ. ಇದು ಯಾರಿಗೂ ಕ್ಷೇಮತರತಕ್ಕ ಕೆಲಸ ಅಲ್ಲ. ಚುನಾವಣೆಗಳಲ್ಲಿ ಆಯ್ಕೆ ಆಗತಕ್ಕದ್ದಕ್ಕೆ ಇದಲ್ಲ ಆಧಾರ. ಬೇಕಾದಷ್ಟು ಸಮಸ್ಯೆಗಳು ಇವೆ. ಇಲ್ಲಿ ಅದಕ್ಕಾಗಿ ಜಗಳ ಮಾಡಿದ್ದೇವೆ, ಧರಣಿ ಮಾಡಿದ್ದೇವೆ. ಸದನವನ್ನು ಬಹಿಷ್ಕಾರ ಮಾಡಿದ್ದೇವೆ. ಕಳೆದ ಸದನದಲ್ಲಿ ಏಳು ಜನ ಅಮಾಯಕರನ್ನು ಚುನಾವಣೆ ಸಂದರ್ಭದಲ್ಲಿ ಗುಂಡು ಹಾಕಿ ಕೊಂದರು. ನ್ಯಾಯಾಂಗ ತನಿಖೆ ಮಾಡಿ ಎಂದು ಪ್ರಾರ್ಥನೆ ಮಾಡಿದೆವು. ಪ್ರೈಮಾ ಫೇಸಿ ಕೇಸ್, ಇದ್ದರೆ ಆಗುತ್ತದೆ ಎಂದರು. ಅದನ್ನು ಹುಡುಕುವುದು ಹೇಗೆ? ಪ್ರೈಮಾ ಫೇಸಿ ದಾಖಲೆ ಹುಡುಕುವುದಕ್ಕೆ ಸದನದ ಒಂದು ಸಮಿತಿ ಆಯಿತು. ಆ ಸಮಿತಿ ವರದಿ ಬಚ್ಚಿಟ್ಟಿದೆಯೋ ಬಿಚ್ಚಿಟ್ಟಿದೆಯೋ ಅದು ನಮಗೆ ಗೊತ್ತಿಲ್ಲ. ಪ್ರೈಮಾ ಫೇಸಿ ಇದೆಯೇ ಇಲ್ಲವೋ. ಇಲ್ಲಿ ಏನು ಪ್ರೈಮಾ ಫೇಸಿ ಕೇಸು ಇತ್ತು. ಅಲ್ಲೂ ಏಳು ಜನರು ಸತ್ತಿದ್ದಾರೆ, ಇಲ್ಲೂ ಏಳು ಜನರು ಸತ್ತಿದ್ದಾರೆ. ಇದಕ್ಕೆ ಯಾರನ್ನೂ ಕೇಳುವ ಹಾಗೆ ಇಲ್ಲ. ಶಾಸನಸಭೆ ನೋಟೀಸ್ ಕೊಟ್ಟಿದ್ದರೂ ಪರವಾಗಿಲ್ಲ, ನ್ಯಾಯಾಂಗ ತನಿಖೆಗೆ ಆದೇಶ ಕೊಟ್ಟರು. ಯಾರು ನಿಮ್ಮನ್ನು ಕೇಳಿದರು ಇಷ್ಟು ಆತುರವಾಗಿ ಮಾಡಿದ್ದೀರಲ್ಲ. ಮಾಡಿ ಸಂತೋಷ. ಹಾಗೆ ಅಲ್ಲ ಹಿಂದೆ ಆಯಿತಲ್ಲ. ಸದನದ ಸಮಿತಿಯ ವರದಿ ಬಂದಿದ್ದರೆ ಅಲ್ಲೂ ನ್ಯಾಯಾಂಗ ತನಿಖೆ ಮಾಡಿ. ಅಲ್ಲೂ ಪೋಲೀಸ್ ಹೈಹ್ಯಾಂಡೆಡ್ನೆಸ್ ಆಗಿದ್ದರೆ ಅದನ್ನೂ ತನಿಖೆ ಮಾಡಿಸಿ. ಆ ಸಮಿತಿ ಏನಾಯಿತೋ ನಮಗೆ ಗೊತ್ತಿಲ್ಲ. ಅದನ್ನು ತಾವು ಹೇಳಬೇಕು. ಆದ್ದರಿಂದ ನಾನು ಅಯೋಧ್ಯೆಯಲ್ಲಿ ನಡೆದ ಒಂದು ಪ್ರಕರಣದಿಂದ, ಬೊಂಬಾಯಿಯಲ್ಲಿ ಆದಂತಹ ಪ್ರಕ್ಷುಬ್ಧ ಸ್ಥಿತಿ, ಕರ್ನಾಟಕದ ಹುಬ್ಬಳ್ಳಿಯಲ್ಲಿ ಆದಂತಹ ಘಟನೆ- 15ನೇ ತಾರೀಖು ಒಂದು, 19ನೇ ತಾರೀಖು ಮತ್ತೊಂದು. ಯಾವನು ಸಿಕ್ಕವನಿಗೆ ಬೇಕಾದರೂ ಹೊಡೆಯಬಹುದು, ಯಾವನಿಗೆ ಕೋವಿ ಸಿಗುತ್ತದೆ ಅವನು ಹೊಡೆಯುವುದು. ಒಬ್ಬ ಡ್ರೈವರ್ ಕೋವಿ ತೆಗೆದುಕೊಂಡು ಗುಂಡು ಹಾಕಿದ. ಇದರ ಪರಿಣಾಮ ಏನು ಶ್ರೀಮಾನ್ ಗುಂಡೂರಾಯರ ಸರ್ಕಾರ ಹೀಗೆ 139 ಜನರನ್ನು ಗುಂಡಿಗೆ ಬಲಿ ತೆಗೆದುಕೊಂಡ ಪರಿಣಾಮ ಏನು ಆಯಿತೋ ಅದೇ ಪರಿಣಾಮ ಈಗಲೂ ಆಗುತ್ತದೆ. ಅಂದು ರೈತ ಸಮುದಾಯದ ಮೇಲೆ ಆಯಿತು. ಇಂದು ಯಾವುದೇ ಪಕ್ಷಕ್ಕೆ ಸೇರದೇ ಇರತಕ್ಕಂಥ ಮುಗ್ಧ ಜನಗಳ ಜೀವ ಹಾನಿ ಆಯಿತು. 19ನೇ ತಾರೀಖು, ಪೋಲೀಸ್ ಪೇದೆನೂ ಅಲ್ಲ, ಪ್ರಚೋದನೆಯೂ ಇಲ್ಲ. ಸಸ್ಪೆಂಡ್ ಮಾಡಿದ್ದೇವೆಂದರೆ ಅವನೇ ಮಾಡಿದ್ದಾನೆಂದು ಅರ್ಥ. ಅವನ ಕೈಗೆ ಕೋವಿ ಗುಂಡು ಸಿಗುತ್ತದೆ, ಹೊಡೆಯುತ್ತಾನೆ ಒಬ್ಬನನ್ನು ಕೊಂದು ಹಾಕುತ್ತಾನೆ.

3.55 ಪಿ.ಎಂ.

ಪಾಪ, ನಿರುಪದ್ರವಿ ಹೆಂಗಸು ಸತ್ತಳು. ಅದರ ಪ್ರತಿಬಿಂಬ ಭದ್ರಾವತಿಯಲ್ಲಾಯಿತು. ಆಗ ಪೋಲಿಸ್ ಇಲಾಖೆಯವರು ಭದ್ರಾವತಿಯಲ್ಲಿ ತೆಗೆದುಕೊಂಡ ಮುಂಜಾಗ್ರತಾ ಕ್ರಮವನ್ನು ನಾನು ಮೆಚ್ಚುತ್ತೇನೆ, ಅಲ್ಲಿ ನಡೆಯದಷ್ಟು ಪ್ರಮಾಣದಲ್ಲಿ ಇಲ್ಲಿ ಗಲಭೆ ನಡೆಯಲಿಲ್ಲ. ಆದರೂ ಮೂರು ಜನರ ಜೀವಹಾನಿಯಾಯಿತು. ಜೀವ ಹೋಯಿತು. ಸತ್ತವರ ಕುಟುಂಬಕ್ಕೆಲ್ಲಾ ಸರ್ಕಾರ ಪರಿಹಾರವಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತದೆ. ಗೋಲಿಬಾರ್ನಲ್ಲಿ ಸತ್ತವರಿಗೆಲ್ಲಾ ಪರಿಹಾರವಾಗಿ 1 ಲಕ್ಷ ರೂಪಾಯಿ, ಪ್ರಕೃತಿ

ವಿಕೋಪದಿಂದೇನಾದರೂ ಪ್ರಾಣಹಾನಿಯಾದರೆ ಒಂದೂವರೆ ಲಕ್ಷ ರೂಪಾಯಿಗಳು ಪ್ರಧಾನಮಂತ್ರಿಯವರ ಪರಿಹಾರ ನಿಧಿಯಿಂದ ಕೊಡಲಾಗುತ್ತದೆ. ಆದರೆ, ಜೀವವನ್ನು ಕಳೆದುಕೊಂಡಿರತಕ್ಕ ಅಮಾಯಕರಿದ್ದಾರಲ್ಲಾ, ಅವರಿಗೆ ನೀವು ಅದನ್ನು ಮತ್ತೆ ತುಂಬಿಸಿಕೊಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಹಣದ ರೂಪದಲ್ಲಿ ಅಳತೆ ಮಾಡುವ ಕ್ರಮವನ್ನು ಬಿಟ್ಟು ಶಾಶ್ವತವಾದ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಇಂತಹ ಪರಿಸ್ಥಿತಿಗೆ ಕಾರಣರಾದವರನ್ನು ನಾವು ಏನು ಮಾಡಬಹುದು? ಯಡಿಯೂರಪ್ಪನವರನ್ನು ಮತ್ತವರ ಮಿತ್ರರನ್ನು ಕ್ಷಮಾಪಣೆ ಕೇಳಿ ಎಂದು ಹೇಳುವುದಿಲ್ಲ. ಆ ಕಾಲ ಅವರಿಗೆ ಬರುತ್ತದೆ. ಜನರು ತೀರ್ಮಾನ ಮಾಡುತ್ತಾರೆ, ಆ ದಿವಸ ಬಹಳ ದೂರ ಇಲ್ಲ. ಬರುವ ಮೂರು ತಿಂಗಳಲ್ಲಿ ಜನರೇ ನಿರ್ಣಯ ಮಾಡುತ್ತಾರೆ. ಯಡಿಯೂರಪ್ಪನವರೆ, ನಾವು ನೀವು ಸದನಕ್ಕೆ ಬಂದರೆ ಚರ್ಚೆ ಮಾಡಬಹುದು. ಸದನಕ್ಕೆ ಬರದಿದ್ದರೆ ಯಾರ ಜೊತೆ ಚರ್ಚೆ ಮಾಡಬೇಕು? ಮಾನ್ಯ ಅಧ್ಯಕ್ಷರೆ, ಒಂದು ಶಾಶ್ವತವಾದ ಸಮಿತಿಯನ್ನು ನೇಮಕ ಮಾಡಬೇಕು, ಆ ಸಮಿತಿಯ ಮೂಲಕ ಇದಕ್ಕೊಂದು ಶಾಶ್ವತವಾದ ಪರಿಹಾರ ಕೊಡತಕ್ಕಂಥ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಅಂತಹ ಕೆಲಸಕ್ಕೆ ನಮ್ಮ ಸಂಪೂರ್ಣ ಸಹಕಾರ, ಬೆಂಬಲ ಇದೆ. ಆದ್ದರಿಂದ, ಒಟ್ಟಾರೆ ಹೇಳಬೇಕೆಂದರೆ, ಅವರ ರಕ್ತದಾಹಕ್ಕಾಗಲಿ, ಗುಂಡಿನ ತೃಪ್ತಿಗಾಗಲಿ ಇಂತಹ ಸ್ವಾತಂತ್ರ್ಯ ದಿನಾಚರಣೆಯಂಥ ದಿನವನ್ನು ಬಳಕೆ ಮಾಡಿಕೊಳ್ಳಬೇಡಿ ಎಂದು ನಿಮ್ಮಲ್ಲಿ ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಆಗಸ್ಟ್ 15ರಂದು ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವಂಥ ಸಂದರ್ಭದಲ್ಲಿ ನಡೆದಂಥ ಘಟನೆ ಬಗ್ಗೆ, ಆಗಿರುವ ಗೋಲಿಬಾರ್ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವುದಕ್ಕಾಗಿ ತಮಗೆ ಒಂದು ನಿಲುವಳಿ ಸೂಚನೆ ಕಳುಹಿಸಿಕೊಟ್ಟಾಗ ಇದರ ಗಂಭೀರತೆಯನ್ನು ಅರ್ಥಮಾಡಿಕೊಂಡು ನಮಗೆ ಸದನದಲ್ಲಿ ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು ಮತ್ತು ಚಂದ್ರೇಗೌಡರು ಈ ಘಟನೆ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲುವಂಥ ಪ್ರಯತ್ನ ಮಾಡಿದ್ದಾರೆ. ಇವೊತ್ತು ಐದು ಜನ ಅಮಾಯಕರ ಹತ್ಯೆಯಾಗಿರುವಂಥ ಸಂದರ್ಭದಲ್ಲಿ ತುಂಬ ಗಂಭೀರವಾಗಿ, ಬಿಚ್ಚು ಮನಸ್ಸಿನಿಂದ, ಈ ನಾಡಿನ ಜನರ ಹಿತದೃಷ್ಟಿಯಿಂದ ಇದರ ಬಗ್ಗೆ ಸದನದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಯಾರ ಕಡೆಯಿಂದ ತಪ್ಪಾಗಿದ್ದರೂ ಕೂಡ ತಿದ್ದಿಕೊಂಡು ಈ ನಾಡಿನ ಜನರ ಕಲ್ಯಾಣಕ್ಕಾಗಿ ಯೋಚನೆ, ಚಿಂತನೆ ಮಾಡಬೇಕಾದಂಥ ಸಂದರ್ಭ ಇಲ್ಲಿರತಕ್ಕಂಥ ಎಲ್ಲಾ ಸದಸ್ಯರ ಕರ್ತವ್ಯವೆಂದು ನಾನೂ ಕೂಡ ತಿಳಿದುಕೊಂಡಿದ್ದೇನೆ. ಈ ಘಟನೆ ಏತಕ್ಕೋಸ್ಕರ ಪ್ರಾರಂಭವಾಯಿತು? ಯಾವ ಕಾರಣಕ್ಕಾಗಿ ಉದ್ಭವವಾಯಿತು? ತಮಗೆಲ್ಲರಿಗೂ ಗೊತ್ತಿರುವಂತೆ, ಜನವರಿ 26, 1992 ರಂದು ಶ್ರೀನಗರದ ಲಾಲ್ಚೌಕದಲ್ಲಿ ನಾವುಗಳೆಲ್ಲರೂ ತಲೆತಗ್ಗಿಸುವಂಥ ಘಟನೆ ನಡೆಯಿತು. ಏನೆಂದರೆ, ನಮ್ಮ ದೇಶದ ಭೂಭಾಗದಲ್ಲಿ ಅನೇಕ ವರ್ಷಗಳಿಂದ ನಮ್ಮ ದೇಶದ ರಾಷ್ಟ್ರಧ್ವಜ ಹಾರದೆ ಪಾಕಿಸ್ತಾನದ ಧ್ವಜ ಹಾರುತ್ತಿತ್ತು. ಲಾಲ್ಚೌಕದಲ್ಲಿ ನಮ್ಮ ರಾಷ್ಟ್ರಧ್ವಜವನ್ನು ಹಾರಿಸಬೇಕೆಂದು ಇಡೀ ರಾಜ್ಯಾದ್ಯಂತ, ರಾಷ್ಟ್ರಾದ್ಯಂತ ಭಾರತೀಯ ಜನತಾ ಪಾರ್ಟಿಯ ಮುಖಂಡರುಗಳು ಇದು ತಮ್ಮ ಕರ್ತವ್ಯವೆಂದು ತಿಳಿದುಕೊಂಡು ದೇಶಾದ್ಯಂತ ಜನ ಜಾಗರಣ ಅಭಿಯಾನವನ್ನು ಕೈಗೊಳ್ಳಲಾಯಿತು. ಅಭಿಯಾನದಲ್ಲಿ ನಾನೂ ಸಹ ಇದ್ದು ಜಮ್ಮುವಿಗೆ ಜನವರಿ, 25 1992ರಂದು ಹೋದೆವು, ಅಭಿಯಾನದಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು. ದೇಶದ ಪ್ರಧಾನಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ರವರು

ಈ ಸಂದರ್ಭದಲ್ಲಿ ಹೇಳಿದ್ದರು. ಶ್ರೀನಗರದಲ್ಲಿ ಉಗ್ರಗಾಮಿಗಳ ತಾಂಡವನೃತ್ಯ ನಡೆಯುತ್ತಿದೆ.

ನಿಮ್ಮೆಲ್ಲರನ್ನೂ ರಾಷ್ಟ್ರ ಧ್ವಜವನ್ನು ಹಾರಿಸಲು ಅಲ್ಲಿಗೆ ಕಳಿಸುವುದಿಲ್ಲವೆಂದು ನಮಗೆ ಅಡ್ಡಿ ಪಡಿಸಿ, ಬಂಧಿಸಿ ಸರ್ಕಾರವೇ ಒಂದು ವಿಶೇಷವಾದಂಥ ವಿಮಾನವನ್ನು ಕೊಟ್ಟು 72 ಜನ ಬಿ.ಜೆ.ಪಿ.ಯ ರಾಷ್ಟ್ರಮಟ್ಟದ ನಾಯಕರನ್ನು ಅಲ್ಲಿಗೆ ರಾಷ್ಟ್ರಧ್ವಜವನ್ನು ಹಾರಿಸಲು ಕಳಿಸಿದರು. ನಾವು ರಾಷ್ಟ್ರ ಧ್ವಜವನ್ನು ಅಲ್ಲಿ ಹಾರಿಸಿದೆವು. ನಾವು ಯಾವ ರೀತಿ ಅಲ್ಲಿಗೆ ಹೋದೆವು, ಉಗ್ರಗಾಮಿಗಳ ಭಯೋತ್ಪಾದನೆಯ ಪರಿಸ್ಥಿತಿ ಏನಿತ್ತು, ಈ ಅಪಮಾನಕರವಾದ ಘಟನೆಯನ್ನು ನಾವು ಸಹಿಸಲು ಸಿದ್ಧರಾಗಿಲ್ಲವೆಂದು ನಾವು ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದೆವು, ಸನ್ಮಾನ್ಯ ವಿ.ಪಿ. ಸಿಂಗ್ರವರು ಪ್ರಧಾನಮಂತ್ರಿಗಳಾಗಿದ್ದ ಕಾಲದಲ್ಲಿಯೂ ಸಹ ಸಾವಿರಾರು ಜನ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ರಾಷ್ಟ್ರಧ್ವಜವನ್ನು ಹಾರಿಸಲು ಇದೇ ಸಂದರ್ಭದಲ್ಲಿ ಜಮ್ಮುವಿನ ಹತ್ತಿರ ಹೋಗಿದ್ದರು. ಆವತ್ತು ವಿ.ಪಿ. ಸಿಂಗ್ರವರು ನೀವು ಅಲ್ಲಿ ರಾಷ್ಟ್ರ ಧ್ವಜವನ್ನಾರಿಸಲು ಹೋಗಿ ಉಗ್ರಗಾಮಿಗಳ ಗುಂಡಿಗೆ ಬಲಿಯಾಗುವುದು ಬೇಡ ಆ ಕೆಲಸವನ್ನು ನಾವು ಮಾಡುತ್ತೇವೆಂದು ಹೇಳಿದ್ದರು. ಆದರೆ ಅವರು ಮಾಡಲಿಲ್ಲ. ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ನರಸಿಂಹರಾಯರು ಮಾಡಲು ಆಗದೇ ಇದ್ದರೂ ಸಹ ಕೊನೆಯಪಕ್ಷ ಕಳಂಕಿತ ಘಟನೆ ನಡೆಯಬಾರದು ಎಂದು ಬಿಜೆಪಿ ನಾಯಕರ ವಿಚಾರಕ್ಕೆ ಮನ್ನಣೆಯನ್ನು ಕೊಟ್ಟು ವಿಶೇಷವಾದ ವಿಮಾನವನ್ನು ಕೊಟ್ಟು ಅಲ್ಲಿ ರಾಷ್ಟ್ರಧ್ವಜವನ್ನಾರಿಸಲು ಅವಕಾಶ ಮಾಡಿಕೊಟ್ಟದ್ದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಅಧ್ಯಕ್ಷರೆ, ಜನವರಿ 26 ಗಣರಾಜ್ಯೋತ್ಸವದ ದಿವಸ, ಆಗಸ್ಟ್ 15 ಸ್ವಾತಂತ್ರ್ಯ ಬಂದದಿವಸ ಯಾರು ಎಲ್ಲಿ ಬೇಕಾದರೂ ಈ ದೇಶದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲು ಅವಕಾಶವಿದೆ. ಅದು ಸಂವಿಧಾನದ ಚೌಕಟ್ಟಿನಲ್ಲಿ ನಮಗೆ ಸಿಕ್ಕಿರತಕ್ಕ ಅಧಿಕಾರ. ಈ ಭೂಮಿಯ ಯಾವುದಾದರೂ ಒಂದು ಇಂಚಿನಲ್ಲಿ ರಾಷ್ಟ್ರ ಧ್ವಜವನ್ನು ಬಿಡುವವುದಿಲ್ಲವೆಂದು ಹೇಳತಕ್ಕದ್ದು ಒಂದು ಅಪರಾಧವಾಗುತ್ತದೆ. ರಾಷ್ಟ್ರ ಧ್ವಜವನ್ನು ಹಾರಿಸತಕ್ಕ ಕೆಲಸ ದೇಶಭಕ್ತರು, ದೇಶಾಭಿಮಾನಿಗಳು, ರಾಷ್ಟ್ರಭಕ್ತರು ಮಾಡತಕ್ಕ ಕೆಲಸ. ಆ ರೀತಿ ಗೊಂದಲ ಸ್ವಾತಂತ್ರ್ಯ ಬಂದಾಗಿನಿಂದ ಇಂದಿನವರೆಗೆ ಎಲ್ಲೂ ಇಲ್ಲ. ಆವತ್ತು ಎಲ್ಲಾ ಕಡೆ ರಾಷ್ಟ್ರ ಧ್ವಜವನ್ನು ಹಾರಿಸತಕ್ಕ ಸಂಭ್ರಮದ ದಿನ, ಜನವರಿ 26 1992ರಂದು ದೆಹಲಿಯ ಕೆಂಪುಕೋಟೆಯಲ್ಲಿ ರಾಷ್ಟ್ರಧ್ವಜ ಹಾರುತ್ತದೆಯೇ ಎನ್ನುವ ಬಗ್ಗೆ ಜನರು ನೋಡುತ್ತಿರಲಿಲ್ಲ, ಆದರೆ ಶ್ರೀನಗರದ ಲಾಲ್ಚೌಕದಲ್ಲಿ ರಾಷ್ಟ್ರ ಧ್ವಜ ಹಾರುತ್ತದೆಯೇ, ಇಲ್ಲವೋ ಎಂಬುದನ್ನು ದೇಶದ ಮತ್ತು ಪ್ರಪಂಚದ ಜನರು ನೋಡುತ್ತಿದ್ದಂಥ ಒಂದು ವಿಶೇಷವಾದಂಥ ಸಂದರ್ಭ. ಜನವರಿ 26, 1992ರಂದು ದೇಶದ ಎಲ್ಲಾ ಕಡೆ ಜನರು ಸಂಭ್ರಮದಿಂದ ರಾಷ್ಟ್ರಧ್ವಜವನ್ನು ಹಾರಿಸುತ್ತಿದ್ದರು. ಆ ಹುಬ್ಬಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮನ ಮೈದಾನವೂ ಅಥವಾ ನಮ್ಮ ಮುಸ್ಲಿಂ ಬಂಧುಗಳು ಕರೆಯತಕ್ಕ ಈದ್ಗಾ ಮೈದಾನದಲ್ಲೂ ಕೆಲವು ಯುವಕರು ಹೋಗಿ ಅಲ್ಲಿ ರಾಷ್ಟ್ರ ಧ್ವಜವನ್ನೂ ಹಾರಿಸಿ ಬರುತ್ತಿದ್ದರು.

(ಗೊಂದಲ)

Sri Qamarul Islam : I raise a point of order. It is Idga Maidan. I want to know from the Hon'ble Member when it has been declared as 'Rani Chennamma Maidan'. Why is he trying to misled the House by saying this? I want to know, there is a municipality. Unnecessarily he is trying to create 'Rani Chennamma Maidan'. Again a feeling has been created that we do not like Rani Chennamma. Rani Chennamma is a freedom fighter for us.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಪಾಯಿಂಟ್ ಆಫ್ ಆರ್ಡರ್. ಏಕೆ ನಾನು ಪಾಯಿಂಟ್ ಆಫ್ ಆರ್ಡರ್ ಕೇಳಿದ್ದೇನೆಂದರೆ, ನಮ್ಮ ಚರ್ಚೆ ಯಾವುದಾದರೂ ಆರ್ಡರನ್ನು ಹೋಗುತ್ತಿದೆಯೇ? ನಮಗೆ ರಾಣಿಚೆನ್ನಮ್ಮನ ಮೈದಾನದ ಬಗ್ಗೆ ಕಮರುಲ್‌ಇಸ್ಲಾಂರವರು ಕ್ಲಾರಿಫಿಕೇಷನ್ ಕೇಳಿದರು. ನಾನು ಮತ್ತೊಂದು ವಿಷಯದ ಬಗ್ಗೆ ಒಂದು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ಅಶೋಕ ಚಕ್ರವಿರತಕ್ಕ ತ್ರಿವರ್ಣ ಧ್ವಜವನ್ನು ನಮ್ಮ ಬಿಜೆಪಿ ಸ್ನೇಹಿತರು ರಾಷ್ಟ್ರಧ್ವಜವೆಂದು ಸ್ವೀಕರಿಸುತ್ತಾರೋ ಪುರಸ್ಕರಿಸುತ್ತಾರೋ ಅದನ್ನು ಬೇಶರತ್ತಾಗಿ ನಮ್ಮ ಸಭೆಗೆ ಹೇಳಬೇಕು, ಅದನ್ನು ಹೇಳಿದ ನಂತರ ನಮ್ಮ ಚರ್ಚೆಗೆ ಅರ್ಥ ಬರುತ್ತದೆ. ಇಲ್ಲದಿದ್ದರೆ ಬರುವುದಿಲ್ಲ. ಅಶೋಕ ಚಕ್ರವಿರುವ ತ್ರಿವರ್ಣ ಧ್ವಜವನ್ನು ನಮ್ಮ ಬಿಜೆಪಿಯವರು, ರಾಷ್ಟ್ರೀಯ ಸ್ವಯಂ ಸೇವಕರು, ಸಂಘಪರಿವಾರದವರು ರಾಷ್ಟ್ರ ಧ್ವಜವೆಂದು ಸ್ವೀಕರಿಸುತ್ತಾರೆಯೇ? ಮನ್ನಣೆ ಮಾಡುತ್ತಾರೆ? ಅದಕ್ಕೆ ಗೌರವವನ್ನು ಕೊಡುತ್ತಾರೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರಾದರೂ ಒಬ್ಬ ವ್ಯಕ್ತಿ ಅಶೋಕ ಚಕ್ರವಿರುವ ತ್ರಿವರ್ಣ ಧ್ವಜವನ್ನು ರಾಷ್ಟ್ರ ಧ್ವಜವೆಂದು ಒಪ್ಪಿಕೊಳ್ಳದಿದ್ದರೆ ಅವನು ಒಂದು ಕ್ಷಣ ಈ ದೇಶದಲ್ಲಿ ಬದುಕಲು ಸಾಧ್ಯವಿಲ್ಲ. ಅವನು ದೇಶದ್ರೋಹಿಯಾಗುತ್ತಾನೆ. ಆದ್ದರಿಂದ ಈ ದೇಶದಲ್ಲಿ ಬದುಕತಕ್ಕ ಪ್ರತಿಯೊಬ್ಬ ವ್ಯಕ್ತಿ ದೇಶಪ್ರೇಮಿಯಾಗಿದ್ದರೆ ಈ ದೇಶದ ಸಂವಿಧಾನದ ಚೌಕಟ್ಟಿನಲ್ಲಿ ಬಾಳಿ ಬದುಕಬೇಕೆಂಬ ಕಳಕಳಿ ಇದ್ದರೆ ಈ ಎಲ್ಲಾ ಸಂಗತಿಗಳ ಬಗ್ಗೆ ಅವನು ಗೌರವವನ್ನು ಕೊಡಬೇಕು. ಇಲ್ಲದಿದ್ದರೆ ಅವನು ದೊಡ್ಡ ಅಪರಾಧಿಯಾಗುತ್ತಾನೆ, ದೇಶದ್ರೋಹಿ ಆಗುತ್ತಾನೆ. ಇವತ್ತು ಬಿ.ಜೆ.ಪಿ.ಗೆ ಯಾರು ಕಾಂಗ್ರೆಸ್ಗೆ ದೇಶದಲ್ಲಿ ಪರ್ಯಾಯವಾಗಿ ಬೆಳೆಯುತ್ತಿರುವಂತಹ ಈ ಭಾಷೆಗೆ....

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಗಣರಾಜ್ಯೋತ್ಸವದಂದು, ಸ್ವಾತಂತ್ರ್ಯ ದಿನಾಚಾರಣೆಯಂದು ಬಾವುಟ ಹಾರಿಸಿದರೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆದುದರಿಂದ ಇವತ್ತು ಭಾರತೀಯ ಜನತಾ ಪಾರ್ಟಿಗೆ ಈ ರಾಷ್ಟ್ರದ ಧ್ವಜವನ್ನು ಯಾರು ಹಾರಿಸಬೇಕು, ಯಾರು ಹಾರಿಸಬಾರದು ಎಂಬುದನ್ನು ಭಾರತೀಯ ಜನತಾ ಪಕ್ಷ ಅದು ರಾಷ್ಟ್ರಧ್ವಜವೆಂದು ಒಪ್ಪುತ್ತಾರೊ ಇಲ್ಲವೊ ಎನ್ನುವ ಮಾತನ್ನು ದೇಶಭಕ್ತ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರಿಗೆ ಈ ಸದನದಲ್ಲಿರುವಂತಹ ಯಾರಿಂದಲೂ ನಾವು ಪಾಠ ಕಲಿಯುವಂತಹ ಪರಿಸ್ಥಿತಿ ನಮಗೆ ಬಂದಿಲ್ಲ. ಇವತ್ತು ನಮ್ಮ ಪಾರ್ಟಿ ದೇಶದ ಏಕತೆ, ಅಖಂಡತೆ ಮತ್ತು ಸಮಗ್ರತೆಗೋಸ್ಕರ ಹೋರಾಟ ಮಾಡುತ್ತಿರುವಂತಹ ಪಾರ್ಟಿ. ನಮ್ಮ ಪಾರ್ಟಿ ನೇಷನ್ಸ್ ಫಸ್ಟ್ ಪಾರ್ಟಿ, ನಮ್ಮ ಪ್ರಿಯಾರಿಟಿ ದೇಶ ಮೊದಲು, ಆಮೇಲೆ ರಾಜ್ಯ.

ಶ್ರೀ ಎಂ. ವೀರಪ್ಪ ಮೊಯಿಲಿ : ನಂಬುವ ಹಾಗೆ ಮಾತನಾಡಬೇಕು....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಆಶ್ಚರ್ಯವಾಗುತ್ತದೆ. ಈ ಸದನವನ್ನು ನೋಡಿದಾಗ..

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕ ವಿಷಯಗಳನ್ನು ನಾನು ಬಹಿರಂಗ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ನಾನು ಗಂಭೀರವಾಗಿ ಪ್ರಮುಖವಾದ ವಿಚಾರವನ್ನು ಚರ್ಚೆ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಂಬುವ ಹಾಗೆ ಮಾತನಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮುಖ್ಯಮಂತ್ರಿಗಳು ನಂಬುವ ಹಾಗೆ ಮಾತನಾಡಬೇಕೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಮೂಲ ಸಮಸ್ಯೆಯನ್ನು ತಿಳಿದುಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ :ಯಡಿಯೂರಪ್ಪನವರೇ ತಾವು ಹೇಳಿದ್ದುದು ನಗುವ ವಿಚಾರವಲ್ಲ. ತಾವು ಗಂಭೀರವಾದ ವಿಚಾರವನ್ನು ಹೇಳಿದ್ದು ಅದನ್ನು ತಾವು ನಂಬುವ ಹಾಗೆ ಇಂಪ್ರೆಸ್ ಮಾಡಿ ಎಂದು ಹೇಳಿದೆ. ಅದರಲ್ಲಿ ಏನಾದರೂ ತಪ್ಪು ಇದೆಯೇ? I wanted you to impress all these people about what you stand for and what you mean by it. ಈ ಸದನದ ಮೂಲಕ ನಾಡಿನ ಜನತೆಗೆ, ದೇಶದ ಜನರಿಗೆ ಗೊತ್ತಾದರೆ ಬಹುಶಃ ಅದಕ್ಕಿಂತ ದೊಡ್ಡ ಸಾಧನೆ ಬಿ.ಜೆ.ಪಿ.ಯವರು ಬೇರೆ ಯಾವುದನ್ನು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ತಮಗೆ ನಾನು ವಿರುದ್ಧವಾಗಿ ಮಾತನಾಡುತ್ತಿಲ್ಲ. ಏಕೆಂದರೆ ತಾವು ಇವತ್ತು....,

ಶ್ರೀ ವಾಟಾಳ್ ನಾಗರಾಜ್ : ನೀವು ಇಬ್ಬರೂ ಇಷ್ಟು ಒಂದಾಗಿದ್ದೀರಿ ಎಂಬುದು ಯಾರಿಗೂ ಗೊತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಅರ್ಥವಾಗದಿರುವಂತಹ ಸಂಗತಿ ಎಂದರೆ ಒಂದು ಕಾಲದಲ್ಲಿ ಕಾಂಗ್ರೆಸ್ನ ಸ್ನೇಹಿತರ ವಿರುದ್ಧ ಬೇರೆ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ಹೋರಾಟ ಮಾಡುವಂತಹ ಕಾಲ ಇತ್ತು. ಆದರೆ ಈ ಸದನದ ಒಳಗೆ ನೋಡುತ್ತಿದ್ದೇನೆ. ದೇಶದ ರಾಜಕೀಯ ಪ್ರಚಲಿತ ಸ್ಥಿತಿಯನ್ನು ಇವತ್ತು ನಾನು ಗಮನಿಸುತ್ತಿದ್ದೇನೆ. ಭಾರತೀಯ ಜನತಾ ಪಕ್ಷದ ವಿರುದ್ಧ ಬೇರೆ ಎಲ್ಲಾ ಪಕ್ಷಗಳು ಒಂದಾಗಿ ಹೋರಾಟ ಮಾಡುವಂತಹ ಪರಿಸ್ಥಿತಿ ಇದೆ. ಈ ರೀತಿ ಭಾರತೀಯ ಜನತಾ ಪಕ್ಷದ ವಿಚಾರಗಳಿಗೆ ಈ ದೇಶದ ಜನರು ಮನ್ನಣೆ ಕೊಡುತ್ತಿದ್ದಾರೆ ಎನ್ನುವಂತಹ ಸಂಕಟ ಇವರನ್ನು ಕಾಡುತ್ತಿದೆ. ಒಂದು ಕಾಲದಲ್ಲಿ it was Congress-Vs-all other parties but now it is BJP-Vs-all other parties. ಸ್ವಾಮಿ, ಇವರು ಮಾತನಾಡುತ್ತಾರಲ್ಲಾ, ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲಿ ಅಧಿಕೃತ ವಿರೋಧ ಪಕ್ಷದ ನಾಯಕರು ಯಾರು? ಈ ದೇಶದಲ್ಲಿ ಕಾಂಗ್ರೆಸ್ ಇವತ್ತು ಓಟು ಬ್ಯಾಂಕ್ ರಾಜಕಾರಣ ಮಾಡಿಕೊಂಡು ಬರುತ್ತಿದ್ದಾರೆ, ಇದರ ಪರಿಣಾಮ ಒಂದು ರೀಜನಲ್ ಪಾರ್ಟಿಯಾಗಿ ಪರಿವರ್ತನೆಯಾಗುತ್ತಿದೆ. ಇದರ ಅರಿವು ಇದೆಯೇ? ಶ್ರೀ ದೇಶಪಾಂಡೆಯವರು ಎಲ್ಲ ಹೇಳಿದ್ದಾರೆ. ಅನೇಕ ವಿಷಯಗಳನ್ನು ನಾವು ಮಾತನಾಡಿದ್ದೇವೆ. ದೇಶಪಾಂಡೆಯವರು ಮಾತನಾಡಿದರು ಉತ್ತರ ರಾಜ್ಯಗಳಲ್ಲಿ ಇವರ ಪಾರ್ಟಿ ನಿರ್ನಾಮವಾಯಿತೆಂದು ಹೇಳಿದರು.

ಮಾನ್ಯ ಚಂದ್ರೇಗೌಡರು ಮಾತನಾಡಿದರು. ಸ್ವಾಮಿ ನಾನು ಹೇಳುತ್ತೇನೆ, ಉತ್ತರದಲ್ಲಿ ಏನಾಯಿತು ಎಂದು ನೀವು ಪ್ರಾಮಾಣಿಕವಾಗಿ ನೋಡಿಕೊಳ್ಳಬೇಕಲ್ಲ, ಸತ್ಯಸಂಗತಿಯನ್ನು ಹೇಳಬೇಕಲ್ಲ, ಸ್ವಾಮಿ, 5ರಾಜ್ಯಗಳಲ್ಲಿ 1028ವಿಧಾನ ಸಭಾ ಕ್ಷೇತ್ರಗಳಿಗೆ ಚುನಾವಣೆಯಾದರೆ ನಮ್ಮ ಭಾರತೀಯ ಜನತಾಪಾರ್ಟಿ 448 ಕ್ಷೇತ್ರದಲ್ಲಿ ಗೆದ್ದಿದ್ದರೆ, ಕಾಂಗ್ರೆಸ್ಸ್ ಗೆದ್ದಿರುವುದು ಕೇವಲ 348 ಕ್ಷೇತ್ರಗಳಲ್ಲಿ ಮಾತ್ರ. ಇಂಡಿಯಾ ಟುಡೇ ಪೇಪರ್ ತೆಗೆದು ನೋಡಿ, 36 ಪರ್ಸೆಂಟ್ ಓಟು ಬಿಜೆಪಿಗೆ ಬಂದಿದೆ. ನಿಮ್ಮ ಕಾಂಗ್ರೆಸ್ಗೆ ಬಂದಿರುವುದು 26

ಪರ್ಸೆಂಟ್. ನಮ್ಮ ಜನತಾ ದಳದವರು ಇಲ್ಲಿ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. 24 ಸೀಟ್ ತೆಗೆದುಕೊಂಡು ಏಳೂವರೆ ಪರ್ಸೆಂಟ್ ಇದ್ದೀರಿ. ಮಾನ್ಯ ದೇಶಪಾಂಡೆಯವರು ಹೇಳಿದರು, ಅದಕ್ಕೋಸ್ಕರ ಇವತ್ತು ಇವರಿಗೆ ಏಕೆ ಸಂಕಟ. 4 ಜನ ಶಾಸಕರು ಇರುವಂತಹ ಈ ಪಾರ್ಟಿ ನಾಳೆ ಅಧಿಕಾರದಲ್ಲಿ ಬರುವಂತಹ ಮಾತನ್ನು ರಾಜ್ಯದ ಜನ ಮಾತನಾಡುತ್ತಿದ್ದಾರೆ, ಇದು ಈ ರೀತಿ ಬೆಳೆಯುತ್ತಿದೆಯಲ್ಲ ಎನ್ನುವಂತಹ ಸಂಕಟ ನಿಮಗೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮೂರು ಪರ್ಸೆಂಟ್ ಓಟು ತೆಗೆದುಕೊಂಡು ಒಂದು ಈ ಪಾರ್ಟಿ ಈ ನಾಡಿನ ರೈತರ, ಕೃಷಿ ಕಾರ್ಮಿಕರ, ಹರಿಜನ ಗಿರಿಜನರ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟ ಮಾಡಿ, ಮೊನ್ನೆ ನಡೆದಂತಹ ಲೋಕಸಭಾ ಚುನಾವಣೆಯಲ್ಲಿ 31 ಪರ್ಸೆಂಟ್ ಓಟು ತೆಗೆದುಕೊಂಡಿದೆ ಎಂದು ನಿಮಗೆ ಸಂಕಟ. ಮೊನ್ನೆ ನಡೆದಂತಹ ಪದವೀಧರ, ಶಿಕ್ಷಕರ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡಿರಿ. ಆಡಳಿತ ಪಕ್ಷವಾಗಿ ಒಂದು ಸೀಟೂ ಗೆಲ್ಲಲಿಲ್ಲ. ನಾನು ಏಕೆ ಹೇಳುತ್ತೇನೆ ನೀವು ಹೇಳುವುದು ಸರಿ. ಬಿಜೆಪಿಯ ವಿಚಾರ ಒಪ್ಪಿ ಎಂದು ನಾನು ಹೇಳುತ್ತಿಲ್ಲ. ನಿಮ್ಮ ತತ್ವ, ನಿಮ್ಮ ನೀತಿ, ನಿಮ್ಮ ಸಿದ್ಧಾಂತವನ್ನು ನೀವು ಹೇಳಿ, ನಮ್ಮದು ಏನಿದೆ ಅದನ್ನು ನಾವು ಹೇಳುತ್ತೇವೆ. ಈ ದೇಶದ ಜನ ಈ ದೇಶದ ಮಾಲೀಕರು, ಈ ರಾಜ್ಯದ ಜನ ಈ ರಾಜ್ಯದ ಮಾಲೀಕರಿದ್ದಾರೆ. ಇದು ನಮ್ಮ ನಿಮ್ಮ ಯಾರ ಅಪ್ಪನ ಆಸ್ತಿಯೂ ಅಲ್ಲ. ಇದರ ಮಾಲೀಕರು ಈ ರಾಜ್ಯದ ನಾಲ್ಕೂವರೆ ಕೋಟಿ ಜನ. ಅವರು ತೀರ್ಮಾನ ಮಾಡಲಿ. ನಾನು ನಿಮ್ಮನ್ನು ಯಾರನ್ನು ಒಪ್ಪಿಸುವುದಕ್ಕೆ ಹೊರಟಿಲ್ಲ. ಈ ಸದನದ ಮೂಲಕ ಇಲ್ಲಿ ನಡೆಯುತ್ತಿರುವಂತಹ ಸತ್ಯಸಂಗತಿಯನ್ನು....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಲ್ಲಿವರೆಗೂ ತಾವೇ ಬಾವುಟ ಹಾರಿಸುವುದಕ್ಕೆ ಕಾಯಬಹುದಾಗಿತ್ತಲ್ಲ. ಸುಮ್ಮನೆ ಅನ್ಯಾಯವಾಗಿ 5-6 ಜನ ಸತ್ತುಹೋದರು. ಈ ದೇಶದ ಜನರೇ ಮಾಲೀಕರು. ಏಕೆ ರೆಫರೆಂಡಮ್ ಮಾಡುವವರೆಗೂ ನೀವು ಕಾಯಲಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಯಡಿಯೂರಪ್ಪನವರೆ ಅಲ್ಲಿಯವರೆಗೂ ನೀವು ಕಾದಿದ್ದರೆ ಮುಖ್ಯಮಂತ್ರಿಯಾಗಿ ಬಾವುಟ ಹಾರಿಸಬಹುದಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ಏಕೆ ಇಷ್ಟು ಹಗುರವಾಗಿ ಚರ್ಚೆಗೆ ತೆಗೆದುಕೊಳ್ಳುತ್ತೀರ ಎಂದು ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಬನ್ನಿಕೋಡ್ರವರು, ಇವರು ಮುಖ್ಯಮಂತ್ರಿ ಆದರೆ ಮಾಡುವ ಕಸುಬು ಇದೆ, ಮಸೀದಿಗಳ ಮೇಲೆ, ಯಾರ್‍ಯಾರ ಆಸ್ತಿ ಮೇಲೆ ಬಾವುಟ ಹಾರಿಸುವುದು. ತ್ರಿವರ್ಣ ಧ್ವಜ ಅಲ್ಲ ಬೇರೆ ಧ್ವಜ ಹಾರಿಸುವುದು ಇವರ ಕಸುಬು ಆಗುತ್ತದೆ. ಅವರು ಮುಖ್ಯಮಂತ್ರಿಯಾದರೆ ದೇವರೇ ಗತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳೇ, ನಿಮಗೆ ನಾನು ತುಂಬಾ ಗೌರವ ಕೊಡುತ್ತೇನೆ. ತಾವೂ ಸಹ ಇಷ್ಟು ಹಗುರವಾಗಿ ಮಾತನಾಡುವುದಾದರೆ....

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಸಿದ್ಧಾಂತಕ್ಕೆ ತಾವು ಬದ್ಧರಾಗಿದ್ದೀರೋ ಇಲ್ಲವೋ? ತಮ್ಮ ಸಿದ್ಧಾಂತ ಏನು ಎಂದರೆ ಬಾಬರಿ ಮಸೀದಿ ಕೆಡುವುದು ತಮ್ಮ ಸಿದ್ಧಾಂತ. ಎಲ್ಲಾ ಮಸೀದಿಗಳ ಮೇಲೆ ಧ್ವಜ ಹಾಕಬೇಕು, ಅದು ಯಾವ ಧ್ವಜ ಎಂದು ನೀವು ಆಮೇಲೆ ನಿರ್ಣ ಮಾಡುತ್ತೀರಿ. ಒಂದು ಧ್ವಜ ಹಾಕುವಂಥಾದ್ದು

ತಮ್ಮ ಸಿದ್ಧಾಂತ. ಒಟ್ಟಾರೆ ಒಂದೇ ವರ್ಗದ ಜನ ಮಾತ್ರ ಭಾರತದಲ್ಲಿ ಬದುಕಬೇಕು. ಬೇರೆ ಯಾರೂ ಇಲ್ಲಿ ಬದುಕುವುದಕ್ಕೆ ಹಕ್ಕಿಲ್ಲ ಎಂದು ಹೇಳುವುದು ತಮ್ಮ ಸಿದ್ಧಾಂತ. ಈ ಸಿದ್ಧಾಂತ ನಮಗೆ ಇಲ್ಲದಿದ್ದರೆ ಬಿಟ್ಟು ಬಿಡಿ. ಹಾಗಾದರೆ ಬಹಳ ಸಂತೋಷ. ಈ ಸಿದ್ಧಾಂತಗಳಲ್ಲಿ ತಮಗೆ ನಂಬಿಕೆ ಇಲ್ಲದೆ ಒಂದು ರಾಷ್ಟ್ರದಲ್ಲಿ ಎಲ್ಲರೂ ಬದುಕಬೇಕು, ಒಬ್ಬರ ಗೋರಿ ಮೇಲೆ ಮತ್ತೊಬ್ಬರು ಬದುಕುವುದು ಅಲ್ಲ ಸಿದ್ಧಾಂತದಲ್ಲಿ ಎಂದು ತಮಗೆ ನಂಬಿಕೆ ಇದ್ದರೆ ಘೋಷಣೆ ಮಾಡಿ ಬಹಳ ಸಂತೋಷದಿಂದ ಯಡಿಯೂರಪ್ಪನವರೇ ರಾಷ್ಟ್ರದ ನಾಯಕರು ಎಂದು ತಮಗೆ ಕಿರೀಟ ಅಥವಾ ಮೈಸೂರು ಪೇಟ ಹಾಕಿ, ಹಾರ ಹಾಕಿ ನಾವೇ ಮೆರವಣಿಗೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ದೇಶದ , ಈ ರಾಜ್ಯದ ಯಾವುದೇ ಭೂಭಾಗದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಬಿಡುವುದಿಲ್ಲ ಎಂದು ತಾವು ಹೇಳುವುದಾದರೆ ಅಲ್ಲಿ ರಾಷ್ಟ್ರ ಧ್ವಜ ಹಾರಿಸುವುದಕ್ಕೆ ಭಾರತೀಯ ಜನತಾ ಪಾರ್ಟಿ ಕಟ್ಟುಬದ್ಧವಾಗಿದೆ. ಈ ದೇಶದ ಯಾವುದೇ ಭೂಭಾಗದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದನ್ನು ತಡೆಯುವುದಕ್ಕೆ ಇವತ್ತಿನ ಒಂದು ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಿಲ್ಲ. ಅದೇ ರೀತಿ ನಾಳೆ ನಮಗೆ ಅಧಿಕಾರ ಸಿಕ್ಕರೆ, ನಮಗೆ ಅಧಿಕಾರದ ಅಗತ್ಯವೇ ಇಲ್ಲ. ಇವತ್ತು ಇರುವಂತಹ ಕಾನೂನಿನ ಚೌಕಟ್ಟಿನಲ್ಲಿ, ಅದು ದೇವಸ್ಥಾನ ಇರಬಹುದು, ಮಸೀದಿ ಇರಬಹುದು, ಅಲ್ಲಿ ಈ ದೇಶದ ರಾಷ್ಟ್ರ ಧ್ವಜವನ್ನು ಹಾರಿಸುವುದು ಬೇಡ ಎಂದು ಯಾರೂ ಹೇಳಿಲ್ಲ. ಯಾರು ಹೇಳುವುದೂ ಇಲ್ಲ. ಆ ವಿಶ್ವಾಸ ನನಗೆ ಇದೆ. ಪೇಜಾವರ ಶ್ರೀಗಳ ಬಗ್ಗೆ ಯಾರೋ ಹಗುರವಾಗಿ ಮಾತನಾಡಿದರು. ಒಬ್ಬ ಮೌಲ್ವಿ ಯಾರಾದರನ್ನು ಕಳುಹಿಸಿ ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲಿ ಎಂದು ಹೇಳಿದರು. ಅದಕ್ಕೆ ಪೇಜಾವರ ಶ್ರೀಗಳು ಉಡುಪಿ ಮಠದ ಮೇಲೆ ಯಾರೇ ಮುಸ್ಲಿಂ ಬಂದು ರಾಷ್ಟ್ರಧ್ವಜ ಹಾರಿಸಲಿ, ನಮ್ಮದೇನೂ ಅಭ್ಯಂತರವಿಲ್ಲ ಎಂದು ಹೇಳಿದರು. ಅದೇ ರೀತಿ ನಮ್ಮ ಸ್ನೇಹಿತರು ಹೇಳಿದರು ಆರ್‌ಎಸ್‌ಎಸ್ ರಾಷ್ಟ್ರಧ್ವಜವನ್ನು ಹಾರಿಸುವುದಿಲ್ಲ ಎಂದು. ಆದರೆ ಇಲ್ಲಿರುವಂತಹ ನಮ್ಮ ಜನತಾ ದಳದ ಕೆಲವು ಕಾರ್ಯಕರ್ತರು ಇವತ್ತು ಆರ್‌ಎಸ್‌ಎಸ್ ಕಛೇರಿಗೆ ಹೋದಾಗ ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದ್ದನ್ನು ನೋಡಿ ಸಿಹಿ ತಿಂದು ವಾಪಸ್ಸು ಬಂದರು. ನಾನು ಹೇಳುತ್ತೇನೆ ಇವತ್ತು ನಿಮ್ಮ ಉದ್ದೇಶ ಏನೆಂದರೆ, ಭಾರತೀಯ ಜನತಾ ಪಾರ್ಟಿಯನ್ನು ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದೀರಿ. ಸನ್ಮಾನ್ಯ ಮುಖ್ಯಮಂತ್ರಿಗಳ ಉದ್ದೇಶ ಏನು ?

ಶ್ರೀ ವಾಟಾಳ್ ನಾಗರಾಜ್ : ನಾನು ಬಾಯಿ ಮುಚ್ಚಿ ಕುಳಿತಿದ್ದೇನೆ, ಅವರು ಯಾರೋ ನನ್ನ ಮೇಲೆ ಜಗಳ ಮಾಡಿಕೊಂಡು ಬರುತ್ತಿದ್ದಾರೆ. ನನ್ನ ಮೇಲೆ ಜಗಳ ಮಾಡುವುದೇ ಅವರ ಕೆಲಸ. ಯಡಿಯೂರಪ್ಪನವರದ್ದು ಇದೇ ಕೆಲಸ. ಇದೇ ನಿದರ್ಶನ ನೋಡಿ. ನಾನು ಸಂಯಮವಾಗಿ ಕೇಳುತ್ತಿದ್ದೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ನಾಗರಾಜರವರೇ, ನಿರಪರಾಧಿಗಳನ್ನು ಬಲಿ ಕೊಡುವುದೇ ಇವರ ಕೆಲಸ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವಂತೂ ನಿಶ್ಚಯ ಮಾಡಿದ್ದೇವೆ. ಇಲ್ಲಿ ಇನ್ನು ಮೂರು ತಿಂಗಳಲ್ಲಿ ಜನತೆಯ ನ್ಯಾಯಾಲಯಕ್ಕೆ ಹೋಗುತ್ತಿದ್ದೇವೆ. ಆ ಜನ ಯಾವುದು ಸರಿ, ಯಾವುದು ತಪ್ಪು ಎಂದು ತೀರ್ಮಾನ ಮಾಡುವವರಿದ್ದಾರೆ. ಅಲ್ಲಿಯವರೆಗೆ ಸ್ವಲ್ಪ ಸಂಯಮದಿಂದ ಈ ಬರುವಂತಹ ನಾಲ್ಕು ಐದು ದಿವಸ ಸದನ ನಡೆಯಬೇಕು, ಕೊನೆಗಾಲದಲ್ಲಾದರೂ ನಮ್ಮ ಕಾಂಗ್ರೆಸ್ ಮುಖ್ಯಮಂತ್ರಿಗಳು, ಅವರ ಸದಸ್ಯರುಗಳು ಸಂತೋಷದಿಂದ ಇಲ್ಲಿಂದ ಹೋಗಬೇಕು ಎಂಬ ಅಪೇಕ್ಷೆ ಇದೆ. ಕೊನೆಯದು ಅದು ಅವರಿಗೆ ಗೊತ್ತಿಲ್ಲವೇನೂ. ಅದಕ್ಕೋಸ್ಕರ ಅವರು ಹೀಗೆ

ಭೇಡಿಸುತ್ತಿದ್ದರೆ. ಆದ್ದರಿಂದ ಏನು ಮಾತನಾಡುತ್ತಿದ್ದಾರೆ, ಅದರಿಂದ ನನಗೆ ಏನು ಬೇಸರವಿಲ್ಲ. ಕೆಲವು ಸಾರಿ ಬೇಸರ ಬಂದಾಗ, ಸಿಟ್ಟು ಬಂದಾಗ, ತಮ್ಮ ಅಸ್ತಿತ್ವವೇ ಹೋಗುತ್ತದೆ ಅಂದುಕೊಂಡಾಗ, ಅವರು ನಿಂತ ಭೂಮಿಯನ್ನು ಕುಸಿದಿದೆ ಅಂದುಕೊಂಡಾಗ ಏನೇನೂ ಮಾತನಾಡುತ್ತಾರೆ, ಅದು ಮನುಷ್ಯನ ಸ್ವಭಾವ. ಆದ್ದರಿಂದ ನೀವು ಮಾತನಾಡುವುದಕ್ಕೆ ಖಂಡಿತ ಬೇಸರವಿಲ್ಲ. ನಾನು ಸಮಾಧಾನವಾಗಿ ಮಾತನಾಡಬೇಕು ಎಂದು ನಿಶ್ಚಯ ಮಾಡಿದ್ದೇನೆ. ನಾನು ಹೇಳುವುದಕ್ಕೆ ಹೊರಟ್ಟಿದ್ದೆ. ನಾನು ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಕೇಳಲಿಚ್ಛಿಪಡುತ್ತೇನೆ. ತಾವು ಎಲ್ಲರೂ ಹೇಳುತ್ತಿರುವ ಒಂದು ಮಾತನ್ನು ದಯಮಾಡಿ ಪ್ರಾಮಾಣಿಕವಾಗಿ ಆಲಿಸುವಂಥ ಪ್ರಯತ್ನ ಮಾಡಿ. ಬಿ.ಜೆ.ಪಿ.ಯವರು ಜನವರಿ 26, 1992 ರಂದು ಹುಬ್ಬಳ್ಳಿಯಲ್ಲಿ ನಮ್ಮ ಸ್ನೇಹಿತರು ಹೇಳಿದಂತೆ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸುವುದಕ್ಕೆ ಹೋದಾಗ ಅದನ್ನು ತಡೆದು ರಾಷ್ಟ್ರಧ್ವಜವನ್ನು ಕಿತ್ತು ಬಂಧನ ಮಾಡಿದರು ಎಂದು ನಾನು ಭಾವಿಸಿದ್ದೇನೆ, ಶ್ರೀ ನಗರದಿಂದ ನೇರವಾಗಿ ನಾನು ಹುಬ್ಬಳ್ಳಿಗೆ ಬಂದೆ. ಅವರು ಕೇಳಿದರು, ಯಡಿಯೂರಪ್ಪನವರು ಪ್ರಧಾನಿಯವರು ಕೊಟ್ಟ ವಿಮಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೋಸ್ಕರ ಶ್ರೀನಗರದಲ್ಲಿ ಲಾಲ್‌ಚೌಕಕ್ಕೆ ಹೋಗಿ ರಾಷ್ಟ್ರಧ್ವಜ ಹಾರಿಸಿ ಬಂದಿರಿ, ಇಲ್ಲಿ ನಮ್ಮ ಭೂಮಿಯಲ್ಲೇ, ನಮ್ಮ ರಾಜ್ಯದಲ್ಲೇ ರಾಷ್ಟ್ರಧ್ವಜವನ್ನು ಹಾರಿಸುವುದನ್ನು ತಡೆದು ಅಪಮಾನ ಮಾಡಿ ಬಂಧನ ಮಾಡುವಂತಹ ಒಂದು ಕೃತ್ಯ ನಡೆದಿದೆ ಏನು ಹೇಳುತ್ತೀರಿ ಎಂದು ಕೇಳಿದಾಗ, ನಾನು ಅವತ್ತು ಅಂದುಕೊಂಡಿದ್ದೆ ಪ್ರಾಮಾಣಿಕವಾಗಿ ಗುರುತಿಲ್ಲದ ಯಾರೋ ನಾಲ್ಕು ಜನ ಪಿ.ಸಿ.ಗಳು ಈ ತಪ್ಪು ಮಾಡಿರಬಹುದು, ಮತ್ತೆ ಆಗಸ್ಟ್ 15, 1992 ಬಂದಾಗ ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸೋಣ ಎಂದು .ಸಮಾಧಾನ ಮಾಡಿದ ಬಂದೆ. ಅವತ್ತಿನ ದಿವಸ ಮುಖ್ಯಮಂತ್ರಿಕಗಳನ್ನು ನಾನು ಭೇಟಿಯಾಗಿ, ಅವರ ಮನಸ್ಸನ್ನು ಒಲಿಸುವಂತೆ ಪ್ರಯತ್ನ ಮಾಡಿ ಬಂದೆ. ಅವತ್ತಿನಿಂದ ಇವತ್ತಿನವರೆಗೂ ಆರು ಬಾರಿ ಈ ಕೃತ್ಯಗಳು ನಡೆದಿವೆ. ನಾನು ಒಂದು ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ಭಾರತೀಯ ಜನತಾ ಪಕ್ಷದವರು ರಾಷ್ಟ್ರಧ್ವಜವನ್ನು...

ಶ್ರೀ ಮದನ್ಗೋಪಾಲ ನಾಯಕ್ : ಈ ವಿಷಯವಾಗಿ ಹುಬ್ಬಳ್ಳಿಯಲ್ಲಿ ಎಲ್ಲರ ಜೊತೆಯಲ್ಲಿ ಏನಾದರೂ ಚರ್ಚೆ ಮಾಡಿದ್ದೀರಾ..

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ! Is it not your duty? ಆ ಕಡೆ ರೂಲಿಂಗ್ ಪಾರ್ಟಿಯವರು ನಿಮ್ಮದು ಏನೂ ಇದರಲ್ಲಿ ಕರ್ತವ್ಯ ಇಲ್ಲವೇ? ನಾನು ಏನು ಮಾಡಿದ್ದೇನೆ ಎಂದು ಪೂರ್ತಿ ಹೇಳುವುದಕ್ಕೆ ಅವಕಾಶ ಕೊಡಿ, ನಾನು ಮಾತನಾಡುತ್ತೇನೆ, ದಯವಿಟ್ಟು ನನಗೆ ಅವಕಾಶ ಕೊಡಿ. ಪೂರ್ತಿ ಆದ ಮೇಲೆ ಖಂಡಿತ ಕೇಳಿ. ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತನ್ನು ಸ್ಪಷ್ಟ ಮಾಡುತ್ತೇನೆ, ಈ ರಾಜ್ಯದ ಮುಖ್ಯಮಂತ್ರಿಗಳಿಗೆ, ಈ ಸದನಕ್ಕೆ, ಇದು ಹೇಗೆ..

ಶ್ರೀ ಪಿ.ಜಿ.ಆರ್. ಸಿಂಧ್ಯಾ : ರಾತ್ರಿ ಬೆಳಗಿನ ಜಾವ ಯಡಿಯೂರಪ್ಪನವರದ್ದು, ಬಿ.ಜೆ.ಪಿ.ಯವರದ್ದು, ಭೂತಗೀತಾ ಹೊಕ್ಕಿದೆಯೋ, ಏಕೆ ಹೀಗೆ ಒದ್ದಾಡುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ :ನಾನು ಯಾವಾಗ ಹೇಳಿದ್ದೇನೆ, ನಾನು ರೈತನ ಮಗ. ಅಪ್ಪಾ, ನಿಮ್ಮಷ್ಟು ಒಳ್ಳೆಯ ಇಂಗ್ಲೀಷ್ ನನಗೆ ಬರುವುದಿಲ್ಲ, ಖಂಡಿತ ಬರುವುದಿಲ್ಲ, ಕಲಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಗ್ರಾಜ್ಯುಯೆಟ್ ಅಲ್ಲ, ನಾನು ನಿಮ್ಮಷ್ಟು ವಿದ್ಯಾವಂತನಲ್ಲ. ನಾನು ನೇಗಿಲು ಹೊಡೆಯುವಂತ ಒಬ್ಬ ಸಾಮಾನ್ಯ ರೈತನ ಮಗ. ನಿಮ್ಮಿಂದ ಕೆಲವು ವಿಷಯಗಳನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ; ಕಲಿಯುತ್ತಿದ್ದೇನೆ, ಕಲಿಯುವುದು ಬಹಳಷ್ಟು ಸಂಗತಿಗಳಿವೆ ಎಂದು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾನು ಒಂದು ಪಾಯಿಂಟನ್ನು ತಿಳಿಸಿ ಸನ್ಮಾನ್ಯ

ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಕ್ಲಿಯರ್ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಯಡಿಯೂರಪ್ಪನವರಿಗೆ ನಮ್ಮ ಸಹದ್ಯೋಗಿಗಳಾದ ಚಂದ್ರೇಗೌಡರು, ದೇಶಪಾಂಡೆಯವರು, ಕೇಳಿರತಕ್ಕಂಥ ಒಂದು ಪ್ರಶ್ನೆಗೆ ಅವರು ಈ ರಾಜ್ಯದ ಜನತೆಗೆ ಮತ್ತು ರಾಷ್ಟ್ರದ ಜನತೆಗೆ ವಿವರಣೆಯನ್ನು ಕೊಡತಕ್ಕಂಥ ಅವಶ್ಯಕತೆ ಬಹಳ ಇದೆ, ಈಗ ತಾವು ಏನು ಹೇಳುತ್ತಿದ್ದೀರಿ, ನಮ್ಮ ರಾಷ್ಟ್ರದ ತ್ರಿವರ್ಣ ಧ್ವಜ ಏನಿದೆ, ಅದು ನಮ್ಮ ಧ್ವಜ ಅನ್ನತಕ್ಕಂಥದ್ದನ್ನು ನಾವು ಒಪ್ಪುತ್ತೇವೆ ಅನ್ನತಕ್ಕಂಥದ್ದನ್ನು ತಾವು ಹೇಳುತ್ತಿದ್ದೀರಿ. ಅದೇ ರೀತಿಯಲ್ಲಿ ಜನಗಣಮನವನ್ನು ಸಹಿತ ನಾವು ರಾಷ್ಟ್ರಗೀತೆ ಎಂದು ಒಪ್ಪುತ್ತೇವೆ ಎಂದು ಹೇಳುತ್ತೀರಿ, ನಿಮ್ಮ ರಾಷ್ಟ್ರಗೀತೆ ಯಾವುದು ನಿಮ್ಮ ರಾಷ್ಟ್ರಧ್ವಜ ಯಾವುದು, ಏಕೆಂದರೆ ಪ್ರಮಾಣಿಕವಾಗಿ ಮಾತನಾಡೋಣ. Minus RSS there is no BJP, there is not VBHP, there is no AIVP. there is nothing minus RSS. Let us be very frank. RSS is the mother organisation. ಸುಮ್ಮನೆ ಅಲ್ಲಿಂದ ಇಲ್ಲಿಗೆ ತರಿಸಿಕೊಂಡು ಅದನ್ನೆಲ್ಲಾ ಮಾತನಾಡುವುದರಲ್ಲಿ ಅರ್ಥವಿಲ್ಲ. ಆರ್.ಎಸ್.ಎಸ್. ಮಾತೃ ಸ್ವರೂಪದ ಸಂಘಟನೆಯಾಗಿದೆ ಎಂದು ಹೇಳುತ್ತಿದ್ದೇನೆ.

ಈಗ ವಿ.ಹೆಚ್.ಪಿ. ಎಂಬುದು ತಂದೆ ಇದ್ದಂತೆ. ನಿಮ್ಮ ತಾಯಿ ತಂದೆ ಯಾವ ಭಾಷೆಯಲ್ಲಿ ಮಾತನಾಡುತ್ತಾರೆ? ಯಾವ ಧ್ವಜವನ್ನು, ಯಾವ ಬಟ್ಟೆಯನ್ನು ಹಾಕಿಕೊಳ್ಳುತ್ತಾರೆ? ನಿಮ್ಮ ತಂದೆ ಕಾವಿ ಬಟ್ಟೆ ಹಾಕುತ್ತಾರೆ, ನಿಮ್ಮ ತಾಯಿ ಹೇಳುತ್ತಾರೆ, ನಮಸ್ತೇ ಸದಾ ವತ್ಸಲೆ ಅಂತ - let us be very frank; let us not be hypocrites in this point. ವಂದೇಮಾತರಂ ಎಂಬುದನ್ನು ರಾಷ್ಟ್ರಗೀತೆ ಎಂದು ನಾವೆಲ್ಲರೂ ಕೂಡ ಒಪ್ಪುತ್ತೇವೆ. ಆದರೆ ವಂದೇಮಾತರಂನ್ನು ನೀವು ಒಪ್ಪುವುದಿಲ್ಲ. ಒಂದೇ ಮಾತರಂಅನ್ನು ಬಂಕಿಂಚಂದ್ರ ಛಟರ್ಜಿಯವರು ಹೇಳಿದರೆಂದು ನೀವು ಹೇಳುತ್ತೀರಿ. ವಂದೇಮಾತರಂ ಮತ್ತು ಜನಗಣಮನ ಎರಡನ್ನೂ ಕೂಡ ನಮ್ಮ ಸಂವಿಧಾನದ ಪ್ರಕಾರ ರಾಷ್ಟ್ರಗೀತೆ ಎಂದು ನಾವು ಹೇಳಿದ್ದೇವೆ. ಆದರೆ ನೀವು ನಮಸ್ತೇ ಸದಾ ವತ್ಸಲೆ ಹೇ ಮಾತೃ ಭೂಮಿ ಎಂದು ಹೇಳಿ ಈ ರಾಷ್ಟ್ರದಲ್ಲಿ ಒಂದು ವರ್ಗದ ಒಂದು ಧರ್ಮದ ಜನ ಮಾತ್ರ ಇರಬೇಕು, ಅವರು ಫಸ್ಟ್ ಗ್ರೇಡ್ ಸಿಟಿಜನ್ಸ್ ಎಂದು ಹೇಳುತ್ತೀರಿ. ಅದು ಆ ಪದ್ಯದ ಅರ್ಥ. ಇದು ನಿಮ್ಮ ತಾಯಿ ಹೇಳತಕ್ಕ ಭಾಷೆ. ನಿಮ್ಮ ತಂದೆ ಹಾಕತಕ್ಕ ಬಟ್ಟೆ ಯಾವುದು? ನೀವು ಬೆಳಗಿನ ಹೊತ್ತು ಶಾಖೆಗಳನ್ನು ಮಾಡುತ್ತೀರಿ. ಅಲ್ಲಿ ಏತಕ್ಕೆ ನೀವು ತ್ರಿವರ್ಣ ಧ್ವಜವನ್ನು ಹಾಕುವುದಿಲ್ಲ? ಕರ್ನಾಟಕದಲ್ಲಿ ನೀವು ಅವರ ಶಾಖೆಗಳನ್ನು ನಡೆಸುತ್ತೀರಿ, ಇದನ್ನು ನಾನು ಮೆಚ್ಚುತ್ತೇನೆ. ನೀವು ಕಳೆದ ಅಧಿವೇಶನದಲ್ಲಿ ಇದ್ದುದಕ್ಕೂ ಈ ಅಧಿವೇಶನದಲ್ಲಿರುವುದಕ್ಕೂ ಹೋಲಿಕೆಮಾಡಿದರೆ ನೀವು ಬಹಳಷ್ಟು ರಿಫಾರಂ ಆಗದ್ದೀರಿ. ನನಗೆ ನೋವಾಗುತ್ತದೆ. ನೀವೇ ಹೇಳಿದಿರಿ, ನಾನು ಪದವೀಧರ ಅಲ್ಲ, ನಾನು ರೈತರ ಮಗ ಎಂದು. ನೀವು ಇಷ್ಟು ಮಾತ್ರ ಇಲ್ಲಿಗೆ ಬಂದಿರುವುದಕ್ಕೆ ನಮಗೆ ಹೆಮ್ಮೆ ಎನಿಸುತ್ತದೆ. ಆದರೆ ನೀವು ಆತ್ಮಾವಲೋಕವನ್ನು ಮಾಡಿಕೊಳ್ಳಿ ನೀವು ನಡೆಸುತ್ತಿರುವ ಸುಮಾರು 10 ಸಾವಿರ ಶಾಖೆಗಳಲ್ಲಿ ಈ ಕೇಸರಿ ಧ್ವಜವನ್ನು ಬಿಟ್ಟು ತ್ರಿವರ್ಣ ಧ್ವಜಗಳನ್ನು ಏಕೆ ಹಾಕಿಕೊಳ್ಳಬಾರದು? ನಮಸ್ತೇ ಸದಾ ವತ್ಸಲೇ ಎಂಬುದನ್ನು ಬಿಟ್ಟು ಸಿಕ್ಕರನ್ನು, ಮುಸಲ್ಮಾನರನ್ನು, ಕ್ರಿಶ್ಚಿಯನ್ನರನ್ನು ದ್ವೇಷಿಸುವಂಥ ನೀತಿಯನ್ನು ಹೇಳುವ ಬದಲಾಗಿ ಅವರಿಗೆ ಅನುಕೂಲವಾಗುವಂಥ ನಾವೆಲ್ಲರೂ ಭಾರತೀಯರ ಮಕ್ಕಳೆಂದು ನೀವು ಏತಕ್ಕೆ ಹೇಳುವುದಿಲ್ಲ? ಇದರ ಬಗ್ಗೆ ನೀವು ಭಾವೋದ್ವೇಗಕ್ಕೆ

ಒಳಗಾಗದೆ ನೀವು ಉತ್ತರವನ್ನು ಕೊಡಬೇಕು. ಭಾವಾವೇಶಕ್ಕೊಳಗಾಗಿ ಹುತ್ತದ ಸುತ್ತ ಬಡಿದು ಎಲ್ಲೋ ಹೋಗುವುದು ಬೇಡ. ಇದರಿಂದ ಯಾವುದೇ ಉಪಯೋಗವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮಷ್ಟು ಒಳ್ಳೆಯ ಪಾರ್ಲಿಮೆಂಟೇರಿಯನ್ ಅಲ್ಲ, ನಿಮ್ಮಷ್ಟು ಅನುಭವ ನನಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಒಳ್ಳೆಯ ಪಾರ್ಲಿಮೆಂಟೇರಿಯನ್ ಎಂದು ನಿಮ್ಮನ್ನು ಕೂರಿಸಿದ್ದಾರೆ. ನಿಮ್ಮಿಬ್ಬರ ನ್ಯಾಯಗಳು ಹೇಗಿವೆ ಎಂದರೆ, ಒಂದು ಕಡೆ ಸೀಮೆಎಣ್ಣೆ, ಇನ್ನೊಂದು ಕಡೆ ಬೆಂಕಿಕಡ್ಡಿ. ಸೀಮೆ ಎಣ್ಣೆ ಹಾಕುತ್ತೀರಿ, ಬೆಂಕಿಕಡ್ಡಿ ಹಚ್ಚುತ್ತೀರಿ. ಇದಕ್ಕೆ ನಾನೇನು ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಬಹಳ ಮೂಲ ವಿಚಾರಕ್ಕೆ ಹೋಗಿ ತಂದೆ ಯಾರು? ತಾಯಿ ಯಾರು ಎಂದು ಪ್ರಸ್ತಾಪ ಮಾಡಿದ್ದಾರೆ. ಹೌದು, ನಾನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗರಡಿಯಲ್ಲಿ ಬೆಳೆದವನು. ಇವತ್ತು ನಾನೇನಾದರೂ ಮನುಷ್ಯನಾಗಿದ್ದರೆ ಆ ಸಂಸ್ಥೆಯಿಂದ ಎಂದು ನಾನು ಹೇಳುವುದಕ್ಕೆ ಹೆಮ್ಮೆಪಡುತ್ತೇನೆ. ಇವತ್ತು ಈ ಸಮಾಜಕ್ಕೆ ನಾನೇನಾದರೂ ಕಿಂಚಿತ್ ಸೇವೆಯನ್ನು ಪ್ರಾಮಾಣಿಕವಾಗಿ ಸಲ್ಲಿಸುತ್ತಿದ್ದರೆ ಅದಕ್ಕೆ ನನ್ನ ಅಪ್ಪ ಅಮ್ಮ ನನಗೆ ಬುದ್ಧಿಯನ್ನು ಕಲಿಸಿಲ್ಲ, ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಸ್ವಯಂಪ್ರೇರಣೆಯನ್ನು ಪಡೆದುಕೊಂಡು ಬಂದಿರುವವನು. ನಾನು ಪ್ರಾರಂಭದಲ್ಲೇ ಒಂದು ಮಾತನ್ನು ಹೇಳಿದ್ದೇನೆ. ರಾಷ್ಟ್ರ ಧ್ವಜಕ್ಕೆ, ವಂದೇಮಾತರಂಗೆ, ಜನಗಣಮನ ಅಧಿನಾಯಕ ಜಯಹೇ ರಾಷ್ಟ್ರಗೀತೆಗೆ ಒಂದೇ ಒಂದು ಸಣ್ಣ ಅಪರಾಧವನ್ನು ಮಾಡಿದಂಥ ಯಾವನೇ ವ್ಯಕ್ತಿ ಬದುಕುವುದಕ್ಕೆ ಸಾಧ್ಯವಿಲ್ಲ, ಅಂಥವನ್ನು ಈ ರಾಷ್ಟ್ರದ ಒಂದು ಅವಿಭಾಜ್ಯ ಅಂಗವಾಗಿ ಬದುಕುವುದಕ್ಕೆ ಸಾಧ್ಯವಿಲ್ಲ, ಆ ರೀತಿ ಕನಸುಮನಸಿನಲ್ಲೂ ಯೋಚನೆ ಮಾಡುವವನು ರಾಷ್ಟ್ರದ್ರೋಹಿ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಅದೇ ರೀತಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಅವರ ಶಾಖೆಯನ್ನು ನಡೆಸಬೇಕಾದರೆ ಭಗವಾ ಧ್ವಜವನ್ನು ಹಾರಿಸಿ ಅದರ ಕೆಳಗೆ ಅವರು ಒಂದು ಪ್ರಾರ್ಥನೆಯನ್ನು ಮಾಡುತ್ತಾರೆ. ಅದು ಸರಿಯೋ, ತಪ್ಪೋ ಎಂದು ಹೇಳುವ ಅಧಿಕಾರ ನಿಮಗೆ ಯಾರಿಗೂ ಇಲ್ಲ. ರಾಷ್ಟ್ರಧ್ವಜಕ್ಕೆ ನಾನು ಎಷ್ಟು ಗೌರವವನ್ನು ಕೊಡುತ್ತೇನೋ ಅಷ್ಟೇ ಗೌರವವನ್ನು ಈ ಭಗವಾ ಧ್ವಜಕ್ಕೂ ಕೊಡುತ್ತೇನೆ. ನಾನಾದರೂ ಹೇಳುತ್ತೇನೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆ ಚರ್ಚೆಮಾಡಬೇಕಾದರೆ ಅದಕ್ಕೆ ಬೇರೆ ಸಮಯದಲ್ಲಿ ಒಂದು ಕಡೆ ಸೇರೋಣ.

(ಗೊಂದಲ)

4.25 ಪಿ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಮಾತನಾಡಿದಮೇಲೆ ನಾನು ಮಾತನಾಡದಿದ್ದರೆ ಅದರ ಇಂಟರೆಸ್ಟ್ ಹೋಗಿಬಿಡುತ್ತದೆ. ಎಲ್ಲರೂ ಎದ್ದು ಹೋಗಿರುತ್ತಾರೆ, ನೀವು ಕೇಸರಿ ಬಣ್ಣ, ಭಗವಾ, ಧ್ವಜದ ಬಗ್ಗೆ ಹೇಳುತ್ತಿದ್ದೀರಿ. ಅದೇ ರೀತಿ ರೈತರು ನಮ್ಮದು ಹಸಿರು ಬಣ್ಣ ಎಂದು ಹೇಳುತ್ತಾರೆ. ಮುಸಲ್ಮಾನರೂ ಕೂಡ ನಮ್ಮದು ಹಸಿರು ಬಣ್ಣ ಎಂದು ಹೇಳುತ್ತಾರೆ. ಇದನ್ನೆಲ್ಲಾ ಸೇರಿಸಿಯೇ ತ್ರಿವರ್ಣ ಧ್ವಜ ಎಂದು ಮಾಡಿರತಕ್ಕದ್ದು. ನೀವು ಏತಕ್ಕೆ ಇದನ್ನು ವಿರೋಧ ಮಾಡುವುದಿಲ್ಲ ಎಂದರೆ ನಿಮ್ಮದು ಜಾಸ್ತಿ ಆಗಬೇಕೆಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಕ್ಕೆ ಏನು ಹೇಳಬೇಕೆಂದು ನನಗೆ ಗೊತ್ತಾಗುತ್ತಿಲ್ಲ, ಮಾನ್ಯ ಅಧ್ಯಕ್ಷರೆ ನಾನು ಹೇಳುತ್ತಿದ್ದೇನೆ. ಈ ಸಮಸ್ಯೆಯನ್ನು ಉದ್ಭವ ಮಾಡಿದ್ದು ಭಾರತೀಯ ಜನತಾ ಪಾರ್ಟಿ ಅಲ್ಲ, ಆವತ್ತಿನ ದಿವಸ ಗೊತ್ತಿದ್ದೋ, ಗೊತ್ತಿಲ್ಲದೆಯೋ ಅಲ್ಲಿದ್ದಂಥ ನಾಲ್ಕಾರು ಜನ ಪೋಲೀಸ್ ಪೇದೆಗಳು 92ರ ಜನವರಿ 26ನೇ ತಾರೀಖು ರಾಷ್ಟ್ರಧ್ವಜವನ್ನು ಹುಬ್ಬಳ್ಳಿಯ ಈದ್‌ಗಾ ಮೈದಾನದಲ್ಲಿ ಕಿತ್ತು ಹಾಕಿ

ಅದಕ್ಕೆ ಅಪಮಾನವನ್ನು ಮಾಡಿದ್ದರಿಂದ ಈ ಸಮಸ್ಯೆ ಪ್ರಾರಂಭ ಆಯಿತು. ನಂತರ ಮುಂದೆ ಬರುವ ಆಗಸ್ಟ್ 15ನೇ ತಾರೀಖು ರಾಷ್ಟ್ರಧ್ವಜವನ್ನು ಅಲ್ಲಿ ಹಾರಿಸಬಹುದು, ಸರ್ಕಾರ ಇದಕ್ಕೆ ಅಡ್ಡಿ ಪಡಿಸುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೆ ಅದಾದನಂತರ ಅಂದಿನಿಂದ ಇಂದಿನವರೆಗೆ 6 ಸಾರಿ ಅಲ್ಲ ರಾಷ್ಟ್ರಧ್ವಜವನ್ನು ಹಾರಿಸಲು ಹೋದೆವು. ನಮ್ಮ ಕೆಲವು ಸ್ನೇಹಿತರು ಹೇಳುತ್ತಿದ್ದರು, ಯಡಿಯೂರಪ್ಪನವರೇ ನೀವು ಹಿಂದೆ ಸರಿದಿರಿ ಎಂದು. ಆವತ್ತು ನನ್ನನ್ನು ಬಂಧನ ಮಾಡಿ ಬೆಳಗಾಂನ ಇಂಡಲಗ ಜೈಲಿನಲ್ಲಿಟ್ಟಿರಿ. ನಾವು ಸಹಿಸಿದೆವು. ಒಂದು ಸಾರಿ ರಿಟೈರ್ಡ್ ಡಿ.ಜಿ.ಜಿ. ವೀರಭದ್ರಯ್ಯನವರನ್ನು ಬಂಧನ ಮಾಡಿ ಜೈಲಿನಲ್ಲಿಟ್ಟಿರಿ. ಲಾಠಿ ಛಾರ್ಜನ್ನು ಮಾಡಿದಿರಿ. ಯಾವುದೇ ಸಂದರ್ಭದಲ್ಲೂ ಕೂಡ ರಾಷ್ಟ್ರ ಧ್ವಜವನ್ನು ಹಾರಿಸುವಾಗ ಭಾರತೀಯ ಜನತಾ ಪಕ್ಷದ ಮುಖಂಡರು ಆ ನೇತೃತ್ವದಲ್ಲಿ ಹಿಂದೆ ಇದ್ದರು ಮುಂದಿರಲಿಲ್ಲ ಎಂಬ ಒಂದೇ ಒಂದು ದಾಖಲೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಕೊಟ್ಟರೆ ಅದಕ್ಕೆ ಖಂಡಿತವಾಗಿ ನಾನು ತಲೆಬಾಗುತ್ತೇನೆ. ಇನ್ನು ಎರಡನೆಯದಾಗಿ ಮಾನ್ಯ ದೇಶಪಾಂಡೆಯವರು ಹೇಳಿದರು. ಯಡಿಯೂರಪ್ಪನವರೇ ಆ ನೇತೃತ್ವದಲ್ಲಿ ಮುಂದೆ ನೀವು ನಿಂತುಕೊಂಡು ಗುಂಡಿಗೆ ನೀವು ಆಹುತಿಯಾಗಬೇಕಾಗಿತ್ತು. ಮುಖಂಡರು ಆಹುತಿಯಾಗಬೇಕಾಗಿತ್ತು. ನೀವು ಹೇಡಿಗಳಂತೆ ಹಿಂದೆ ಸರಿದಿರಿ ಎಂದರು. ನಾನಾದರೂ ಹೇಳುತ್ತೇನೆ, ನೀವು ಇವತ್ತು ಪೋಲೀಸ್ ದಾಖಲೆಗಳನ್ನು ತೆಗೆದುನೋಡಿ, ಸಾವಿರಾರು ಜನರ ಮಧ್ಯೆ ರಾಷ್ಟ್ರಧ್ವಜವನ್ನು ಹಾರಿಸುವ ಪ್ರತಿಯೊಂದು ಸಂದರ್ಭದಲ್ಲೂ ಕೂಡ ಯಡಿಯೂರಪ್ಪನಾಗಲಿ, ಈಶ್ವರಪ್ಪನವರಾಗಲಿ, ಅನಂತಕುಮಾರ್ ಆಗಲಿ ಆ ಹೋರಾಟದಲ್ಲಿ ಇದ್ದರೋ, ಇಲ್ಲವೋ, ಎಂಬುದನ್ನು ತಿಳಿದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಇದರ ಬಗ್ಗೆ ಕ್ಲಾರಿಫೈ ಮಾಡಲಿ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ನೀವು ಗೋಲಿಬಾರನ್ನು ಮಾಡಬೇಕಾದುದು ಯಡಿಯೂರಪ್ಪನ ಮೇಲೆ, ಅನಂತಕುಮಾರ್‌ಮೇಲೆ, ಈಶ್ವರಪ್ಪನ ಮೇಲೆ. ಆ ಮುಗ್ಧ ಜನರ ಮೇಲಲ್ಲ. ದೇಶಪಾಂಡೆ ನಗರದಲ್ಲಿದ್ದಂಥ 40-50 ಜನ ಮುಗ್ಧರ ಮೇಲೆ ಗುಂಡುಹಾರಿಸಿ ಅವರನ್ನು ಏನು ಕೊಲೆ ಮಾಡಿದ್ದೀರಿ ಆ ಕೊಲೆಗಡುಕ ಸರ್ಕಾರದ ನೇತೃತ್ವವನ್ನು ವಹಿಸಿರತಕ್ಕ ನಿಮ್ಮಿಂದ ನಾವು ಏನು ಪಾಠವನ್ನು ಕಲಿಯೋಣ.

ಶ್ರೀ ಎಂ. ವೀರಪ್ಪಮೊಯಿಲಿ : ನೀವು ಹೇಳಿ, ನೀವು ಹೇಳಿ ಎಂದು ಹೇಳಿದಿರಿ. ಕೌರವ ತನ್ನ ಕೊನೆಯ ಕಾಲದಲ್ಲಿ ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡು ಕುಳಿತಂತೆ ಇವರೂ ಕೂಡ ಯಾವುದೋ ಸರೋವರದಲ್ಲಿ ಅಡಗಿಕೊಂಡು ಕುಳಿತುಕೊಂಡು ಹೊರಗೆ ಬಂದರು. ಕೌರವ ಅಡಗಿ ಕುಳಿತು ಹೇಗೆ ಪಾರಾದನೋ ಅದೇ ರೀತಿ ಬಿ.ಜೆ.ಪಿ.ಯ ನಾಯಕರಾದ ಮಾನ್ಯ ಯಡಿಯೂರಪ್ಪನವರೂ ಕೂಡ ರಾಷ್ಟ್ರಧ್ವಜವನ್ನು ಹಾರಿಸುವಾಗ ಅಲ್ಲಿ ಎಲ್ಲಿಯೂ ಕಾಣದೆ ಎಲ್ಲೋ ಅಡಗಿ ಕುಳಿತುಕೊಂಡು ಕೊನೆಯಲ್ಲಿ ವಿಜಯೋತ್ಸವವನ್ನು ಆಚರಿಸಲು ಹೊರಗೆ ಬಂದಾಗ.....

ಶ್ರೀ ಆರ್. ವಿ. ದೇಶಪಾಂಡೆ : ಉಮಾ ಭಾರತಿಯವರು ದೆಹಲಿಯಿಂದ ರಾಷ್ಟ್ರ ಧ್ವಜವನ್ನು ಹಾರಿಸಲು ಬಂದಿದ್ದಾರೆ. ಅವರು ಅಲ್ಲಿ ಇರದೆ ದೇಶಪಾಂಡೆ ನಗರದಲ್ಲಿದ್ದಾರೆ. ಅವರು ಈದ್‌ಗಾ ಮೈದಾನದಲ್ಲಿ ಇರಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಕೌರವನ ವೈಶಂಪಾಯನ ಸರೋವರದ ಪ್ರವೇಶಕ್ಕೂ ಉಮಾ ಭಾರತಿ ಮತ್ತು ಶ್ರೀ ಯಡಿಯೂರಪ್ಪನವರ ಈ ಪ್ರವೇಶಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಇಲ್ಲಿಗೆ ದುಶ್ಯಾಸನನ ಪ್ರವೃತ್ತಿ ಕೌರವನ ಪ್ರವೃತ್ತಿ ಅಂತ್ಯವಾಯಿತು.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಯಡಿಯೂರಪ್ಪ ಕೌರವ ಎಂದು ಹೇಳಿದಿರಿ, ಹಾಗಾದರೆ ಪಾಂಡವರು ಯಾರು?

Sri. M.Veerappa Moily : All Secular forces are Pandavas and all communal forces are Kauravas.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಒಂದು ಆಶ್ಚರ್ಯ ಎಂದರೆ, ಯಾವ ಸಂವಿಧಾನದ ಚೌಕಟ್ಟಿನಲ್ಲಿ ಪ್ರಮಾಣವಚನ ತೆಗೆದುಕೊಂಡು ಈ ರಾಷ್ಟ್ರ ಗೀತೆಗೆ, ರಾಷ್ಟ್ರಧ್ವಜಕ್ಕೆ ಸಂವಿಧಾನಕ್ಕೆ ಗೌರವ ಸಿಕ್ಕುವಂತೆ ನೋಡಿ ಕೊಳ್ಳುತ್ತೇನೆಂದು ಹೇಳಿ ಮುಖ್ಯ ಮಂತ್ರಿಗಳಾಗಿದ್ದೀರೋ ನೀವು ಇವತ್ತು ರಾಷ್ಟ್ರಧ್ವಜವನ್ನು ಹಾರಿಸಲು ಬಿಡದೆ ಅಟ್ಟಹಾಸದಿಂದ ಮೆರೆಯುತ್ತಿರುವುದನ್ನು ನೋಡಿದರೆ ಈ ನಾಡಿನ ನಾಲ್ಕೂವರೆ ಕೋಟಿ ಜನರು ತಲೆತಗ್ಗಿಸುವಂಥ ಒಂದು ಕರಾಳ ದಿನವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಎರಡನೆಯದಾಗಿ ಅಧಿಕಾರ ತನ್ನ ಕೈಯಲ್ಲಿದೆ ಎಂದು ನಿಮ್ಮ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದೀರಿ. ಆದರೆ ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ, ಈ ಚುನಾವಣೆ ಆಗಲಿ. ಯಾವ ರಾಷ್ಟ್ರಧ್ವಜವನ್ನು ಹಾರಿಸಲು ಹೋದವರನ್ನು ತಡೆದು ಜೈಲಿನಲ್ಲಿ ಬಂಧನದಲ್ಲಿಟ್ಟಿದ್ದೀರೋ ಯಾವ ರಾಷ್ಟ್ರಧ್ವಜವನ್ನು ಹಾರಿಸಲು ಬೆಂಬಲವನ್ನು ಕೊಟ್ಟಂಥವರನ್ನು ನೇರವಾಗಿ ಗುಂಡಿಕ್ಕಿ ಕೊಂದಿದ್ದೀರೋ ನಿಮ್ಮನ್ನೂ ಕೂಡ ಅದೇ ಜೈಲಿನಲ್ಲಿ ನೀವು ಬದುಕಿರುವವರೆಗೂ ಸಾಯುವಂತೆ ವ್ಯವಸ್ಥೆ ಮಾಡುವ ಕಾಲ ಹತ್ತಿರ ಬರುತ್ತಿದೆ ಮೊಯಿಲಿಯವರೆ. ಇದು ಬಹಳ ದೂರವಿಲ್ಲ. ನನ್ನ ಮೊದಲನೇ ಕೆಲಸ ಇದು. ನೀವು ಈ ರಾಜ್ಯದ ಮುಖ್ಯ ಮಂತ್ರಿಯಾಗಿ ಮಾಡಿರುವಂಥ ಅಕ್ಷಮ್ಯ ಅಪರಾಧ ಏನಿದೆ. ಅದಕ್ಕೆ ನಿಮಗೆ ಶಿಕ್ಷೆ ಆಗಬೇಕು. ಅಲ್ಲಿ ಬರುವಂಥ ಆಡಳಿತ ಪಕ್ಷ ಯಾವುದೇ ಇರಬಹುದು. ಆ ಶಿಕ್ಷೆಯನ್ನು ಅನುಭವಿಸುವಂಥ ಕಾಲ ನಿಮ್ಮ ಹಂಡ್ರೆಡ್ ಡೇಸ್ ಪ್ರೋಗ್ರಾಂ ಎಂದು ತಿಳಿದುಕೊಳ್ಳಿ. ಫಸ್ಟ್ ಪ್ರೋಗ್ರಾಂ ಅಲ್ಲಿಗೆ ಬರುತ್ತಿದ್ದಂತೆಯೇ ಮಾಡುವಂಥ ಮೊದಲನೆಯ ಕೆಲಸ ಸರ್ಕಾರದ ಬೊಕ್ಕಸವನ್ನು ಲೂಟಿಮಾಡಿ ಅಟ್ಟಹಾಸದಿಂದ ಮೆರೆಯುತ್ತಾ ರಾಷ್ಟ್ರಧ್ವಜವನ್ನು ಹಾರಿಸುವುದನ್ನು ತಡೆದಿರುವಂಥ ನಿಮ್ಮಂಥ ಬೇಜವಾಬ್ದಾರಿ ನಾಯಕತ್ವ ಏನಿದೆ ಇದರ ಬಗ್ಗೆ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳುವ ಕಾಲ ಹತ್ತಿರ ಬರುತ್ತಿದೆ. ನೀವು ಏನೇನೋ ಮಾತನಾಡುತ್ತಿದ್ದೀರಿ. ನೀವು ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳಲ್ಲ, ಬಿ.ಜೆ.ಪಿ.ಗೆ ಅಲ್ಲ, ಈ ನಾಡಿನ ನಾಲ್ಕೂವರೆ ಕೋಟಿ ಜನರ ಪ್ರತಿನಿಧಿ ನೀವು. ನೀವು ಆಡುವ ಒಂದೊಂದು ಮಾತೂ ಕೂಡ....

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಕಾಂಗ್ರೆಸ್‌ನ ಮುಖ್ಯ ಮಂತ್ರಿಯಾದ ಕಾರಣದಿಂದ ನೀವು ಬಾಬರಿ ಮಸೀದಿಯ ಪ್ರಕರಣ ಈ ರಾಷ್ಟ್ರದಲ್ಲಿ ಪುನಃ ಮರುಕಳಿಸಿ ಸಾವಿರಾರು ಮುಗ್ಧ ಜನರ ಪ್ರಾಣವನ್ನು ಬಲಿ ತೆಗೆದುಕೊಳ್ಳುವುದಕ್ಕೆ ನೀವು ಏನು ಪ್ರಯತ್ನವನ್ನು ಮಾಡುತ್ತಿದ್ದೀರಿ, ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ನಿಮ್ಮ ಕೋಮುಜ್ವಾಲೆಗೆ ಕರ್ನಾಟಕ ಬಲಿಯಾಗಲಿಕ್ಕೆ ಬಿಡುತ್ತೇನೆ ಎಂದು ತಿಳಿದುಕೊಳ್ಳಬೇಡಿ. ಇವತ್ತು ಕೋಮುಜ್ವಾಲೆಗೆ ಕನ್ನಡದ ಮುಗ್ಧ ಜನರನ್ನು ಬಲಿಯಾಗಲಿಕ್ಕೆ ಬಿಡುತ್ತೇವೆಂದು ಅಟ್ಟಹಾಸದಿಂದ ಇದ್ದರೆ, ಇವತ್ತು ಕರ್ನಾಟಕದ ಜನರ ಸಮಾಧಿಯ ಮೇಲೆ ಅಟ್ಟಹಾಸದಿಂದ ಮೆರೆಯಲಿಕ್ಕೆ, ನಿಮ್ಮ ಉಮಾಭಾರತಿ ನಲಿಯಲಿಕ್ಕೆ, ನೀವು ಅದಕ್ಕೆ ಜೋಕಾಲಿಯನ್ನು ಹಾಕಲಿಕ್ಕೆ ಇಲ್ಲಿ ನಾವು ಬಿಡುತ್ತೇವೆ ಎಂದು ಕನಸು ಕಂಡಿದ್ದರೆ ಅದು ಕನಸೇ ಹೊರತು ಆ ದುಷ್ಟ ಕನಸನ್ನು ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ನಾಡಿನಲ್ಲಿ ನನಸು ಮಾಡಲಿಕ್ಕೆ, ನನ್ನ ಪ್ರಾಣ ಇರುವವರೆಗೆ ಬಿ.ಜೆ.ಪಿ. ಆಟ ಇಲ್ಲಿ ಕರ್ನಾಟಕದಲ್ಲಿ ನಡೆಯಲಿಕ್ಕೆ ಬಿಡುವುದಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಏನು ತಿಳಿದುಕೊಂಡಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಏತಕ್ಕೆ ಇಷ್ಟು ಆವೇಶ? ಏತಕ್ಕೆ ಸ್ವಾಮಿ ಇಷ್ಟು ಆವೇಶ? ಕೊನೆಯ ಕಾಲ ಹತ್ತಿರ ಬರುತ್ತಿದೆ ಎಂದು ಆವೇಶವೇ?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ಅಧ್ಯಕ್ಷರೇ, ರಾಜ್ಯವನ್ನು ಹಾಳು ಮಾಡುತ್ತಾರೆಂದು ಜನರಿಗೆ ಗೊತ್ತಾಗಿದೆ. ಪಾಪದ ಕೆಲಸ ಮಾಡುತ್ತಾರೆಂದು ಜನರಿಗೆ ಗೊತ್ತಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಡೆಯಲ್ಲಿ ದೀಪ ಆರುವಾಗ ಪ್ರಕಾಶಮಾನವಾಗಿ ಉರಿಯುತ್ತದೆ. ನಂತರ ನಂದಿಹೋಗುತ್ತದೆ. ಮುಖ್ಯಮಂತ್ರಿ ಸ್ಥಾನದಲ್ಲಿದ್ದೀರಿ. ಜವಾಬ್ದಾರಿಯಿಂದ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೋಮು ವಾದದ ಆಟ ಎಂದೂ ಕೂಡ ನಡೆಯುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನೀವು ಹೆದರಿಸುತ್ತೀರಲ್ಲ ನಾವು ಅಧಿಕಾರಕ್ಕೆ ಬರುತ್ತೇವೆ, ನಿಮ್ಮನ್ನು ಜೈಲಿನಲ್ಲಿ ಕೊಳೆಸುತ್ತೇವೆ ಅಥವಾ ಜೀವಂತ ಸುಟ್ಟುಬಿಡುತ್ತೇವೆ ಎಂದು. ನಿಮ್ಮ ದ್ವೇಷದ ಜ್ವಾಲೆಯನ್ನು ಎಬ್ಬಿಸಬೇಕು ಎಂದು ಏನು ಹೇಳುತ್ತೀರಿ ಕನ್ನಡ ನಾಡಿನ ಜನರು ಅಷ್ಟು ಮೂರ್ಖರು ಎಂದು ತಿಳಿದುಕೊಳ್ಳಬೇಡಿ. ಬಿಜೆಪಿಯಿಂದ ಇವತ್ತು ಮೂರು ನಾಲ್ಕು ಜನರು ಬಂದಿದ್ದೀರಿ. ಇದಕ್ಕೆ ಉತ್ತರ ನಾಳೆ ಜನ ಕೊಡುತ್ತಾರೆ. ಬಿ.ಜೆ.ಪಿಯವರು ಒಬ್ಬರೂ ಕೂಡ ಕರ್ನಾಟಕ ರಾಜ್ಯದಲ್ಲಿ ಬಾರದ ಹಾಗೆ ಕನ್ನಡ ನಾಡಿನ ಜನರು ಪಾಠ ಕಲಿಸಿಕೊಡುತ್ತಾರೆ. ನೀವು ಮಾಡಿದಂಥ ದುಷ್ಟ ಕೆಲಸಕ್ಕೆ ಎಂಬುದನ್ನು ತಿಳಿದುಕೊಳ್ಳಬೇಕು. ನೀವು ಏನೇನು ಮಾಡುತ್ತಿದ್ದೀರಿ, ಏನೇನು ಸಂಚು ಇತ್ತು ಎಂಬುದು ಗೊತ್ತಿದೆ. ಇಡೀ ರಾಷ್ಟ್ರದಲ್ಲಿ ಅಯೋಧ್ಯೆಯಲ್ಲಿ ಬೆಂಕಿ ಹಾಕಿದ್ದು ಆ ಬೆಂಕಿ ಆರಿ ಹೋಗಿದೆ. ಇವತ್ತು ಹುಬ್ಬಳ್ಳಿಯಿಂದ ಬೆಂಕಿಯನ್ನು ಪುನಃ ಹಾಕಿ ಈ ದೇಶವನ್ನು ಸುಟ್ಟು ಭಸ್ಮ ಮಾಡಬೇಕು ಎಂದು ತಾವು ಏನು ಪ್ರಯತ್ನ ಮಾಡಿದ್ದೀರಿ ಆ ವೇಳೆ ಇಲ್ಲಿ ಆಗುವುದಿಲ್ಲ ಎಂಬುದು ಇವತ್ತು ಸಿದ್ಧವಾಗಿದೆ. ಅದು ಎಂದೂ ಕೂಡ ನಡೆಯುವುದಿಲ್ಲ, ನಮ್ಮ ಕನ್ನಡ ನಾಡಿನ ಮತದಾರರು ಪ್ರಜ್ಞಾವಂತ ಮತದಾರರೆಂದು ತಿಳಿದುಕೊಳ್ಳಬೇಕು. ನಿಮ್ಮ ಆಟಕ್ಕೆ, ನಿಮ್ಮ ಜಾತೀಯ ನೋಟಕ್ಕೆ ಇಲ್ಲಿ ಮಂಕಾಗುತ್ತಾರೆ ಎಂದು ತಿಳಿದುಕೊಂಡಿದ್ದರೆ ಅದಕ್ಕಿಂತ ಹುಚ್ಚು ಅಥವಾ ನಿಮ್ಮ ಭ್ರಾಂತು ಬೇರೆ ಇಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ತಿಳಿದುಕೊಳ್ಳಿ ಸ್ವಲ್ಪ. ಇನ್ನಾದರೂ ಸ್ವಲ್ಪ ವಿವೇಕ ಬರಲಿ. ಈಗ ದೇಶದಲ್ಲಿ ರಾಜಕೀಯ ಪಕ್ಷವಾಗಿ ಕೆಲಸ ಮಾಡಬೇಕೆಂದು ಆಸೆ ಇದ್ದರೆ ಅಥವಾ ಒಂದು ದೇಶದ ನಿಜವಾದ ರಾಷ್ಟ್ರಭಕ್ತರಾಗಿ ಕೆಲಸ ಮಾಡಬೇಕೆಂದು ಆಸೆ ಇದ್ದರೆ ಈ ರೀತಿ ಬೆಂಕಿ ಹೊತ್ತಿಸಿ ಮುಗ್ಧ ಜನರನ್ನು ಬಲಿ ತೆಗೆದುಕೊಳ್ಳತಕ್ಕ ನಿಮ್ಮ ರಾಕ್ಷಸೀ ಲಾಲಸೆಯನ್ನು ತಾವು ಈಗಲಾದರೂ ಬಿಟ್ಟರೆ ವೈಯಕ್ತಿಕವಾಗಿ ನಿಮಗೂ ಕ್ಷೇಮ ಮತ್ತು ಪಕ್ಷಕ್ಕೂ ಕ್ಷೇಮ, ರಾಷ್ಟ್ರಕ್ಕೂ ಕ್ಷೇಮ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿ ಕುರ್ಚಿಗಾಗಿ ನಿಮ್ಮ ಕಾಂಗ್ರೆಸ್ ಮುಖಂಡರಿಗೇ ಕೈಕೊಟ್ಟು ಮಂತ್ರಿಮಂಡಲದಲ್ಲಿ ವಿಶ್ವಾಸ ಇಲ್ಲದಿರುವ ನಿಮ್ಮಿಂದ ನಾನು ಉಪದೇಶದ ಪಾಠ ಕಲಿಯಬೇಕಾ? ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡಿ ಪಿಯರ್‌ಲೆಸ್ ಕಂಪನಿಯಿಂದ 200 ಕೋಟಿ ರೂಪಾಯಿ ಸಾಲ ತೆಗೆದುಕೊಂಡು ಬಂದ ನಿಮ್ಮಿಂದ ನಾನು ಪಾಠ ಕಲಿಯುವಂಥದ್ದು?

ಶ್ರೀ ಎಂ. ಪಿ. ವೆಂಕಟೇಶ್ : ನಿಮ್ಮಿಂದ ಕಲಿಯಬೇಕೇ?

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ (ಯಡಿಯೂರಪ್ಪನವರಿಗೆ) ಪಾಠವಂತೂ ಬೇಡವೇ ಬೇಡ. ದೇಶಕ್ಕೆ ಸಾಕಾಯಿತು ಪಾಠ.

ಅಧ್ಯಕ್ಷರು : ಯಡಿಯೂರಪ್ಪನವರೆ, ಟೈಮಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ: ಹೇಗೆ ಮಾಡಲಿ ಸಾರ್? ನೀವು ನಮ್ಮ ರಕ್ಷಣೆಗೆ ಬರಬೇಕು ಸಾರ್. ವಿಷಯಕ್ಕೆ ಹೋಗುವುದಕ್ಕೆ ಬಿಡುತ್ತಾ ಇಲ್ಲವಲ್ಲ, ಅವರು.

ಅಧ್ಯಕ್ಷರು : ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಳಕು ಹರಿಯುವವರೆಗೂ ಅವರು ಕೇಳಿದಂಥ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಲಿಕ್ಕೆ ನಾನು ಸಿದ್ಧನಿದ್ದೇನೆ. ಸಮಾಧಾನದಿಂದ ಕೇಳಬೇಕು. ತಮ್ಮ ಮಾತಿನಿಂದ, ಮುಖ್ಯಮಂತ್ರಿಗಳ ಮಾತಿನಿಂದ ಪಾರ್ಲಿಮೆಂಟರಿ ಸಿಸ್ಟಂನಲ್ಲಿ ಬೇಸರ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ನೀವು ಏನು ಹೇಳಬೇಕೋ ಅದನ್ನು ಹೇಳಿ. ನಾನು ಹೇಳುವಂಥ ಉತ್ತರ ಕೇಳಬೇಕಲ್ಲ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿರುವವರು ನಾಲ್ಕು ಜನರಲ್ಲಿ ಒಬ್ಬ ಮಾತನಾಡುವುದನ್ನಾದರೂ ಸಂಯಮದಿಂದ ಕೇಳಬೇಕಲ್ಲ. ನಾವೇನಾದರೂ 120 ಆದರೆ ನಿಮ್ಮ ಪರಿಸ್ಥಿತಿ ಏನಾಗಬಹುದು?

ಶ್ರೀ ಎಂ.ಪಿ. ವೆಂಕಟೇಶ್ : ಚುನಾವಣೆ ಬರುತ್ತದೆ. ಅದು ಈಗ ಏತಕ್ಕೆ? ಧ್ವಜ ಹಾರಿಸುವ ಬಗ್ಗೆ ನೀವು ಒಂದು ವಾರದ ಮುಂಚೆ ಪ್ರಚಾರ ಕೊಟ್ಟು ರಾಜ್ಯದ ಜನರನ್ನು ಬಲಿ ತೆಗೆದುಕೊಂಡಿದ್ದೀರಿ. ರಾಜ್ಯದ ಜನರಿಗೆ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೋಗಲಿ. ನಮ್ಮಿಂದಲಾದರೂ ನೀವೆಲ್ಲಾ ಒಗ್ಗಟ್ಟಾಗುತ್ತಿದ್ದೀರಲ್ಲ. ಅದು ಕಾಂಗ್ರೆಸ್ಸಿಗೆ ಒಳ್ಳೆಯದು. ಈ ಕಾರಣಕ್ಕಾಗಿಯಾದರೂ ಒಂದಾಗಿ ನೀವು. ಖಂಡಿತ ನೀವು ಏನು ಕೂಗಿದರೂ ನಾನು ನನ್ನ ತಾಳ್ಮೆ ಕಳೆದುಕೊಳ್ಳುವುದಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸ್ವಲ್ಪ ಸಿಟ್ಟಿನಲ್ಲಿರುವ ಹಾಗೆ ಕಾಣುತ್ತದೆ. ಒಂದು ವಾರ ತುಂಬಾ ಸಂತೋಷದಿಂದ ಈ ಸಭೆಯನ್ನು ನಡೆಸಬೇಕೆಂದು ನಾನು ಯೋಚನೆ ಮಾಡಿದ್ದೇನೆ. ಅದು ನನ್ನ ಅಪೇಕ್ಷೆಯಾಗಿದೆ. ಈ ಅಧಿವೇಶನದಲ್ಲಿ ಆ ವೆಲ್‌ನೊಳಗೆ ಬರಬಾರದೆಂದು ನಾನು ನಿಶ್ಚಯ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಕೂಡ ಈ ಸಭೆಯನ್ನು ತುಂಬಾ ಸಂತೋಷದಿಂದ ನಡೆಸಬೇಕೆಂದು ಇದ್ದೇವೆ. ನಮ್ಮ ಸರ್ಕಾರ ಬಂದಮೇಲೆ ನೀವು ಜೈಲಿನಲ್ಲಿ ಕೊಳೆಯುವ ಹಾಗೆ ಮಾಡುತ್ತೇವೆಂದು ನಾನು ಹೇಳಲಿಲ್ಲ. ಈಗ ನಮ್ಮ ಸರ್ಕಾರವಿದೆ ನೀವು ಜೈಲಿನಲ್ಲಿ ಕೊಳೆಯುವ ಹಾಗೆ ಮಾಡುವುದು ನಾನು ಅಪೇಕ್ಷೆಯಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸದ್ಭಾವನೆಗಳು ಬೆಳೆಯಬೇಕು. ಒಂದು ಪಕ್ಷದವರು ಅಧಿಕಾರಕ್ಕೆ ಬಂದರೆ ಮತ್ತೊಬ್ಬರನ್ನು ಜೈಲಿನಲ್ಲಿ ಕೊಳೆಸಬೇಕು ಎಂದು ಹೇಳುವುದು ಸದ್ಭಾವನೆಗಳನ್ನು ಖಂಡಿತಾ ಬೆಳೆಸುವುದಿಲ್ಲ. ನಿಮ್ಮ ಸ್ಥಾನಕ್ಕೆ ಆ ಮಾತು ಶೋಭೆ ತರತಕ್ಕದ್ದಲ್ಲ ಇದು ಖಂಡಿತವಾಗಿಯೂ ಒಳ್ಳೆಯದಲ್ಲ. ಮಾತಿನಲ್ಲಿ ಸಂಯಮ ಇಟ್ಟುಕೊಂಡರೆ ಎಲ್ಲರೂ ಸಂಯಮ ಇಟ್ಟುಕೊಳ್ಳುತ್ತಾರೆ. ಸಂಯಮದಿಂದ ಪಾರ್ಲಿಮೆಂಟರಿ ಡೆಮಾಕ್ರಸಿ ಬೆಳೆಯಬೇಕೇ ಹೊರತು ಈ ದೇಶದಲ್ಲಿ ಸಂಯಮ ತಪ್ಪಿ ಹತೋಟಿ ಮೀರಿದರೆ ಯಾವ ಪ್ರಜಾಪ್ರಭುತ್ವವು ಬೆಳೆಯುವುದಕ್ಕೆ ಸಾಧ್ಯವಿಲ್ಲ. ತಾವು ಹೇಳಿದ ಮಾತಿಗೆ ಹೇಳಿದ್ದೇನೆ. ಸಿಟ್ಟು ಬರಬೇಕಾದ ಅವಶ್ಯಕತೆಯಿಲ್ಲ. ಅವರು ಸಂಯಮದಿಂದ ಪಾರ್ಲಿಮೆಂಟರಿ ಡಿಬೇಟನ್ನು ಬೆಳೆಸಿದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಅದಕ್ಕೆ ಸರಿಯಾದ ಉತ್ತರವನ್ನು ಆಮೇಲೆ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವೀರಪ್ಪಮೊಯಿಲಿಯವರ ಬಗ್ಗೆ ವಿಶ್ವಾಸವಿದೆ, ಆತ್ಮಾಭಿಮಾನವಿದೆ, ಗೌರವವಿದೆ.

ಶ್ರೀ ವಾಟಾಳ್ ನಾಗರಾಜ್ : ಅರೆ, ಒಂದು ಸಾರಿ ಜೈಲಿನಲ್ಲಿ ಕೊಳೆಸುತ್ತೇವೆಂದು ಹೇಳುವುದು ಮತ್ತೊಂದು ಸಾರಿ ನಿಮ್ಮ ಮೇಲೆ ಪ್ರೀತಿಯಿದೆಯೆಂದು ಹೇಳುವುದು ಸರಿಯಲ್ಲ. ನಿಮಿಷ ನಿಮಿಷಕ್ಕೂ ಪಾತ್ರ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳಿದ್ದುದು ಮಾನ್ಯ ಮೊಯಿಲಿಯವರಿಗಲ್ಲ, ಮುಖ್ಯಮಂತ್ರಿ ಸ್ಥಾನದಲ್ಲಿದ್ದು ಅಪರಾಧ ಮಾಡಿದವರನ್ನು ಜೈಲಿನಲ್ಲಿಡುತ್ತೇವೆಂದು ಹೇಳಿದ್ದೇನೆ. ಅವರ ಬಗ್ಗೆ ವೈಯಕ್ತಿಕವಾಗಿ ಏನೂ ಇಲ್ಲ. ಮುಖ್ಯಮಂತ್ರಿಗಳಾಗಿ ಅಲ್ಲಿ ಏನು ಅಕ್ಷಮ್ಯ ಅಪರಾಧ ಮಾಡಿ ರಾಷ್ಟ್ರಧ್ವಜವನ್ನು ಹಾರಿಸುವವರ ಮೇಲೆ ಗುಂಡು ಹಾರಿಸಿದ್ದಾರೆ. ಈ ಅಪರಾಧ ಮಾಡಿದ ವ್ಯಕ್ತಿಯನ್ನು ಜೈಲಿನಲ್ಲಿಡುತ್ತೇವೆಂದು ಹೇಳಿದ್ದೇನೆ.

ವೈಯಕ್ತಿಕವಾಗಿ ನಿಮ್ಮ ಬಗ್ಗೆ ಗೌರವವಿದೆ. ಮುಖ್ಯಮಂತ್ರಿಸ್ಥಾನದಲ್ಲಿದ್ದವರು ಯಾರೇ ತಪ್ಪು ಮಾಡಿದರೂ ಸಹ ಮುಂದೆ ಶಿಕ್ಷೆ ಅನುಭವಿಸಬೇಕಾಗುತ್ತದೆಂದು ಹೇಳಿದ್ದೇನೆ. ನೋಡೋಣ. ಸಂದರ್ಭ ಹೇಗಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಯೋಧ್ಯೆ ಘಟನೆ ಆದಮೇಲೆ ಉತ್ತರಪ್ರದೇಶದಲ್ಲಿ ಆಯಿತಲ್ಲ, ಆ ರೀತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು, ನಿಮ್ಮ ಪರಿಸ್ಥಿತಿಯನ್ನು ನೋಡಿದರೆ ಅಯ್ಯೋ ಪಾಪ ಅನಿಸುತ್ತದೆ. ನೀವು ಯಾವಾಗ ಹೋಗುತ್ತೀರೋ ಆ ಕಡೆಗೆ ಗೊತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅಯೋಧ್ಯೆ ಘಟನೆಯಾದ ಮೇಲೆ ಉತ್ತರಪ್ರದೇಶದಲ್ಲಿ ಆಯಿತಲ್ಲ ಅದನ್ನು ನೆನಪಿಗೆ ತಂದುಕೊಟ್ಟೆ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒಂದು ಪ್ರಾಮಾಣಿಕವಾದ ವಿಚಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅವೊತ್ತಿನಿಂದ ಇವತ್ತಿನವರೆಗೆ ಒಂದು ಸಾವಿರ ಪೇರರ್ ಕಟಿಂಗ್ಸ್ ತರಿಸಿ ನೋಡಿ. ನಾನು ಪಕ್ಷದ ಪ್ರತಿನಿಧಿಯಾಗಿ ಒಂದು ಮಾತು ಹೇಳಿದ್ದೇನೆ. ರಾಷ್ಟ್ರಧ್ವಜವನ್ನು ಬಿಜೆಪಿಯವರು ನಾವೇ ಹಾರಿಸಬೇಕೆಂದೇನೂ ಇಲ್ಲ. ಅಂಜುಮಾನ್ ಇಸ್ಲಾಂ ಸಂಸ್ಥೆಯವರು ಆಗಿರಬಹುದು, ಯಾವುದೇ ಒಬ್ಬ ಮುಸ್ಲಿಂ ಮುಖಂಡ ಇರಬಹುದು. ಅಥವಾ ಸರ್ಕಾರದ ಯಾವುದೇ ನಾಲ್ಕೈದು ಜನ ಪ್ರತಿನಿಧಿಗಳಿರಬಹುದು ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬಹುದೆಂದು ನೂರಾರು ಬಾರಿ ರಾಜ್ಯದ ಜನರ ಮೂಲಕ ನಾನು ವಿನಂತಿ ಮಾಡಿದ್ದೇನೆ. ತಮ್ಮ ಇಂಟಲಿಜೆನ್ಸ್ ರಿಪ್ಪೋರ್ಟ್ ತೆಗೆದುಕೊಳ್ಳಿ. 1ನೇ ತಾರೀಖಿನಿಂದ 13ನೇ ತಾರೀಖಿನವರೆಗೆ 10ಜಿಲ್ಲೆಗಳಲ್ಲಿ ನಾನು ಮತ್ತು ಈಶ್ವರಪ್ಪನವರು 130-135 ಸಭೆ ಮಾಡಿದ್ದೇವೆ. ಪ್ರತಿಯೊಂದು ಸಭೆಯಲ್ಲೂ ಕೂಡ ನಾನು ಮೊದಲು ಹೇಳಿದ ವಿಷಯ ಅಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನವಾಗಿದೆ ಸರ್ಕಾರ ಮುಂದೆ ಬಂದು ಯಾರಾದರೂ ಒಬ್ಬ ಪ್ರತಿನಿಧಿಯಿಂದ ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವಂತಹ ಪ್ರಯತ್ನ ಮಾಡಬೇಕು. ನಾವೇ ಹಾರಿಸಬೇಕೆನ್ನುವಂಥ ಯಾವುದೇ ಷರತ್ತು ಇಲ್ಲ. ಎಲ್ಲಾ ಸಂದರ್ಭಗಳಲ್ಲಿಯೂ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಮನವೊಲಿಸುವ ಪ್ರಯತ್ನ ಮಾಡಿದ್ದೇನೆ. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ನೀವು ನಾವು ಧ್ವಜವನ್ನು ಹಾರಿಸಿಲ್ಲವೆಂದು ಹೇಳಿ.

ನಮ್ಮ ಪೊಲೀಸ್ ಉನ್ನತಾಧಿಕಾರಿಗಳು ಇದ್ದಾರೆ ಅವರ ವರದಿಯನ್ನು ತರಿಸೋಣ. ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಮೊನ್ನೆ ಆಗಸ್ಟ್ 15, 1994ರಂದು ಬೆಳಿಗ್ಗೆ 6.45ಕ್ಕೆ ರಮೇಶ್ ಕಾಸರಗೋಡು, ಶಿರಸಿ ಅನಂತಕುಮಾರ್, ದಕ್ಷಿಣಕನ್ನಡ ಜಿಲ್ಲೆಯ ಸತ್ಯಜಿತ್ ಈ ಮೂರು ಜನ ಅಲ್ಲಿಗೆ ಹೋಗಿ ಬೆಳಿಗ್ಗೆ 6.45ಕ್ಕೆ ತಮ್ಮ ಚಕ್ರವ್ಯೂಹವನ್ನು ಭೇದಿಸಿ ಪ್ರಾಣದಹಂಗನ್ನು ತೊರೆದು ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದರು. ತಾವು ಹಾರಿಸಿಲ್ಲವೆಂದು ಹೇಳುತ್ತೀರಿ, ತುಂಬಾ ಸಂತೋಷ. ನಮ್ಮ ಹತ್ತಿರ ಅದಕ್ಕೆ ಬೇಕಾದ ಎಲ್ಲ ಪುರಾವೆಗಳಿವೆ. ನಿಮ್ಮ ಪೊಲೀಸ್‌ನವರು ಆವತ್ತೆ ಬೆಳಿಗ್ಗೆ ಬಂಧಿಸಿಟ್ಟಿದ್ದಾರೆ. ಮೂರು ಜನ ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಮಾಹಿತಿ ಇದೆ. ಮೂರು ಜನರನ್ನು ನಾನು ಬೆಳಿಗ್ಗೆ 7 ಗಂಟೆಗೆ ಭೇಟಿ ಮಾಡಿದ್ದೇನೆ. ಆವೊತ್ತು ರಾತ್ರಿ ನಾನು ಮಂಗಳವಾರಪೇಟೆಯಲ್ಲಿ ಉಳಿದಿದ್ದೆ. ಅಲ್ಲಿಂದಲೇ ನಮ್ಮ ಪತ್ರಿಕಾ ಪ್ರತಿನಿಧಿಗಳನ್ನು ದೂರವಾಣಿ ಮೂಲಕ ಸಂಪರ್ಕಮಾಡಿ ಹೇಳಿದ್ದೇನೆ. ನಾನು ನಮ್ಮ ಮುಖ್ಯಮಂತ್ರಿಗಳು ಮತ್ತು ನಮ್ಮ ಪೊಲೀಸರು ಎಂದು ಹೇಳುತ್ತೇನೆ. ಅವರು ನಿಮ್ಮ ಪಕ್ಷದವರಾಗಿದ್ದರೂ ರಾಜ್ಯದ ಮುಖ್ಯಮಂತ್ರಿಗಳು, ಆದ್ದರಿಂದ ನಮ್ಮ ಸರ್ಕಾರ ನಮ್ಮ ಪೊಲೀಸರು ಎಂದು ಹೇಳುತ್ತೇನೆ. ನೀವು ಅದನ್ನು ಒಪ್ಪದಿರಬಹುದು. ಇದು ಜನರ ಸರ್ಕಾರ ಯಾರೇ ಇದ್ದರೂ ಗೌರವ ಕೊಡಬೇಕಾಗುತ್ತದೆ.

6.45ಕ್ಕೆ ರಾಷ್ಟ್ರಧ್ವಜವನ್ನು ಹಾರಿಸಲಾಗಿದೆಯೆಂದು ಪತ್ರಕರ್ತರಿಗೆ ತಿಳಿಸಿದ್ದೇನೆ. ಯಾವ ಕಾರಣಕ್ಕೋಸ್ಕರ ಈದ್ಗಾ ಮೈದಾನದ ಹತ್ತಿರ ಸಾವಿರಾರು ಜನ ಯಡಿಯೂರಪ್ಪನವರ ತಂಡ, ಈಶ್ವರಪ್ಪನವರ ತಂಡ ಮತ್ತು ಉಮಾಭಾರತಿಯವರ ತಂಡ ಹೋಗುತ್ತಿತ್ತೋ ಅದರ ವಿರುದ್ಧ ದಿಕ್ಕಿನಲ್ಲಿ ಈದ್ಗಾ ಮೈದಾನಕ್ಕೆ ಹೋಗಿ ರಾಷ್ಟ್ರಧ್ವಜವನ್ನು ಹಾರಿಸಿ ವಿಜಯೋತ್ಸವವನ್ನು ಆಚರಿಸಿದ್ದೇವೆ. ನಾವು ನಮ್ಮ ಗುರಿ ಮುಟ್ಟಿದ್ದೇವೆ. 7.15ಕ್ಕೆ ರಾಜ್ಯದ ಬಿಜೆಪಿ ಪಾರ್ಟಿ ಆಫೀಸಿಗೆ ವಿಷಯ ತಿಳಿಸಿದ್ದೇವೆ. 9 ಗಂಟೆಗೆ ಇಡೀ ರಾಜ್ಯದಲ್ಲಿ ವಿಜಯೋತ್ಸವ ಆಚರಿಸಿದ್ದೇವೆ. ನಾವು ಮುಖ್ಯಮಂತ್ರಿಗಳನ್ನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ, ಅಧ್ಯಕ್ಷರ ಕೊಠಡಿಗೆ ಹೋಗೋಣ ವಿರೋಧಪಕ್ಷದ ನಾಯಕರನ್ನು, ಪತ್ರಿಕಾಕರ್ತರನ್ನು ಕರೆಯಿರಿ. ಎಲ್ಲಾ ಸಂದರ್ಭಗಳಲ್ಲೂ ನಮ್ಮ ಪೊಲೀಸ್ ಅಧಿಕಾರಿಗಳು ವಿಡಿಯೋ ಕ್ಯಾಸೆಟ್ ಫೋಟೋ ತೆಗೆದುಕೊಳ್ಳುವುದು ವಾಡಿಕೆಯಿದೆ. ನಾವು ಮೂರು ತಂಡಗಳು ಬೆಳಿಗ್ಗೆ 6.45ಕ್ಕೆ ರಾಷ್ಟ್ರಧ್ವಜವನ್ನು ಹಾರಿಸಿ ಆದಮೇಲೆ ನಾವು ಎಲ್ಲಾ ಹನ್ನೊಂದು ಮೂವತ್ತಕ್ಕೆ ಹೊರಟು ಬರಬೇಕಾಗಿತ್ತು. ನಾವೆಲ್ಲ ವಿರುದ್ಧ ದಿಕ್ಕಿನಲ್ಲಿ ಹೋಗಿದ್ದೇವೆ. ಯಾವುದಾದರೂ ಒಂದು ತಂಡ ಈದ್ಗಾ ಮೈದಾನಕ್ಕೆ ಬರುತ್ತಿದ್ದರು. ಅಂತಹ ವಿಡಿಯೋ ಕ್ಯಾಸೆಟ್ ಇದ್ದರೆ ಅಧ್ಯಕ್ಷರ ಕೊಠಡಿಯಲ್ಲಿ ಪ್ರದರ್ಶನ ಮಾಡಿ, ನಾವು ಈ ರಾಜ್ಯದ ಜನತೆಗೆ ಸದನದ ಮೂಲಕ ಭರವಸೆಯನ್ನು ಕೊಡುತ್ತಿದ್ದೇನೆ ಯಡಿಯೂರಪ್ಪ, ಈಶ್ವರಪ್ಪ, ಅನಂತಕುಮಾರ್ ಈ ಬ್ಯಾಚ್ ಆ ಕಡೆ ಬರುತ್ತಿತ್ತು ಎಂದು ಹೇಳಿದರೆ, ಅದನ್ನು ಅಧ್ಯಕ್ಷರ ಕೊಠಡಿಯಲ್ಲಿ ಸಾಬೀತು ಮಾಡಿದರೆ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ. ನಾವು ಅದೇ ಸ್ಥಾನದಲ್ಲಿ ಮಾಡಿರುವ ವಿಡಿಯೋ ಕ್ಯಾಸೆಟ್ ಇಲ್ಲಿದೆ ನಾನು ನಿಮಗೆ ಕಳುಹಿಸಿ ಕೊಡುತ್ತೇನೆ. ಈ (ಸಂದರ್ಭದಲ್ಲಿ ವಿಡಿಯೋ ಕ್ಯಾಸೆಟ್ ಸಭೆಗೆ ತೋರಿಸಿದರು) . ನೀವು ಯಾವ ಸಮಯದಲ್ಲಿ ಹೇಳುತ್ತೀರಿ ಆ ಸಮಯಕ್ಕೆ ವಿರೋಧ ಪಕ್ಷದ ನಾಯಕರು ಇಲ್ಲಿನ ಪ್ರಮುಖರು ಅಲ್ಲಿಗೆ ಬರಲಿ, ಈ ವಿಡಿಯೋ ಕ್ಯಾಸೆಟ್‌ನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದ ವರೆಗೆ ನಡೆದ ಘಟನೆಗಳ ಎಲ್ಲ ವಿವರಗಳು ಇವೆ. ನಾವು ಏನಾದರೂ ಈದ್ಗಾ ಮೈದಾನದ ಹತ್ತಿರ ಬರುತ್ತಿದ್ದೇವೆಂದು ತೋರಿಸಿದರೆ ಸದನ ಹೇಳುವಂತಹ ಶಿಕ್ಷೆಗೆ ಗುರಿಯಾಗುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಅನಂತಕುಮಾರ್ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಯಡಿಯೂರಪ್ಪನವರು ಬಾವುಟ ಹರಿಸಿದ್ದಾರೆಂದು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಅಲ್ಲಿಗೆ ಬರುತ್ತೇನೆ. 6.45ಕ್ಕೆ ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವಂತಹ ವಿಡಿಯೋ ಕ್ಯಾಸೆಟನ್ನು ಪೊಲೀಸ್ ಅಧಿಕಾರಿಗಳು ಅವರ ಆತ್ಮಸಾಕ್ಷಿಗೆ ಬದ್ಧರಾಗಿ, ವಿಡಿಯೋ ಕ್ಯಾಸೆಟ್ ಮತ್ತು ಫೋಟೋಗಳನ್ನು ಕಿತ್ತುಕೊಂಡು ಹಾಳುಮಾಡಲಿಲ್ಲವೆಂದು ಮುಖ್ಯಮಂತ್ರಿಗಳ ಮೂಲಕ ಹೇಳಿಸಲಿ. ಇಷ್ಟಾದರೂ ಸಹ 6.45ಕ್ಕೆ ರಾಷ್ಟ್ರಧ್ರಜವನ್ನು ಹಾರಿಸಿರುವಂತಹ ಫೋಟೋಗಳನ್ನು ಇಡೀ ನಾಡಿನ ಜನಗಳಿಗೆ ನಾವು ಬಹಿರಂಗ ಮಾಡಿದ್ದೇವೆ. ಈಗಲೂ ಸದನದಲ್ಲಿ ಹೇಳುತ್ತಿದ್ದೇನೆ, 6.45ಕ್ಕೆ ನಾವು ರಾಷ್ಟ್ರಧ್ವಜವನ್ನು ಹಾರಿಸಿದ್ದೇವೆ. ಸರ್ಕಾರದವರು ಬಾವುಟವನ್ನು ಹಾರಿಸಲಿಕ್ಕೆ ಬಿಡಲಿಲ್ಲವೆಂದು ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ. 12.15ಕ್ಕೆ ದೇಶಪಾಂಡೆ ನಗರದಿಂದ ಒಂದೂವರೆ ಎರಡು ಕಿಲೋಮೀಟರ್ ದೂರ ಬಂದು ನೇರವಾಗಿ ಗೋಲಿಬಾರ್ ಮಾಡುವಂತಹ ಅಗತ್ಯವೇನು ಸ್ವಾಮಿ? ಈ ಪ್ರಶ್ನೆಗೆ ಉತ್ತರವನ್ನು ಹುಡುಕಿ ಪರಿಹಾರವನ್ನು ಹುಡುಕುವ ಚರ್ಚೆ ನಡೆಯುವ ಮಹತ್ವ ಘಟ್ಟ. ಇದು ಪ್ರಮುಖವಾದ ಸಂಗತಿ. ತಾವು ಒಪ್ಪದೇ ಇರಬಹುದು. ವಾಸ್ತವಿಕವಾಗಿ ಏನು ನಡೆದಿದೆ ಎನ್ನುವ ಸಂಗತಿಯನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಒಂದು ಶ್ವೇತಪತ್ರವನ್ನು ಹೊರಡಿಸಿ, ರಾಜ್ಯದಲ್ಲಿ ತಮ್ಮ ಪ್ರಕಾರ ಎಲ್ಲಿ ರಾಷ್ಟ್ರಧ್ವಜರನ್ನು ಹಾರಿಸಬೇಕು ಎಲ್ಲಿ ಹಾರಿಸಬಾರದು ಎನ್ನುವ ಒಂದು ಪಟ್ಟಿಯನ್ನು ಬಿಡುಗಡೆ ಮಾಡಿ. ಅದು ನಾಡಿನ

ಜನತೆಗೆ ಬೇಕಾಗಿದೆ. ಎರಡನೆಯದು ರಾಜ್ಯಪಾಲರನ್ನು ಹೋಗಿ ಭೇಟಿ ಮಾಡಿದ್ದೇವೆ. ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಏಕೆ ದೊಡ್ಡ ಸಮಸ್ಯೆ ಮಾಡುತ್ತೀರಿ ಅದಕ್ಕೆ ಒಂದು ಪರಿಹಾರವನ್ನು ಹುಡುಕಿಯೆಂದು ಹೇಳಿದರು. ಹೋಮ್‌ಮಿನಿಸ್ಟರ್ ಚೌಡರೆಡ್ಡಿಯವರು ಹೇಳಿಕೆ ಕೊಟ್ಟಿರುವುದು ಪತ್ರಿಕೆಗಳಲ್ಲಿ ಬಂದಿದೆ. ಹಾಗಾದರೆ ರಾಜ್ಯಪಾಲರು ನಿಮಗೆ ಏನು ಹೇಳಿದ್ದರು? ಕ್ಯಾಬಿನೆಟ್ ಮೀಟಿಂಗ್ ಕರೆದು ನೀವು ಅಡ್ವೈಸ್ ತೆಗೆದುಕೊಳ್ಳಲಿಲ್ಲ.

ವಿರೋಧ ಪಕ್ಷದ ನಾಯಕರಾದ ಮಾನ್ಯ ದೇಶಪಾಂಡೆಯವರು, ಚಂದ್ರೇಗೌಡರು ಹೇಳಿದಂತೆ ವಿರೋಧಪಕ್ಷದವರು ಸಭೆಕರೆದು ನಮ್ಮ ಯಾರದ್ದೂ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಇಷ್ಟಪಡಲಿಲ್ಲ. ನಾವೇ ಬಂದು ನಿಮಗೆ ವೈಯಕ್ತಿಕವಾದ ಮನವಿಯನ್ನು ಸಲ್ಲಿಸಿದೆವು. ನಿಮ್ಮ ಪ್ರತಿನಿಧಿಗಳು ಯಾರಾದರೂ ಬಂದು ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವಂತೆ ಪ್ರಾರ್ಥನೆಯನ್ನು ಕೂಡ ಮಾಡಿದೆವು. ಸ್ವತಃ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಸಿಕಂದರ್ ಭಕ್ತ್ ಅವರು ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ನಿಮ್ಮ ಮುಖ್ಯಮಂತ್ರಿಯವರನ್ನು ಕನ್ವಿನ್ಸ್ ಮಾಡಿ ಎಂದು ಹೇಳಿದರು. ಅಂದರೆ ನಾವು ಎಲ್ಲ ರೀತಿಯ ಸಂಧಾನಕ್ಕೆ ಬದ್ಧರಾಗಿದ್ದರೂ ಸಹ ಅದು ಯಾವುದಕ್ಕೂ ಅವಕಾಶ ಕೊಡದೆ ಗುಂಡಿನಿಂದ ಉತ್ತರ ಕೊಡತಕ್ಕಂಥ, ಅಕ್ಷಮ್ಯ ಅಪರಾಧವನ್ನು ಸರ್ಕಾರ ಮಾಡಬಾರದಾಗಿತ್ತು, ಮುಂದಿನ ಪೀಳಿಗೆ ನಿಮ್ಮನ್ನು ಕ್ಷಮಿಸುವುದಿಲ್ಲ ಎಂದು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ತಾವು ಮುಖ್ಯಮಂತ್ರಿಯಾಗಿ ಎಲ್ಲ ಕಡೆ ಒಂದು ಮಾತನ್ನು ಹೇಳುತ್ತಿದ್ದೀರಿ. ಇದು ಡಿಸ್‌ಪ್ಯೂಟೆಡ್ ಲ್ಯಾಂಡ್ ಎಂದು. ಸನ್ಮಾನ್ಯ ಅಧ್ಯಕ್ಷರೇ, ದಯಮಾಡಿ ಇದು ಒಂದೇ ಕಾಪಿ ಇದೆ, ಇದನ್ನು ನಾನು ತಮಗೆ ಕಳಿಸಿ ಕೊಡುತ್ತಿದ್ದೇನೆ. ಇವು ಮೂರೂ ಕೋರ್ಟಿನ ಆದೇಶಗಳು.

(ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರಿಗೆ ಆದೇಶಗಳ ಪ್ರತಿಗಳನ್ನು ಕಳಿಸಿಕೊಟ್ಟರು) ಎಲ್ಲಾದರೂ ಒಂದು ಕಡೆ ಒಂದು ಸಾರಿ ಒಂದು ಡಿಸ್‌ಪ್ಯೂಟೆಡ್ ಲ್ಯಾಂಡ್ ಇದೆ ಯಡಿಯೂರಪ್ಪನವರೇ, ಎಂದು ತಾವು ಹೇಳಿದರೆ ತಾವು ಹೇಳಿದಂಥ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ಒಬ್ಬ ಮುಖ್ಯಮಂತ್ರಿಯಾಗಿ ಈ ನಾಡಿನ ಜನರನ್ನು ತಪ್ಪುದಾರಿಗೆ ಎಳೆಯಬಾರದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಈಗ ಚರ್ಚೆ ಹಾದಿತಪ್ಪಿ ಹೋಗುತ್ತಿದೆಯೇನೋ ಎಂದು ನನಗನ್ನಿಸುತ್ತಿದೆ. ಅವರು ಕೊಟ್ಟಿರತಕ್ಕಂಥ ನಿಲುವಳಿ ಸೂಚನೆ ಏನಿದೆ ಎಂದರೆ, ಐದು ಜನ ಅಮಾಯಕರು ಹುಬ್ಬಳ್ಳಿಯಲ್ಲಿ ಗೋಲಿಬಾರ್‌ನಲ್ಲಿ ನಿಧನರಾಗಿರುವ ಬಗ್ಗೆ ಚರ್ಚೆ ಮಾಡಬೇಕು ಎಂದು ಕೇಳಿದ್ದಾರೆ. ಈದ್ಗಾ ಮೈದಾನಕ್ಕೂ ಮತ್ತು ಗೋಲಿಬಾರ್ ಆದ ಸ್ಥಳಕ್ಕೂ ಎರಡು ಕಿಲೋಮೀಟರ್ ದೂರ ಇದೆ. ಧ್ವಜ ಹಾರಿಸಬೇಕೆಂದು ಹೋದ ಸಂದರ್ಭದಲ್ಲಿ ನಡೆದ ಘಟನೆ ಇದಲ್ಲ. ದೇಶಪಾಂಡೆ ನಗರದಲ್ಲಿ ಕರ್ಫ್ಯೂ ಇದ್ದಾಗ ಪೋಲೀಸ್ ವಾಹನಗಳನ್ನು ಜನರೆಲ್ಲರೂ ಸೇರಿ ಸುಟ್ಟುಹಾಕತಕ್ಕಂಥ ಪ್ರಯತ್ನ ನಡೆದಾಗ ಪೋಲೀಸಿನವರು ಗೋಲಿಬಾರ್ ಮಾಡಿದ್ದಾರೆ. ಗೋಲಿಬಾರ್ ಮಾಡಿರುವುದು ಸರಿಯೇ, ಹೆಚ್ಚಿನ ಶಕ್ತಿಯನ್ನು ಉಪಯೋಗಿಸಿದ್ದಾರೆಯೇ ಎನ್ನುವ ಬಗ್ಗೆ ಈಗಾಗಲೇ ನ್ಯಾಯಾಂಗ ತನಿಖೆಗೆ ಆದೇಶವಾಗಿದೆ. ಆದ್ದರಿಂದ ಈ ಹಿನ್ನಲೆಯನ್ನೆಲ್ಲ ಹೇಳಿಕೊಂಡು ರಾಜಕೀಯವಾಗಿ ಉಪಯೋಗಿಸಿಕೊಳ್ಳತಕ್ಕಂಥ ಪ್ರಮೇಯ ಇಲ್ಲವೇ ಇಲ್ಲ. ಇಡೀ ರಾಷ್ಟ್ರದಲ್ಲಿ ಯಾವುದೇ ಕಾಲದಲ್ಲಿ ಹಿಂಸೆ ಜಾಸ್ತಿಯಾದಾಗ ....

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಾಮಿ, ಅವರು ಜಗಳ ಮಾಡಿದ್ದೇ ರಾಜಕಾರಣಕ್ಕಾಗಿ. ಅದನ್ನೇ ಮಾತನಾಡಬೇಡಿ ಎಂದು ಹೇಳಿದರೆ ಹೇಗೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ರಾಜಕಾರಣ ಬೇಕಾದರೆ ಬೇರೆ ಪ್ಲಾಟ್‌ಫಾರಂಗಳಲ್ಲಿ ಮಾಡಿಕೊಳ್ಳಲಿ, ಇಲ್ಲಿ ಬೇಡ. ಈದ್ಗಾ ಮೈದಾನಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಇವರ ನಿಲುವಳಿ ಸೂಚನೆ ಇರುವುದು ದೇಶಪಾಂಡೆ ನಗರದಲ್ಲಿ ಗೋಲಿಬಾರ್

ಆಯಿತು, ಆಗ ನಾಲ್ಕೈದು ಜನ ಸತ್ತರು. ಇಷ್ಟು ಇರುವುದು. ಇದರ ಬಗ್ಗೆ ಈಗಾಗಲೇ ವಿಚಾರಣೆಯಾಗಿ ನ್ಯಾಯಾಧೀಶರನ್ನು ನೇಮಕ ಮಾಡಿ ಎಂದು ನಾವು ಉಚ್ಚ ನ್ಯಾಯಾಲಯವನ್ನು ಕೇಳಿದ್ದೇವೆ. ನ್ಯಾಯಾಂಗ ತನಿಖೆ ಮಾಡುವುದಕ್ಕೆ ಮುಂಚೆಯೇ ನೀವು ಭಾಷಣ ಮಾಡಿದ್ದರೆ, ನ್ಯಾಯಾಂಗ ತನಿಖೆ ಮಾಡಿ ಎಂದು ಕೇಳಬಹುದಾಗಿತ್ತು. ಈಗಾಗಲೇ ಅದು ಮುಗಿದುಹೋಗಿದೆ. ಹೀಗಿರುವಾಗ ತಾವು ಯಾವ ಹಂತದಲ್ಲಿ, ಯಾವ ಕಾರಣಕ್ಕಾಗಿ ಮಾತನಾಡುತ್ತಿದ್ದೀರೋ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ ಹಾಗೆಯೇ ಆವತ್ತು ಕರ್ಫ್ಯೂ ಇತ್ತು. ಅದನ್ನು ಉಲ್ಲಂಘನೆ ಮಾಡಿದರೆ ಅದು ಅಕ್ಷಮ್ಯ ಅಪರಾಧ. ನೀವು ಏನು ಬೇಕಾದರೂ ಶಿಕ್ಷೆ ಕೊಡಿ. ಅರೆಸ್ಟ್ ಮಾಡಿ, ಲಾಠಿ ಚಾರ್ಜ್‌ಮಾಡಿ, ಟಿಯರ್‌ಗ್ಯಾಸ್ ಹಾಕಿ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಲಿ. ದೇಶಪಾಂಡೆ ನಗರದಲ್ಲಿ ಗೋಲಿಬಾರ್ ಮಾಡುವಂಥ ಅಗತ್ಯ ಏನಿತ್ತು? ದೇಶಪಾಂಡೆ ನಗರದಲ್ಲಿ ವಾಸವಾಗಿರುವಂಥ ವಿಧಾನ ಪರಿಷತ್ ಸದಸ್ಯೆ ಪದ್ಮಭೂಷಣ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರು ಇದಕ್ಕೆ ಪ್ರತ್ಯಕ್ಷದರ್ಶಿಗಳು. ಅವರು ಪ್ರತ್ಯಕ್ಷವಾಗಿ ಗೋಲಿಬಾರ್‌ನ್ನು ನೋಡಿದಂಥವರು. ಕೆಎಸ್‌ಆರ್‌ಪಿ ಸೆಕೆಂಡ್ ಬೆಟಾಲಿಯನ್‌ನವರು ದೇಶಪಾಂಡೆ ನಗರದಲ್ಲಿ ಗೋಲಿಬಾರ್ ಮಾಡಿದ್ದನ್ನು ಅವರು ಪ್ರತ್ಯಕ್ಷವಾಗಿ ನೋಡಿದ್ದಾರೆ. ಪೋಲೀಸ್ ಕಮೀಷನರ್ ಮೆಂಡೆಗಾರ್ ಅವರನ್ನು ಅವರು ಭೇಟಿ ಮಾಡಿದ್ದರು. ಗಣ್ಯರ ನಿಯೋಗ ಹೋಗಿತ್ತು. ಅವರು ಹೋಗಿ ಡಿ.ಜಿ.ಪಿ. ಶ್ರೀ 'ರಾಮಲಿಂಗಂ ಅವರನ್ನು ಭೇಟಿಮಾಡಿದ್ದರು. ಸಾವಿರ ಜನ ಸೇರಿದರೆ, ಗಲಭೆ ಮಾಡಿದರೆ ಲಾಠಿಜಾರ್ಜ್ ಮಾಡಿ ಓಡಿಸುತ್ತೀರಿ. ಎರಡು ಸಾವಿರ ಜನ ಸೇರಿದರೆ ಟಿಯರ್‌ಗ್ಯಾಸ್ ಶೆಲ್ ಹಾಕುತ್ತೀರಿ ಅಥವಾ ಗಾಳಿಯಲ್ಲಿ ಗುಂಡು 'ಹಾರಿಸುತ್ತೀರಿ. 50-60 ಜನ ಇದ್ದಂಥ ಆ ಗುಂಪಿನ ಮೇಲೆ ನೇರವಾಗಿ ಗುಂಡಿಕ್ಕಿ ಕೊಂದರಲ್ಲ, ಇದಕ್ಕೆ ಏನಾದರೂ ಉತ್ತರ ಇದೆಯೇ ಎಂದು ನಿಮ್ಮ ಅಧಿಕಾರಿಗಳನ್ನು ಕೇಳಿದಾಗ

4.55 ಪಿ.ಎಂ.

ಅಧಿಕಾರಿಗಳು ನಿರುತ್ತರರಾದರು, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ನೀವು ಅಲ್ಲಿ ಗೋಲಿಬಾರ್ ಆಗದಂತೆ ನೋಡಿಕೊಳ್ಳಬಹುದಾಗಿತ್ತು. ಗೋಲಿಬಾರ್ ಮಾಡಬೇಕೆಂದಿದ್ದರೆ 15-20 ಸಾವಿರ ಜನ ಪೋಲೀಸರನ್ನು, ಮಿಲಿಟರಿಯನ್ನು ಅಲ್ಲಿಗೆ ಕರೆಸಿ ಈ ರೀತಿ ಮಾಡುವಂತಹ ಅಗತ್ಯ ಇರಲಿಲ್ಲ. ಎಂದೂ ಸಹ ಈ ನಾಡಿನಲ್ಲಿ ಜನರ ಒಂದು ಗುಂಪು ಸೇರಿದ ತಕ್ಷಣ ನೇರವಾಗಿ ಗುಂಡು ಹಾಕುವುದಕ್ಕೆ ಬರುವುದಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಶಾಂತಿ ಸುವ್ಯವಸ್ಥೆಯನ್ನು ನೋಡಿಕೊಳ್ಳುವಂತಹ ಜವಾಬ್ದಾರಿ ತಮ್ಮ ಮೇಲಿತ್ತು. ಗೋಲಿಬಾರ್ ಆಗಲೀ ಎಂದೇ ಈ ಆಜ್ಞೆಯನ್ನು ತಾವು ಉಲ್ಲಂಘನೆ ಮಾಡಿಸಿದ್ದೀರಿ. ಇದನ್ನು ಮುಂದೆ ಉಪಯೋಗಿಸಿಕೊಳ್ಳಬಹುದು ಎಂದು ಹೇಳಿ ಗೋಲಿಬಾರನ್ನು ಸ್ವಾಗತ ಮಾಡಿ ಗೋಲೀಬಾರೇ ಆಗಬೇಕು ಇದು, ಏತಕ್ಕೆಂದರೆ ಚುನಾವಣೆಯಲ್ಲಿ ಇದೊಂದು ಅಸ್ತ್ರವಾಗುತ್ತದೆ ಎಂದು ಹೇಳಿ ಈ ರೀತಿ ಮಾಡಿ ಅಮಾಯಕರು ಬಲಿಯಾಗಿದೆ ಎಂದು ಹೇಳುವುದರಲ್ಲಿ ಏನೂ ತಪ್ಪಾಗಲಾರದು ಎಂದು ನನಗನ್ನಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ತಾವು ಓಟು ಬ್ಯಾಂಕು ರಾಜಕಾರಣ ಮಾಡಿ ಗೋಲಿಬಾರ್ ಮಾಡಿದ್ದೀರಿ, ನಿಮಗೆ ಲಾಭವಾಗುತ್ತದೆ ಎಂದು ಹೇಳಿ, ಹಾಗಾದರೆ ನಿಮ್ಮ ಉದ್ದೇಶ ಏನಿತ್ತು ಸ್ವಾಮಿ. ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಏತಕ್ಕೆ ನೀವು ಹೀಗೆ ಮಾಡಿದ್ದೀರಿ ಗೊತ್ತೆ, ನಮ್ಮ ಮುಖ್ಯಮಂತ್ರಿಗಳ ಅಪೇಕ್ಷೆ ಇತ್ತು

ನಿರೀಕ್ಷೆ ಇತ್ತು, ಇಲ್ಲಿ ಹಿಂದು-ಮುಸ್ಲಿಂ ಗಲಭೆಯಾಗುತ್ತದೆ. ಏನಾದರೂ ಮಾಡಿ ಜಾತೀಯ ವಿಷಬೀಜ ಬಿತ್ತಬೇಕೆಂದು ಪ್ರಯತ್ನ ಮಾಡಿದಿರಿ, ನಾನು ಈ ಸದನದಲ್ಲಿ ದಾಖಲೆಗಳನ್ನು ಕೊಡುತ್ತೇನೆ. ಇವತ್ತು ರಾಜ್ಯದ ಅಲ್ಪಸಂಖ್ಯಾತ ಬಂಧುಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಾಂಗ್ರೆಸ್ ಸರಕಾರದ ಈ ಪ್ರಚೋದನೆಗೆ ಅವರು ಈಲ್ಡ್ ಆಗಲಿಲ್ಲ. ಅಂಜುಮಾನ್ ಇಸ್ಲಾಂ ಸಂಸ್ಥೆಯವರಿಗೆ, ನಮ್ಮ ಅಲ್ಪಸಂಖ್ಯಾತ ಮೋರ್ಚಾದ ಪ್ರಮುಖರಾದ ಅಬ್ಬಾಸ್ ಅಲಿಬೋರಾ ಅವರು ಹೋಗಿ ಮೀಟ್ ಮಾಡಿದರು, ವಿವರಗಳನ್ನು ಹೇಳಿದರು, ಎರಡು ದಿವಸ ಹುಬ್ಬಳ್ಳಿಯಲ್ಲಿದ್ದರು. ಅವರು ಹೇಳಿದರು, ನಮ್ಮದು ಯಾರದೂ ಅಭ್ಯಂತರ ಇಲ್ಲ, ಸರಕಾರ ಒಪ್ಪುವುದಾದರೆ, ನಾವು ನಿಮ್ಮ ಜೊತೆ ಬಂದು ರಾಷ್ಟ್ರಧ್ವಜ ಹಾರಿಸುತ್ತೇವೆ ಎಂದು ಹೇಳಿದರು. ಎರಡನೆಯದು ಮತ್ತೆ ಮತ್ತೆ ಬಿಜೆಪಿಯವರು ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಹೊರಟಿದ್ದರು ಎಂದು ಹೇಳುತ್ತೀರಲ್ಲ, ನಾವು ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದ್ದೇವೆ, ರಾಜ್ಯಪಾಲರಿಗೆ ವಿನಂತಿ ಮಾಡಿದ್ದೇವಲ್ಲ, ರಾಜ್ಯಪಾಲರಿಗೆ ಹೇಳಿದೆವು, ರಾಷ್ಟ್ರಧ್ವಜ ಕೊಟ್ಟು ಯಾರಾದರೂ ನಿಮ್ಮ ಪ್ರತಿನಿಧಿಯನ್ನು ಕಳುಹಿಸಿ, ಒಬ್ಬ ಅಲ್ಪಸಂಖ್ಯಾತ ಬಂಧುವಿನಿಂದ ಅಥವಾ ಬೇರೆ ಯಾರಿಂದಲಾದರೂ ರಾಷ್ಟ್ರಧ್ವಜವನ್ನು ಹಾರಿಸಿ ಎಂದು ಹೇಳಿದೆವಲ್ಲ, ಅದನ್ನು ನೀವು ಏತಕ್ಕೆ ಮಾಡಲಿಲ್ಲ. ಎರಡನೆಯದು, ಈ ಒಂದು ಈದ್ಗಾ ಮೈದಾನ ಡಿಸ್ಪೂಟೆಡ್ ಲ್ಯಾಂಡ್ ಎಂದು ತಾವು ಹೇಳುತ್ತಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, ಇದು ಕಾರ್ಪೋರೇಷನ್‌ಗೆ ಸೇರಿದ ಜಾಗ ಎನ್ನುವುದಕ್ಕೆ ತಮಗೆ ಎಲ್ಲಾ ಕೋರ್ಟಿನ ಒಂದು ಜಡ್ಜ್‌ಮೆಂಟ್ ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಯಾವುದೇ ಕೋರ್ಟಿನಲ್ಲಿ ಈ ಸ್ಥಳದ ಟೈಟಲ್ ಬಗ್ಗೆ ವಿವಾದ ಇಲ್ಲ. ಹಿಂದೆ ಅಂಜುಮಾನ್ ಸಂಸ್ಥೆಯವರು ಹುಬ್ಬಳ್ಳಿ ನಾಗರೀಕರು ಮುನ್ಸಿಫ್ ಕೋರ್ಟಿಗೆ ಹೋದರು. 1972ರಲ್ಲಿ ಒಎಸ್‌ನಂ. 359 ಹೋದರು, 7.12.93 ಅವರು ತೀರ್ಪು ಕೊಟ್ಟರು. ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಹುಬ್ಬಳ್ಳಿಯಲ್ಲಿ 1982ರಲ್ಲಿ ಒಎಸ್.ನಂ. 754 ರಲ್ಲಿ ಅವರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಕರ್ನಾಟಕ ಹೈಕೋರ್ಟ್ ಆರ್‌ಎಎಸ್ ನಂ 1 - 83 ಡೇಟೆಡ್ 18.6.92 ಈ ಮೂರು ಕೋರ್ಟಿನ ಆದೇಶ ಪ್ರಮುಖವಾದುದು. ಮೂರು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ಮೊದಲನೆಯದು ಅಂಜುಮಾನ್ ಇಸ್ಲಾಂ ಮತ್ತು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ. ಈ ಎರಡರ ನಡುವೆ ಆಗಿರುವ ಒಪ್ಪಂದ ಲೀಸ್ ಅಲ್ಲ, ವರ್ಷಕ್ಕೆ ಎರಡುಬಾರಿ ಪ್ರೈಯರ್ ಮಾಡಲು ನಮಾಜ್ ಮಾಡಲು ಮಾತ್ರ ಅನುಮತಿಯನ್ನು ಕೊಟ್ಟಿದ್ದಾರೆ. ಈ ಮೈದಾನ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ಸ್ವತ್ತು ಎಂದು ಈ ಮೂರು ಕೋರ್ಟಿನಲ್ಲಿ ತೀರ್ಮಾನವಾಗಿದೆ. ಅದರ ಕಾಪಿ ತಮಗೆ ಕಳುಹಿಸಿಕೊಟ್ಟಿದ್ದೇನೆ. ಅಲ್ಲ ಎಂದು ಮುಖ್ಯಮಂತ್ರಿಗಳು ಒಂದು ದಾಖಲೆಯನ್ನು ಕೊಟ್ಟರೂ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ. ಅಲ್ಲಿ 1971ರಲ್ಲಿ ಒಂದು ರೀತಿ ಕಾನೂನು ಬಾಹಿರವಾಗಿ ಕಟ್ಟಿರತಕ್ಕಂಥ ನಾಲ್ಕು ವಾಣಿಜ್ಯ ಮಳಿಗೆಗಳನ್ನು ಈ ಮೂರು ಕೋರ್ಟ್‌ಗಳು ತಕ್ಷಣ ಡಿಮಾಲಿಷ್ ಮಾಡಬೇಕೆಂದು ಆದೇಶ ಕೊಟ್ಟಿತ್ತು. ಈ ಹೈಕೋರ್ಟಿನ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿಗೆ ಅಂಜುಮಾನ್ ಇಸ್ಲಾಂ ಸಂಸ್ಥೆಯವರು ಎಸ್‌ಎಲ್‌ಪಿ ಸ್ಪೆಷಲ್ ಲೀವ್ ಪಿಟಿಷನ್ ಮೇಲ್ಮನವಿಯನ್ನು ಸಲ್ಲಿಸಿದರು. ಅಲ್ಲಿ ಏನು ಹೇಳಿದೆ ಸುಪ್ರೀಂಕೋರ್ಟ್ ಈ ನಿಮಿಷದವರೆಗೆ ಎಸ್.ಎಲ್.ಪಿ. ಸುಪ್ರೀಂ ಕೋರ್ಟಿನಲ್ಲಿ ಅಡ್ಮಿಟ್ ಆಗಿಲ್ಲ. ವಿಚಾರಣೆಗೆ ಅಂಗೀಕಾರವಾಗಿಲ್ಲ, ವಿಚಾರಣೆಗೆ ಅಂಗೀಕಾರಕ್ಕೆ ತೆಗೆದುಕೊಳ್ಳುವ ಮುನ್ನ ಆ ಎರಡು ವಾಣಿಜ್ಯ ಮಳಿಗೆಗಳನ್ನು ಡಿಮಾಲಿಷ್ ಮಾಡಬೇಡಿ ಎನ್ನುವ ಒಂದು ಸ್ಟೇ ಆರ್ಡರ್ ಇದೆ. ಮೂರನೆಯದು ಸುಪ್ರೀಂ ಕೋರ್ಟ್ ಹೈಕೋರ್ಟಿನ ಹಿಂದಿನ ಆರ್ಡರ್‌ಗೆ, ಇದು ಸಾರ್ವಜನಿಕ ಸ್ಥಳ ಎಂದು ಏನು

ಕೊಟ್ಟಿದೆ ಅದಕ್ಕೇ ಸ್ಟೇ ಕೊಟ್ಟಿಲ್ಲ ; as on today ಯಾವುದಾದರೂ ನಿಮ್ಮ ದಾಖಲೆಗಳು ಇದ್ದರೆ ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಸದನಕ್ಕೆ ಅದರ ವಿವರ ಒದಗಿಸಿಕೊಡಿ.

ಸುಪ್ರೀಂ ಕೋರ್ಟಿನಲ್ಲಿ ಎಸ್‌ಎಲ್‌ಪಿ ಅಡ್ಮಿಷನ್ ಮಾಡಿಕೊಳ್ಳಬೇಕಾದರೆ ಅದರದೇ ಆದ ಒಂದು ಪದ್ಧತಿ ಇದೆ, ಮೊದಲು ಅದರ ಬಗ್ಗೆ ಸಾಕಷ್ಟು ಸತ್ಯಾಸತ್ಯತೆಗಳನ್ನು ಚರ್ಚೆ ಮಾಡಿ ಅಡ್ಮಿಷನ್ ಸ್ಟೇಜ್‌ನಲ್ಲಿ ರಿಜೆಕ್ಟ್ ಮಾಡುವಂತಹ ಸಾವಿರಾರು ಕೇಸ್‌ಗಳು ಇವೆ. 1992ರಲ್ಲಿ ಎಸ್‌ಎಲ್‌ಪಿ ಹಾಕಿದರೆ ಈ ನಿಮಿಷದವರೆಗೆ ಅಡ್ಮಿಟ್ ಆಗಿಲ್ಲ. ಅಂದರೆ ಹೈಕೋರ್ಟಿನ ಪ್ರೆಸೆಂಟ್ ಡಿಸಿಷನ್ ಏನಿದೆ, ಆ ಒಂದು ತೀರ್ಮಾನ, ನಮ್ಮೆಲ್ಲರಿಗೂ ಬೈಂಡಿಂಗ್, ಈ ಸರ್ಕಾರಕ್ಕೂ ಬೈಂಡಿಂಗ್ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಭೂಸ್ವಾಧೀನದ ಬಗ್ಗೆ ಟೈಟಲ್ ಆಫ್ ದಿ ಲ್ಯಾಂಡ್ ಬಗ್ಗೆ, ಹುಬ್ಬಳ್ಳಿ, ಧಾರವಾಡ ಕಾರ್ಪೋರೇಷನ್ ಜಾಗ ಎನ್ನುವುದರ ಬಗ್ಗೆ ಹೈಕೋರ್ಟ್ ಡಿಸಿಷನ್ ಕ್ಲಿಯರಾಗಿದೆ. ಅದರ ಕಾಪಿ ನಾನು ಕಳುಹಿಸಿಕೊಟ್ಟಿದ್ದೇನೆ. ದಯವಿಟ್ಟು ತಾವು ಅದನ್ನು ತೆಗೆದು ಓದಬೇಕು. ಸುಪ್ರೀಂ ಕೋರ್ಟ್ ಅಂತಿಮ ತೀರ್ಮಾನ ಕೊಡುವವರೆಗೆ, ಹೈಕೋರ್ಟಿನ ಜಡ್ಜ್‌ಮೆಂಟ್ ಏನಿದೆ ಅದು ಬೈಂಡಿಂಗ್ ಎಂಬುದನ್ನು ನಾನು ಇಲ್ಲಿರುವ ಹಿರಿಯ ಸದಸ್ಯರಿಗೆ ಹೇಳುವಂತಹ ಅಗತ್ಯ ಇಲ್ಲ ಎಂಬ ಅಂಶವನ್ನು ಮಾತ್ರ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಆವತ್ತಿನಿಂದ ಇವತ್ತಿನವರೆಗೆ ಸತ್ಯಸಂಗತಿಯನ್ನು ಮರೆಮಾಚಿ, ಇದೊಂದು ಡಿಸ್ಪ್ಯೂಟೆಡ್ ಲ್ಯಾಂಡ್ ಎನ್ನುವಂತಹ ವಿಷಯವನ್ನು ಜನರಿಗೆ ತಿಳಿಸುವಂತಹ ಪ್ರಯತ್ನ ಮಾಡಿ, ಇವತ್ತು ಲೋಕಸಭೆಯನ್ನು ಅಡ್ಡದಾರಿಗೆ ಹಿಡಿಸುವಂತಹ ಪ್ರಯತ್ನ ಮಾಡಿದಿರಿ, ಈ ಸದನವನ್ನು ಅಡ್ಡದಾರಿಗೆ ಹಿಡಿಸುವ ಪ್ರಯತ್ನ ಮಾಡಿದಿರಿ, ಈ ರಾಜ್ಯದ ಜನತೆಯನ್ನು ಅಡ್ಡದಾರಿಗೆ ಹಿಡಿಸುವಂತಹ ಪ್ರಯತ್ನ ಮಾಡಿ ಇಡೀ ದೇಶದ ಜನರನ್ನು ತಪ್ಪುದಾರಿಗೆಳೆಯುವ ಪ್ರಯತ್ನವನ್ನು ಏನು ಈ ಸರ್ಕಾರ ಮಾಡುತ್ತಿದೆ, ಇದು ಸರಿಯಲ್ಲ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಅಧ್ಯಕ್ಷರಿಗೆ ನಾನು ಪ್ರಾರಂಭದಲ್ಲಿ ಹೇಳಿದರೆ, ಈ ಗೋಲೀಬಾರ್ ಈದ್ಗಾ ಮೈದಾನದಲ್ಲಿ ಆಗಿದ್ದರೆ ಇಷ್ಟು ಚರ್ಚೆ ಆಗುತ್ತಾ ಇರಲಿಲ್ಲ, ನೀವು ಹೇಳುತ್ತಿದ್ದೀರಿ, ರಾಷ್ಟ್ರಧ್ವಜ ಹಾರಿಸುವುದಕ್ಕೆ ಬಿಡುವುದಿಲ್ಲ ಎಂದು ನಾವು ಸಂಕಲ್ಪ ಮಾಡಿದ್ದೋ, ನಮ್ಮ ಸರ್ಕಾರದ ನಿರ್ಧಾರ ಅದು ಸರಿಯೋ ತಪ್ಪೋ, ಆದರೆ ನೀವು ಇವತ್ತು ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಹೋದಿರಿ, ಅದಕ್ಕೆ ನಾವು ಗೋಲೀಬಾರ್ ಮಾಡಿದ್ದೇವೆ ಎಂದು ಹೇಳಬಹುದಾಗಿತ್ತು. ಆದರೆ ನೀವು ಈದ್ಗಾ ಮೈದಾನದಲ್ಲಿ ಗೋಲಿಬಾರ್ ಮಾಡಿಲ್ಲ. ಒಂದೂವರೆ ಕಿಲೋಮೀಟರ್ ದೂರ ಇರುವ ದೇಶಪಾಂಡೆ ನಗರದಲ್ಲಿ ಗೋಲಿಬಾರ್ ಮಾಡಿದಿರಿ. ಮತ್ತೆ ಅವರು ಅಲ್ಲಿಗೆ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಬರುವುದಿಲ್ಲ ಎಂಬುದು ಸ್ಪಷ್ಟವಾಗಿ ನಿಮಗೆ ಗೊತ್ತಿತ್ತು. ದೇಶಪಾಂಡೆ ನಗರದಲ್ಲಿ ಇರತಕ್ಕ 30-40 ಜನರ ಗುಂಪಿನ ಮೇಲೆ ಗೋಲಿಬಾರ್ ಆಗುವಂತಹ ಒಂದು ಘಟನೆ ಅಲ್ಲಿ ನಡೆದಿದೆ. ಮತ್ತೆ ತಮಗೆ ಗೊತ್ತಿರುವಹಾಗೆ,

ತಾವು ಕೊಟ್ಟಿರುವ ವರದಿಯ ಆಧಾರದ ಮೇಲೆ, ಕೇಂದ್ರ ಗೃಹ ಮಂತ್ರಿಗಳು ಅಲ್ಲಿ ಒಂದು ರೀತಿ ವ್ಯಾಂಡಲಿಸಮ್ ಆಗುತ್ತಾ ಇತ್ತು, ಎರಡುಸಾವಿರ ಜನ ಸೇರಿ ಅಲ್ಲಿ ನುಗ್ಗುವಂತಹ ಪ್ರಯತ್ನ ಮಾಡುತ್ತಾ ಇದ್ದರು ಎಂಬ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ತಮಗೆ ಕ್ಯಾಸೆಟ್ ಕಳುಹಿಸಿದ್ದೇನೆ, ದಾಖಲೆ ಕಳುಹಿಸಿದ್ದೇನೆ. ಇವತ್ತು ತಾವು ಏನು ಹೋಮ್ ಮಿನಿಸ್ಟರ್‌ಗೆ ಒಂದು ಮಾಹಿತಿಕೊಟ್ಟಿದ್ದೀರಿ. ಎರಡು ಸಾವಿರ ಜನ ಅವತ್ತು ಆ ರೀತಿ ಉದ್ರಿಕ್ತರಾಗಿ ಆ ಒಂದು ಈದ್ಗಾ ಮೈದಾನದ ಹತ್ತಿರ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಹೋದರು ಅದಕ್ಕಾಗಿ ಅನಿವಾರ್ಯವಾಗಿ ಗೋಲೀಬಾರ್

ಮಾಡಬೇಕಾದಂತಹ ಪ್ರಸಂಗ ಬಂತು ಎಂದು ತಾವೇನು ಇವತ್ತು ಕೇಂದ್ರಕ್ಕೆ ಒಂದು ವರದಿಯನ್ನು ಕಳುಹಿಸಿಕೊಟ್ಟಿದ್ದೀರಿ, ಅದು ಸತ್ಯಕ್ಕೆ ದೂರವಾದ ಸಂಗತಿ, ಅದಕ್ಕೇ ಏನಾದರೂ ಸಾಕ್ಷಿಗಳು, ಪುರಾವೆಗಳು ಇದ್ದರೆ ತಾವು ಕೊಡಬೇಕು ಎಂಬ ಮಾತನ್ನು ಹೇಳುತ್ತೇನೆ. ಅವತ್ತೇ ದೇಶಪಾಂಡೆ ನಗರದ ನಾಗರಿಕರನ್ನು ಪತ್ರಕರ್ತರು, ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಸಂಯುಕ್ತಕರ್ನಾಟಕ ಮತ್ತು ಪ್ರಜಾವಾಣಿಯವರು,ಆ ನಿಮಿಷಕ್ಕೆ 12.30ಕ್ಕೆ ಗೋಲೀಬಾರ್ ಆದರೆ ಒಂದೂವರೆ ಎರಡು ಘಂಟೆಗೆ ಅಲ್ಲಿ ಇಂಟರ್‌ವ್ಯೂ ಮಾಡಿದ್ದಾರೆ. ಅಲ್ಲಿರುವಂತಹ ಪ್ರತಿಯೊಬ್ಬ ವ್ಯಕ್ತಿ ಯಾರೊಬ್ಬರನ್ನೂ ಪ್ರಚೋದನೆ ಮಾಡದೇ ಉದ್ದೇಶಪೂರ್ವಕವಾಗಿ ನೇರವಾಗಿ ಗುಂಡಿಕ್ಕಿ ಕೊಲ್ಲುವ ಪ್ರಯತ್ನ ಆಯಿತು ಎಂದು ಅವರು ಹೇಳಿದ್ದಾರೆ. ಸ್ವಾಮಿ, ದೇಶಪಾಂಡೆ ನಗರದಲ್ಲಿ ಗೋಲಿಬಾರ್ ಆಗಿ ಸತ್ತದ್ದು ಮಂಜುನಾಥ್‌ಫಾರಡ್ ಎಂಬ 12 ವರ್ಷದ ಒಬ್ಬ ಬಾಲಕ. ಊಟ ಮಾಡುತ್ತಿದ್ದ, ಶಬ್ದ ಕೇಳಿತು, ಹೊರಗಡೆ ಓಡಿ ಬಂದ, ಗೋಲಿಬಾರ್ ಆಗುತ್ತಿದೆ ಎಂದರು, ಒಳಗಡೆ ಓಡಿ ಹೋಗಬೇಕಾದರೆ ಚಪ್ಪಲಿ ಕೆಳಕ್ಕೆ ಬಿತ್ತು, ಬಾಗಿಲಿಗೆ ಹೋಗಿ ಚಪ್ಪಲಿ ಎಳೆದುಕೊಳ್ಳುವುದಕ್ಕೆ ಹೋದ, ಎರಡು ಗುಂಡು ಬಿದ್ದು ಅವನು ಸತ್ತ, ಶ್ರೀನಿವಾಸಕಟ್ಟಿ 50 ವರ್ಷದವನು, ಮೂರು ಹೆಣ್ಣುಮಕ್ಕಳು, ಆ ಮಕ್ಕಳಿಗೆ ಮದುವೆಯಾಗಿಲ್ಲ, ಊಟ ಮಾಡಿ ಮನೆ ಹತ್ತಿರ ಇದ್ದವನು ಸತ್ತ. ಅವರು ಹೋರಾಟದ ಮಧ್ಯದಲ್ಲಿ ಇದ್ದವನಲ್ಲ. ನೀವು ಉತ್ತರಕೊಡಬೇಕಾದರೆ ಡೀಟೆಲ್ಸ್ ಕೊಡುತ್ತೀರಿ ಎಂದು ನಾನು ತಿಳಿದು ಕೊಂಡಿದ್ದೇನೆ; ಸಾಯಿನಾಥ್ ದೊಂಗಲೆ ಎನ್ನುವವನು ಮಾತ್ರ 24 ವರ್ಷದ ಯುವಕ 40-50 ಜನರ ಮಧ್ಯೆ ಇದ್ದ, ರಾಷ್ಟ್ರಧ್ವಜವನ್ನು ಹಾರಿಸಬೇಕೆಂದು ಬಂದವನು ಅವನು ಇವತ್ತು ನಿಮ್ಮ ಗುಂಡಿಗೆ ಆಹುತಿಯಾದ. ಮಹದೇವ ಮಿಣಜಗಿ ಎಂಬ 26 ವರ್ಷ ಆ ವ್ಯಕ್ತಿಗೆ ಒಂದೂವರೆ ವರ್ಷದ ಮಗು ಇದೆ, 5 ತಿಂಗಳ ಬಾಣಂತಿ ಹೆಂಡತಿ ಮನೆಯಲ್ಲಿ ಮಲಗಿದ್ದಾಳೆ, ಅವನಿಗೆ ನೀವು ಗುಂಡಿಕ್ಕಿ ಕೊಲ್ಲುವ ಪ್ರಯತ್ನ ಮಾಡಿದ್ದೀರಿ. ಆಮೇಲೆ ನಾಲ್ಕೂವರೆ ಘಂಟೆಗೆ ಏನಾಯಿತು ಎಂದರೆ, ಎಲ್ಲದಕ್ಕೂ ಮುಖ್ಯಮಂತ್ರಿಗಳನ್ನು ಟೀಕೆ ಮಾಡುವುದಲ್ಲ, ನಿಮ್ಮ ಪೊಲೀಸರು ನಾಲ್ಕೂವರೆ ಘಂಟೆಗೆ ಕೆ.ಎಂ.ಸಿ. ಆವರಣದ ಒಳಗಡೆ ಬಂದು ಗೋಲಿಬಾರ್ ಮಾಡುವಂತಹ ಅಗತ್ಯ ಏನಿತ್ತು. ಸಂದರ್ಭ ಏನಿತ್ತು! ಮೊದಲು ಪರ್ಮಿಷನ್ ತೆಗೆದುಕೊಂಡಿಲ್ಲ. ಹೌಸ್‌ಮನ್‌ಶಿಪ್ ಮಾಡುತ್ತಿರುವಂತಹ ಎಲ್ಲಾ ಡಾಕ್ಟರ್‌ಗಳು ಎಲ್ಲರೂ ಸತ್ಯಾಗ್ರಹ ಕುಳಿತುಕೊಂಡರು, ನಾನೂ ಸಹ ಆಸ್ಪತ್ರೆಗೆ ಅಡ್ಮಿಟ್ ಆಗಿ ಅಲ್ಲೇ ಇದ್ದೆ. ಪ್ರಸನ್ನ ರಾನಡೆ ಎನ್ನುವಂತಹ ಒಬ್ಬ ವ್ಯಕ್ತಿ ಗೋಲೀಬಾರ್‌ನಲ್ಲಿ ಅಸುನೀಗಿದ. ಇನ್ನಿಬ್ಬರು ಹಾಗೂ ಅನೇಕರ ಮೇಲೆ ಗೋಲೀಬಾರ್ ಆಯಿತು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಇದನ್ನೆಲ್ಲಾ ತಡೆಯಬಹುದಾಗಿತ್ತು, ನಿಮ್ಮ ಆಕ್ರೋಶ ಸಿಟ್ಟು ನಮ್ಮ ಮೇಲೆ ಇರಬೇಕಾಗಿತ್ತು ಗುಂಡು ಹಾರಿಸಿದ್ದರೆ ಯಡಿಯೂರಪ್ಪನ ಮೇಲೆ ಹಾರಿಸಬೇಕಾಗಿತ್ತು, ಈಶ್ವರಪ್ಪನ ಮೇಲೆ ಹಾರಿಸಬೇಕಾಗಿತ್ತು. ಬಿಜೆಪಿ ಮುಖಂಡರ ಮೇಲೆ ಹಾರಿಸಬೇಕಾಗಿತ್ತು. ವಿನಾಕಾರಣ ಕೆ.ಎಂ.ಸಿ ಅವರಣದ ಒಳಗಡೆ ಗುಂಡು ಹಾರಿಸಿದರಲ್ಲ ಅದಕ್ಕೆ ಏನಾದರೂ ಕಾರಣ ಹೇಳುತ್ತೀರಾ? ಇನ್ನೊಂದು ಅಧ್ಯಕ್ಷರೆ, ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು, ಪೋಲೀಸ್ ಅಧಿಕಾರಿಗಳು ಹೇಳಿಕೆ ಕೊಟ್ಟರು, ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ದಯಮಾಡಿ ತಾವು ಉತ್ತರ ಕೊಡಬೇಕಾದರೆ, 30-40 ಜನ ಪೋಲೀಸ್ ಅಧಿಕಾರಿಗಳಿಗೆ ಏಟು ಬಿದ್ದಿದೆ ಎಂದು ಹೇಳಿದಿರಿ. ಕೆ.ಎಂ.ಸಿ. ಆಸ್ಪತ್ರೆ ರೆಕಾರ್ಡ ನನ್ನ ಹತ್ತಿರ ಇದೆ, ಈಗ ತಿರುಚುವುದಕ್ಕೆ ಬರುವುದಿಲ್ಲ, ಇಬ್ಬರು ಮಾತ್ರ ಔಟ್ ಪೇಷಂಟ್ ಎಂದು ಅಡ್ಮಿಟ್ ಆಗಿ ಟ್ರೀಟ್ಮೆಂಟ್ ತೆಗೆದುಕೊಂಡು ಬಂದಿದ್ದಾರೆ. ಒಟ್ಟು 30 ಜನ ಆಸ್ಪತ್ರೆಗೆ ಸೇರಿದ್ದಾರೆ. ಯಾವ ಯಾವ ಪೋಲೀಸರಿಗೆ

ಏಟು ಬಿದ್ದಿತು, ಅವರ ಹೆಸರುಗಳೇನು, ಯಾವ ಆಸ್ಪತ್ರೆಗೆ ಸೇರಿಸಿದ್ದಿರಿ. ಇದರ ವಿವರಗಳನ್ನುಕೊಡಿರಿ, ಸತ್ಯಸಂಗತಿ ಕೊಡಿ, ಕೆಎಂಸಿಯಲ್ಲಿ ಔಟ್ ಪೇಷೆಂಟ್ ಆಗಿದ್ದವರು ಇಬ್ಬರು ಮಾತ್ರ, 18 ಜನಕ್ಕೆ ಗುಂಡೇಟು ಬೀಳ್ತು ಮಲ್ಟಿಪಲ್ ಇಂಜುರೀಸ್ ಆಗಿದೆ. 5 ಜನ ಗುಂಡೇಟಿನಿಂದ ಸತ್ತಿದ್ದಾರೆ, 7 ಜನ ಮಾತ್ರ 6.45 ಕ್ಕೆ ರಾಷ್ಟ್ರಧ್ವಜ ಹಾರಿಸುವುದಕ್ಕೆ ಹೋದಂತ ಗುಂಪಿನವರನ್ನು ಲಾಠಿ ಚಾರ್ಜ್ ಮಾಡಿದ್ದೀರಿ ಏಟು ಬಿದ್ದು ಆಸ್ಪತ್ರೆಗೆ ತಾವು ಸೇರಿಸಿದ್ದೀರಿ, ಇದನ್ನು ಬಿಟ್ಟರೆ ಎಲ್ಲೂ ಲಾಠಿ ಚಾರ್ಜ್ ಮಾಡಲಿಲ್ಲ, ಒಬ್ಬ ಪೋಲೀಸ್ ನೌಕರ ಒಳರೋಗಿಯಾಗಿ ಕೆ.ಎಂ.ಸಿ.ಯಲ್ಲಿ ಇಲ್ಲ, ಅಂದರೆ ದಯಮಾಡಿ ಉತ್ತರ ಕೊಡಬೇಕಾದರೆ ತಾವು ದಾಖಲೆಗಳನ್ನು ಕೊಡಿ, ಅಂದರೆ ಹತ್ತಾರು ಸಾವಿರ ಜನ ಮೆರವಣಿಗೆ ಮಾಢಿದರು ಸಭೆಗಳಾಯಿತು, ಒಂದು ಕಡೆ ಲಾಠಿ ಚಾರ್ಜ್ ಮಾಡಲಿಲ್ಲ. ಒಂದು ಕಡೆ ಪೋಲೀಸರನ್ನು,ನಾನು ಆಸ್ಪತ್ರೆಯಲ್ಲಿದ್ದೆ, ಪೋಲೀಸ್ ಉನ್ನತ ಅಧಿಕಾರಿಗಳು ಬಂದು ಭೇಟಿ ಮಾಡಿದರು, ಕೆ ಎಂ ಸಿ ಅವರಣದಲ್ಲಿ ಗುಂಡು ಹಾಕುವಂತಹ ಸಂದರ್ಭ ಬಂತು, ಅಲ್ಲಿಗೆ ಜನ ಸತ್ತ ಕುಟುಂಬದವರನ್ನು ಭೇಟಿ ಮಾಡುವುದಕ್ಕೋಸ್ಕರ, ಕೆಲವರು ಗಾಯಾಳುಗಳನ್ನು ನೋಡುವುದಕ್ಕೋಸ್ಕರ, ಕೆಲವರು ರಕ್ತ ಕೊಡುವುದಕ್ಕೋಸ್ಕರ ಬಂದಿದ್ದರು.

ಎರಡುಮೂರು ಸಾವಿರ ಜನ ಸೇರಿದ್ದರು ಪೋಲೀಸ್ ವ್ಯಾನ್ ಪೋಲೀಸ್ ಜೀಪ್ ಖಾಕಿ ಬಟ್ಟೆಯನ್ನು ನೋಡಿದ ತಕ್ಷಣ ಜನ ಒಂದು ರೀತಿ ಆಕ್ರೋಶಕ್ಕೆ ಒಳಗಾದರು. ಹಾಗಾಗಿ ಜನ ಬೆನ್ನತ್ತಿದ್ದರು ಅಲ್ಲಿರತಕ್ಕಂಥ ಉನ್ನತ ಪೋಲೀಸ್ ಅಧಿಕಾರಿಗೆ ಅಪಮಾನ ಆದಂತೆ ಆಯಿತು. ವಾಪಸ್ ಹೋಗಿ ಗೇಟಿನಿಂದ ಆವರಣದ ಒಳಗಡೆ ತಾವು ಗೋಲೀಬಾರ್ ಮಾಡಿಸುವುದು ಒಂದು ಅಕ್ಷಮ್ಯ ಅಪರಾಧವನ್ನು ಮಾಡಿಸಿದಿರಿ. ಪೋಲೀಸ್ ಅಧಿಕಾರಿಗಳು ಬಂದು ನನ್ನನ್ನು ಭೇಟಿ ಮಾಡಿದರು ನಾನು ಪ್ರಾರ್ಥನೆ ಮಾಡಿದೆ. ಯಾವುದೇ ಪೋಲೀಸ್ ಅಧಿಕಾರಿಗಳನ್ನು ನಾನು ಈಗಲೂ ದೂರಿಲ್ಲ ಅವತ್ತೂ ದೂರಿಲ್ಲ ಏಕೆಂದರೆ ಇವತ್ತು ನಮ್ಮ ರಾಜಕೀಯ ತೀಟೆ ತೀರಿಸಿಕೊಳ್ಳುವುದಕ್ಕೋಸ್ಕರ ಮನಬಂದಂತೆ ಪೋಲೀಸ್ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿರುವಂತಹ ಒಂದು ಪ್ರಯತ್ನ ನಡೆಯುತ್ತಿರಬೇಕಾದರೆ ಇದಕ್ಕೆ ಯಾರು ಉತ್ತರ ಕೊಡಬೇಕು. ನಾನು ಪೋಲೀಸ್ ಅಧಿಕಾರಿಗಳನ್ನು ದೂರುತ್ತಿಲ್ಲ, ಆದರೆ ನಾನು ಅವರಿಗೆ ಹೇಳಿದೆ.

ಈ ರೀತಿ ಕಾಂಗ್ರೆಸ್ನ ನಡವಳಿಕೆಗೆ ನೀವು ಬಲಿಪಶುಗಳಾದಿರಿ ಇಷ್ಟು ಹೆಸರು ಪಡೆದಂತಹ ಉನ್ನತ ಅಧಿಕಾರಿಗಳು ನೀವು ಇಲ್ಲಿ ಬಂದು ಸಹ ಗೋಲೀಬಾರ್ ಆಗದಂತೆ ನೋಡಿಕೊಳ್ಳಲು ನಿಮ್ಮಿಂದ ಆಗಲಿಲ್ಲವಲ್ಲ, ಪೋಲೀಸ್ ಸರ್ಪ ಕಾವಲು ಇತ್ತು, ಮಿಲ್ಟ್ರಿ ಇತ್ತು. ಅರೆ ಸೇನೆ ಕರೆಸಿದ್ದಿರಿ, ಇದನ್ನು ಯಾವುದೂ ಉಪಯೋಗ ಮಾಡಿಕೊಳ್ಳದೆ ಈ ರೀತಿ ಜೀವಂತ ಕೊಂದು ಬಿಟ್ಟಿರಲ್ಲ. ಈ ರಾಜ್ಯದ ಜನತೆಗೆ ಏ ನು ಉತ್ತರ ಕೊಡುತ್ತೀರಾ?

ಪೋಲೀಸ್ ಕಮೀಷನರ್ ಬರ್ಮನ್ ಅವರು ನಾನು ಆಸ್ಪತ್ರೆಯಲ್ಲಿದ್ದಾಗ ಬಂದು ಹೇಳಿದಾಗ ನಾನು ಒಂದೇ ಮಾತು ಹೇಳಿದೆ. ನಿಮ್ಮ ಬಗ್ಗೆ ನನಗೆ ಏನೂ ಬೇಸರ ಇಲ್ಲ ನಿಮ್ಮ ಆತ್ಮ ಸಾಕ್ಷಿಗೆ ತಕ್ಕಂತೆ ಉತ್ತರ ಕೊಡಿ. ನಾಳೆ ಜನ ಸ್ವಾಮಿ ಇಷ್ಟೆಲ್ಲಾ ಇದ್ದು ಗೋಲೀಬಾರ್ ಆಯಿತಲ್ಲ ಎಂದು ಕೇಳುತ್ತಾರೆ. ಸ್ವಾಮಿ ಎಲ್ಲಾ ಕಡೆ ಮಂಡೇಕರ್ರವರು ಮತ್ತು ಬರ್ಮನ್ರವರು ಏನು ಹೇಳಿದರು? ಗೋಲೀಬಾರ್ಗೆ ಆದೇಶ ನೀಡಿಲ್ಲ ನಮಗೆ ಗೊತ್ತಿಲ್ಲ ಯಡಿಯೂರಪ್ಪನವರೇ ಎಂದು ಪ್ರಾಮಾಣಿಕವಾಗಿ ಹೇಳಿದಂತಹ ಮಾತು ಹಾಗಾದರೆ ಯಾರು ಆದೇಶ ಕೊಟ್ಟರು? ಗೋಲೀಬಾರ್ಗೆ ಆದೇಶ ಕೊಟ್ಟವರು ಯಾರು? ಸನ್ಮಾನ್ಯ ಮುಖ್ಯಮಂತ್ರಿಗಳೇ, ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿ. ತಾವು ಬಹುಶಃ ಈಗ ಏನು ಸೀರಿಯಸ್ ಇಂಜುರೀಸ್ ಆಗಿದೆ ಎಂದು ಹೇಳಿದೆ ಸನ್ಮಾನ್ಯ ಅಧ್ಯಕ್ಷರೆ ಬಹುಶಃ 15 ರಿಂದ 16 ಜನಕ್ಕೆ ಗುಂಡು ಏಟು

ಹಿಂದಿನಿಂದ ಬೆನ್ನಿಗೆ ಬಿದ್ದಿದೆ. ಅಂದರೆ ಓದಬೇಕಾದರೆ ಮನೆಗೆ ಹಿಂತಿರುಗಬೇಕಾದರೆ ನೀವು ಮೆಡಿಕಲ್ ಸರ್ಟಿಫಿಕೇಟ್ಗಳನ್ನು ಈ ಸದನದ ಮುಂದೆ ಇಡಿ. ಸುಮಾರು 15 ರಿಂದ 16 ಜನರಿಗೆ ಹಿಂದುಗಡೆಯಿಂದ ಬೆನ್ನಿಗೆ ಎರಡು ಮೂರು ಗುಂಡುಗಳು ಬಿದ್ದಿವೆ. ಕೆಲವು ಮಿಲ್ಟ್ರಿ ಎಕ್ಸ್ಪರ್ಟ್ಸ್ ಅಲ್ಲಿಗೆ ಬಂದಿದ್ದರು. ಅವರು ಸ್ಪಾಟ್ ಇನ್ಸ್ಪೆಕ್ಷನ್ ಮಾಡಿ ಅವರು ವಿವರವನ್ನು ತೆಗೆದುಕೊಂಡು ಹೋಗಬೇಕಾದರೆ ಅವರು ಹೇಳುತ್ತಿದ್ದರು. ಕೊನೆಯ ಪಕ್ಷ ಇಷ್ಟು ಗುಂಡು ಹಾರಿಸಬೇಕಾದರೆ ಇಷ್ಟು ಜನರಿಗೆ ಗುಂಡು ಬಿದ್ದಿದೆ ಎನ್ನಬೇಕಾದರೆ ಅವರ ಹತ್ತು ಪಟ್ಟು ಗುಂಡು ಹಾರಿಸಿರಬಹುದು ಎಂದು ಹೇಳುತ್ತಾರೆ. ಸುಮಾರು 350-400 ಗುಂಡುಗಳನ್ನು ಧಾರಾಳವಾಗಿ ಉಪಯೋಗ ಮಾಡಿದ್ದಾರೆ. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಎಷ್ಟು ಗುಂಡುಗಳನ್ನು ಕೊಟ್ಟಿದ್ದಿರಿ, ಎಷ್ಟು ಗುಂಡುಗಳನ್ನು ಉಪಯೋಗ ಮಾಡಿದ್ದೀರಿ? ನಿಮ್ಮ ವಾಟರ್ ಜಟ್ ತೆಗೆದುಕೊಂಡು ಹೋಗಿ ಅದನ್ನು ಪ್ರಯೋಗ ಮಾಡುತ್ತೇನೆಂದು ಹೋದರಲ್ಲ ಅದನ್ನು ಉಪಯೋಗ ಮಾಡಿದಿರೋ ಇಲ್ಲವೋ ಅದನ್ನು ಉಪಯೋಗ ಏತಕ್ಕೆ ಮಾಡಲಿಲ್ಲ? ಅದರಿಂದ ಕಿತ್ತೂರು ರಾಣಿ ಚೆನ್ನಮ್ಮ ಮೂರ್ತಿಯನ್ನು ತೊಳೆದು ಬಂದಿರೋ ಹೊರತು ಜನರನ್ನು ಎದುರಿಸಲು ಚದುರಿಸಲು ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲ. ಲಾಠಿ ಚಾರ್ಜ್ ಮಾಡಲಿಲ್ಲ. ರಬ್ಬರ್ ಗುಂಡು ಉಪಯೋಗ ಮಾಡಲಿಲ್ಲ. ನೇರವಾಗಿ ಗುಂಡಿಕ್ಕಿ ಕೊಲ್ಲುವಂತಹ ಒಂದು ಕೆಲಸವನ್ನು ಮಾಡಿದಿರಿ. ಉನ್ನತ ಪೋಲೀಸ್ ಅಧಿಕಾರಿಗಳ, ಮುಖ್ಯಮಂತ್ರಿಗಳ ಮೂಲಕ ನಾನು ಇವತ್ತು ಹೋಮ್ ಮಿನಿಸ್ಟರನ್ನು ಕೇಳುತ್ತೇನೆ. ಸ್ವಾಮಿ, ಇದು ಅವತ್ತು ನಡೆದು ಹೋಯಿತು. 19-8-94 ರಂದು ಮೇದರ್ವಾಣಿಯಲ್ಲಿ ನಡೆಯಿತಲ್ಲ. ಗುಂಡು ಹೊಡೆದಿರಲ್ಲ, ನೇರವಾಗಿ ಒಬ್ಬ ಪೋಲೀಸ್ ಅಧಿಕಾರಿ ಬಗ್ಗೆ ಇದ್ದ ಗೌರವ ಸ್ವಲ್ಪ ಜಾಸ್ತಿ ಆಯಿತು. ವ್ಯಾನ್ ಡ್ರೈವರ್ ಬಂದೂಕು ತೆಗೆದುಕೊಂಡು, ರಿವಲ್ವಾರ್ ತೆಗೆದುಕೊಂಡು ಶಂಕರ್ ಎನ್ನುವ ಡ್ರೈವರ್ ಒಬ್ಬನನ್ನು ಕೊಂದುಬಿಟ್ಟ. ಅಲ್ಲಿ ಗುಂಪು ಹೊಡೆದು ಒಬ್ಬ ಹೆಣ್ಣು ಮಗಳು ಸತ್ತಳು. ಬರ್ಮನ್ರವರು ಬಂದರು ಕ್ಷಮಾಪಣೆಯನ್ನು ಕೇಳಿದರು. ಇದು ಓವರ್ ರೀ ಆಕ್ಷನ್ ಎನ್ನುವುದನ್ನು ಒಪ್ಪಿಕೊಂಡರು. 302ರ ಪ್ರಕಾರ ಬಂಧನ ಮಾಡಿ ಒಳಗೆ ಇಟ್ಟರು. ಅಲ್ಲಿ ಒಬ್ಬ ಸರ್ಕಲ್ ಇನ್ಸ್ಪೆಕ್ಟ್ರನ್ನು ಮೂಲ ಕಾರಣವಾಗಿದ್ದಂತಹವರನ್ನು ಟ್ರಾನ್ಸ್ಫರ್ ಮಾಡಿದಿರಿ ಟ್ರಾನ್ಸ್ಫರ್ ಪನಿಶ್ಮೆಂಟ್ ಅಲ್ಲ. ತಾವು ಏನು ಬೇಕಾದರೂ ಮಾಡಿ ಪೋಲೀಸ್ ಇಲಾಖಾ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಂಡರೂ ಅದನ್ನು ನಾನು ಕೇಳುವುದಿಲ್ಲ. ಆದರೆ ಇದು ಓವರ್ ರೀಆಕ್ಷನ್ ಎಂದು ನಿಮ್ಮವರು ಹೇಳಿದರಲ್ಲ. ಆದರೆ ಒಬ್ಬ ಡ್ರೈವರ್ ನೇರವಾಗಿ ರಿವಾಲ್ವರ್ ತೆಗೆದುಕೊಂಡು ಗುಂಡಿಕ್ಕಿ ಕೊಲ್ಲುವಂತಹ ಪ್ರಯತ್ನ ಮಾಡಿದನಲ್ಲ ಇದೇ ಕೆಲಸ ಆಗಸ್ಟ್ 15ರಂದು ದೇಶಪಾಂಡೆ ನಗರದಲ್ಲಿ ನಡೆದಿದೆ, ಏತಕ್ಕೆ ಒಪ್ಪಿಕೊಳ್ಳುವುದಿಲ್ಲ. ತಪ್ಪನ್ನು ತಪ್ಪು ಎಂದು ಒಪ್ಪಿಕೊಂಡರೆ ಅಪರಾಧವಾಗುತ್ತದೇನು ಇದರಲ್ಲಿ. ಈ ಪ್ರಶ್ನೆಗೆ ಇವತ್ತು ನನಗೆ ಉತ್ತರ ಸಿಗುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಒತ್ತಾಯ ಮಾಡಿದೆವು. ಇಲ್ಲಾ ನಿಮಗೆ ಮನವರಿಕೆಯಾಗಿ ತಾವು ನ್ಯಾಯಾಂಗ ತನಿಖೆಗೆ ಆದೇಶ ನೀಡಿದ್ದೀರಿ, ಧನ್ಯವಾದಗಳು. ನ್ಯಾಯಾಂಗ ತನಿಖೆ ಯಾವಾಗ ಮಾಡುತ್ತಾರೆ ಸ್ವಾಮಿ? ಪೋಲೀಸ್ ಅತಿರೇಕ ಜಾಸ್ತಿಯಾಗಿದೆ ಎನ್ನುವುದು ಮನದಟ್ಟಾದಾಗ ನೀವು ನ್ಯಾಯಾಂಗ ತನಿಖೆಗೆ ಆದೇಶ ನೀಡಿದ್ದೀರಿ. ಅದರ ಆಧಾರದ ಮೇಲೆ ನೀವು ಇವತ್ತು ನ್ಯಾಯಾಂಗ ತನಿಖೆಗೆ ಆದೇಶ ನೀಡಿದ್ದೀರಿ. ಮೊನ್ನೆ ನ್ಯೂಸ್ ಟ್ರ್ಯಾಕ್ಗೆ ಮುಖ್ಯಮಂತ್ರಿಗಳು ಇಂಟರ್ವ್ಯೂ ಕೊಟ್ಟರಲ್ಲ ಸ್ವಾಮಿ, ಈ ನಾಡಿನ ಜನ, ಈ ದೇಶದ ಜನ ಏನು ಅಂದುಕೊಳ್ಳಬೇಕು? ನ್ಯಾಯಾಂಗ ತನಿಖೆಗೆ ಆದೇಶನೀಡುತ್ತೀರಿ? ಇನ್ನೊಂದು ಉಸಿರಿನಲ್ಲಿ ಗೋಲಿಬಾರ್ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶ ನೀಡಿದಂತಹ ನೀವು ಗೋಲಿಬಾರನ್ನು ಸಮರ್ಥನೆ ಮಾಡಿಕೊಂಡಿದ್ದೀರಿ. ಅಂದರೆ ನಿಮ್ಮ ಕೆಳಗಿನ ಅಧಿಕಾರಿಗಳಿಗೆ ಇದರಿಂದ ಏನು ಸಂಕೇತಹೋಗುತ್ತದೆ. ನ್ಯಾಯಾಂಗ ತನಿಖೆ

ಸರಿಯಾಗಿ ನಡೆಯಲು ನಿಮ್ಮ ಅಧಿಕಾರಿಗಳು ಸರಿಯಾಗಿ ಸಹಕಾರ ಕೊಡಬಹುದು ಅನಿಸುತ್ತದೆಯೇ? ಆ ಸ್ಥಾನದಲ್ಲಿ ಕುಳಿತುಕೊಂಡಾಗ ಯಾರೇ ಆಗಿರಲಿ ಯಾರೇ ಒಬ್ಬರು ಜವಾಬ್ದಾರಿ ಸ್ಥಾನದಲ್ಲಿ ಕುಳಿತುಕೊಂಡಾಗ ಇಂತಹ ಸಂದರ್ಭದಲ್ಲಿ ತಪ್ಪಾಗುತ್ತದೆ. ಯಾವುದೋ ಒಂದು ಕಾರಣಕ್ಕೆ ಏನೋ ಒಂದು ಅಚಾತುರ್ಯವಾಗುತ್ತದೆ. ಅದನ್ನು ಒಪ್ಪಿಕೊಂಡು ಸರಿಯಾದಂತಹ ತನಿಖೆ ಮಾಡಲು ಅವಕಾಶ ಮಾಡಿಕೊಡದೇ ಅದನ್ನು ನ್ಯೂಸ್ ಟ್ರ್ಯಾಕ್ನಲ್ಲಿ ಸಮರ್ಥನೆ ಮಾಡಿಕೊಳ್ಳುವಂತಹ ಮಟ್ಟಕ್ಕೆ ಈ ರಾಜ್ಯದ ಮುಖ್ಯಮಂತ್ರಿಗಳು ಹೋಗುತ್ತಾರೆ ಎನ್ನುವುದಾರೆ ಇದು ಬಹುಶಃ ಅಕ್ಷಮ್ಯ ಅಪರಾಧ, ಇದಕ್ಕೂ ಸಹ ತಾವು ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ. ನಮ್ಮ ಕಡೆಯಿಂದ ನಾವು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಿದೆವು. ಸನ್ಮಾನ್ಯ ಅಧ್ಯಕ್ಷರೇ, ಆಗಸ್ಟ್ 4ನೇ ತಾರೀಖು ಸಿಕಂದರ್ಭಕ್ತ್ರವರು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇದನ್ನು ಮನವೊಲಿಸುವ ಪ್ರಯತ್ನ ಮಾಡಿದರು. ಅವರು ಕೆಲವು ಅಲ್ಪಸಂಖ್ಯಾತರನ್ನು ಕರೆದುಕೊಂಡು ರಾಷ್ಟ್ರಧ್ವಜವನ್ನು ಹಾರಿಸಬೇಕು ಎಂದು 13ನೇ ತಾರೀಖು ಬಂದ್ರೆ ನೇರವಾಗಿ ಅಟ್ಲೀಸ್ಟ್ ಒಂದು ವಿರೋಧ ಪಕ್ಷದ ನಾಯಕರನ್ನು ಯಾರಿಗೂ ಅಧಿಕಾರದ ಕುರ್ಚಿ ಶಾಶ್ವತ ಅಲ್ಲ. ಅವರು ವಿಮಾನದಿಂದ ಇಳಿಯುತ್ತಿದ್ದಂತೆ ಅವರು ನಾನು ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂದು ಹೇಳಿದರು ಪೊಲೀಸ್ ಅಧಿಕಾರಿಗಳಿಗೆ ರಾಜ್ಯಪಾಲರನ್ನು ಭೇಟಿಬೇಕೆಂದು ನೀವು ಬಂಧನ ಮಾಡಲು ಅವರು ಸಿಕ್ಕುತ್ತಿದ್ದರು ಅವರೇನು ಕದ್ದು ಬರಲಿಲ್ಲ. ನಾವು ಗೋಪ್ಯವಾಗಿ ಹೋಗಿದ್ದೆವು. ನಾವು ಹೇಳಿ ಹೋಗಿದ್ದೆವು. ಆದರೆ ಸಿಕಂದರ್ಭಕ್ತ್ರವರು ಬಹಿರಂಗವಾಗಿ ಬಂದು ನಿಮ್ಮನ್ನು ಭೇಟಿ ಮಾಡಬೇಕು, ರಾಜ್ಯಪಾಲರನ್ನು ಭೇಟಿ ಮಾಡಬೇಕು ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಳ್ಳಬೇಕು ಇದನ್ನು ಕೊನೆಗಾಣಿಸಬೇಕು ಎಂದು ಹೇಳಿ ಕೆಲವು ಮುಸ್ಲಿಂ ಮುಖಂಡರನ್ನು ಕರೆದುಕೊಂಡು ಹೋಗಿ ರಾಷ್ಟ್ರಧ್ವಜವನ್ನು ಹಾರಿಸಬೇಕು ಎಂದು ವಿಮಾನ ನಿಲ್ದಾಣಕ್ಕೆ ಬಂದಾಗ 3 ದಿನಗಳವರೆಗೂ ಯಾರಿಗೂ ಗೊತ್ತಿಲ್ಲದ್ದ ಹಾಗೆ ಜೈಲಿನಲ್ಲಿ ಇಟ್ಟರು. ಜೈಲಿನ ಒಳಗಡೆ ಒಂದು ಕುರ್ಚಿಕೊಡಲಿಲ್ಲ ಅವರು 3 ದಿನ ಎಲ್ಲಿದ್ದಾರೆ ಎನ್ನುವುದು ಪತ್ತೆ ಆಗಲಿಲ್ಲ. ಇದು ಒಬ್ಬ ವಿರೋಧಪಕ್ಷದ ನಾಯಕನ ಜೊತೆಯಲ್ಲಿ ನಡೆದುಕೊಳ್ಳುವಂತಹ ರೀತಿಯೇ ಸನ್ಮಾನ್ಯ ಮುಖ್ಯಮಂತ್ರಿಗಳೇ ತಾವು ಹೋಮ್ ಮಿನಿಸ್ಟರ್‌ರವರು ಇದಕ್ಕೆ ಸರಿಯಾದಂತಹ ಉತ್ತರವನ್ನು ಕೊಡಬೇಕಾಗುತ್ತದೆ. ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಬಿ.ಜೆ.ಪಿ. ನಿಯೋಗ ಹೋಗಿದ್ದೆವು. ತಾವು ಎಲ್ಲಾ ರೀತಿಯ ಸಹಕಾರ ಕೊಡುತ್ತೇವೆಂದು ಮುಖ್ಯಮಂತ್ರಿಗಳಿಗೆ ಹೇಳಿದರು. ಸ್ವಾಮಿ ತಾವು ಏನೇ ತೀರ್ಮಾನ ತೆಗೆದುಕೊಳ್ಳಿ ಅಲ್ಲಿ ರಾಷ್ಟ್ರಧ್ವಜ ಹಾರಿಸಿ ಎಂದು ಹೇಳಿದೆವು. ಅದಕ್ಕೆ ನೀವು ಮುಂದಿನ ಜನವರಿ 26ಕ್ಕೆ ರಾಷ್ಟ್ರಧ್ವಜ ಹಾರಿಸೋಣ ಎಂದು ಹೇಳಿದಿರಿ. ನನಗೆ ಗೊತ್ತು ಅಧ್ಯಕ್ಷರೇ, ಆದರೆ ಏಕೆ ಈ ಸಮಸ್ಯೆ ಬಂತು? ಈಗ ಏನು ಹೇಳುತ್ತಾರೆ ಮಾನ್ಯ ಅಧ್ಯಕ್ಷರೇ, ಇದು ಹುಬ್ಬಳ್ಳಿ ಜನಕ್ಕೆ ಬಿಟ್ಟಿದ್ದುದು. ಅವರೇ ಇದನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲಿ ಎಂದರು. ಇದನ್ನು ಏತಕ್ಕೆ ಮುಂಚೆ ಮಾಡಲಿಲ್ಲ? ಹುಬ್ಬಳ್ಳಿ ಜನಕ್ಕೆ ಬಿಟ್ಟಿದ್ದು ಎಂದು ಈಗ ಹೇಳುವವರು ಈ ಘಟನೆಗಳು ಆಗಿ ಎಲ್ಲ ಬೆಂಕಿ ಹತ್ತಿಕೊಂಡು ಉರಿದ ಮೇಲೆ ಈ ರೀತಿ 5 ಜನರ ಕೊಲೆ ಆದ ಮೇಲೆ ಈಗ ಅಲ್ಲಿರುವಂತಹ ಜನ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿ ಎನ್ನುವಂತಹ ಸದ್ಬುದ್ಧಿ ಈಗ ಬಂದು ಹೇಳಿಕೆಯನ್ನು ಕೊಟ್ಟರಲ್ಲ ಈ ಕೆಲಸವನ್ನು ತಾವು ಮುಂದೆಯೇ ಏತಕ್ಕೆ ಮಾಡಲಿಲ್ಲ.

ಈ ಪ್ರಯತ್ನವು ತಾವು ಏತಕ್ಕೆ ಮಾಡಲಿಲ್ಲ. ಇದರ ಬಗ್ಗೆ ತಾವು ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಇನ್ನೊಂದು ಸಂಗತಿ ತಾವು ಹೇಳಿ. ಅಂತಹ ಉನ್ನತ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ ಈ ಘಟನೆ ನಡೆದು ಹುಬ್ಬಳ್ಳಿಯಲ್ಲಿ 10 ದಿವಸ ಆಯಿತು ಸ್ವಾಮಿ. ಅಲ್ಲಿ 6 ಜನ ಗುಂಡಿಗೆ ಬಲಿ ಆಗಿದ್ದಾರೆ. ಇವತ್ತಿನವರೆಗೂ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಹೋಗಿ ಸತ್ತ ಕುಟುಂಬಗಳನ್ನು ಭೇಟಿ ಮಾಡಿ ಅವರಿಗೆ ಸಾಂತ್ವನ

ಹೇಳಿ ಬರುವಂಥದ್ದು ಒಬ್ಬ ರಾಜ್ಯದ ಮುಖ್ಯಮಂತ್ರಿ ಜವಾಬ್ದಾರಿ ಇತ್ತು ತಾನೆ. ನಿಮಗೆ ಬಿಡುವು ಇಲ್ಲ ಹೋಗಲಿ, ಹೋಮ್ ಮಿನಿಸ್ಟರ್ ಹೋಗಿ ಬರಬೇಕಾಗಿತ್ತಲ್ಲ ನಿಮಗೂ ಬಿಡುವು ಇಲ್ಲ ಹೋಗಲಿ, ಧಾರವಾಡ ಜಿಲ್ಲೆಯಲ್ಲಿ ಮೂರು ಜನ ಮಂತ್ರಿಗಳು ಇದ್ದರಲ್ಲ ಅವರಾದರೂ ಹೋಗಬಹುದಿತ್ತಲ್ಲ, ಅಂದರೆ ಇವತ್ತು ಏನು ಅಪರಾಧಿ ಸ್ಥಾನದಲ್ಲಿ ನಿಂತಿದ್ದೀರಾ ಅಕ್ಷಮ್ಯ ಅಪರಾಧವಾಗಿದೆ. ಅದು ನಿಮ್ಮನ್ನು ಕುಕ್ಕುತ್ತಿದೆ, ತಿನ್ನುತ್ತಿದೆ. ಹೀಗಾಗಿ ಆ ಜನರನ್ನು ಭೇಟಿ ಮಾಡಲಿಲ್ಲ ನೈತಿಕ ಸ್ಥೈರ್ಯ ಕಳೆದುಕೊಂಡಿದ್ದೀರೆಂದು ಜನ ತಿಳಿದುಕೊಳ್ಳಲೇನು? ಆ ಸ್ಥಾನಕ್ಕೆ ಅದು ಸರಿ ಅನಿಸುತ್ತದೆಯೇ. ಆದರೆ 24 ಗಂಟೆಗಳಲ್ಲಿ ಭದ್ರಾವತಿಗೆ ಹೋದಿರಿ. ಅಲ್ಲಿ ಗುಂಡು ಬಿದ್ದಂತಹವರ ಮನೆಗೆ ಹೋದಿರಿ, ಅವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟಿರಿ ಆದರೆ ಇಲ್ಲಿ ಸತ್ತವರು ಬಿ.ಜೆ.ಪಿ.ಯವರು, ಅವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಿದಿರಿ. ಅವರಿಗೆ ಒಂದು ಪೈಸೆ ಹಣ ಈ ನಿಮಿಷದವರೆಗೂ ಪಾವತಿ ಆಗಲಿಲ್ಲ. ನಿಮ್ಮ ಕರ್ತವ್ಯ ಎಂದು ನೀವು ಕೊಡುತ್ತೀರಾ ನಿಮ್ಮ ಪಾಪಕ್ಕೆ ಪ್ರಾಯಶ್ಚಿತ ಎಂದು ಕೊಡುತ್ತೀರಿ. ಆದರೆ ನಾನು ಹೇಳುತ್ತೇನೆ, ಅದು ನಿಮ್ಮ ಕರ್ತವ್ಯ ಅಲ್ಲವೇ? ತಾವು ಇದರ ಬಗ್ಗೆ ಸ್ವಲ್ಪ ಹೇಳಬೇಕು.

ಮುಖ್ಯಮಂತ್ರಿಗಳು ಯಾರೋ ಒಬ್ಬ ಮಿಲಿಟರಿ ಡಿಕ್ಟೇಟರಲ್ಲ, ತಾವು ಇವತ್ತು ಚುನಾಯಿತ ಸರ್ಕಾರದ ಒಬ್ಬ ಮುಖ್ಯಮಂಯಾಗಿ ಒಬ್ಬ ಪ್ರತಿನಿಧಿಯಾಗಿ ಈ ನಾಡಿನ ನಾಲ್ಕೂವರೆ ಕೋಟಿ ಜನಕ್ಕೆ ಪಕ್ಷಭೇದ ಮರೆತು ನ್ಯಾಯ ಒದಗಿಸಿಕೊಡುವಂತಹ ಒಂದು ಪವಿತ್ರ ಉನ್ನತ ಸ್ಥಾನದಲ್ಲಿ ನಿಂತಿದ್ದೀರಿ. ಆದರೆ ಈ ಘಟನೆಗಳನ್ನು ನೋಡಿದಾಗ ಬಿಜೆಪಿಯ ಮೇಲೆ ಯಾವುದೋ ಒಂದು ಆಕ್ರೋಶ, ಹಠಮಾಡಿ ಉಮಾಭಾರತಿ ಯಡಿಯೂರಪ್ಪ ಬಂದು ಪತ್ರಿಕಾಗೋಷ್ಠಿ ಮಾಡಿದರು. ನಿಮ್ಮ ಚಕ್ರವ್ಯೂಹವನ್ನು ಭೇದಿಸಿ ಬೆಳಿಗ್ಗೆ 6.45ಕ್ಕೆ ರಾಷ್ಟ್ರಧ್ವಜವನ್ನು ಹಾರಿಸುವುದರಲ್ಲಿ ಯಶಸ್ವಿಯಾದರು. ಜಾತಿಯ ವಿಷಬೀಜ ಬಿತ್ತುವುದರಲ್ಲಿ ವಿಫಲವಾಗಿ ಯಾವುದೇ ಮುಸ್ಲಿಂ ಬಂಧುಗಳು ಬೀದಿಗೆ ಇಳಿಯಲಿಲ್ಲ. ಅದರಲ್ಲಿ ನೀವು ಫೇಲ್ ಆದಿರಿ. ಈ ಎಲ್ಲ ಕಾರಣಕ್ಕಾಗಿ ದೇಶಪಾಂಡೆ ನಗರದಲ್ಲಿ ಗುಂಡು ಹಾರಿಸಿ ಒಂದು ರೀತಿ ಸೇಡು ತೀರಿಸಿಕೊಳ್ಳುವಂತಹ ಅಕ್ಷಮ್ಯ ಅಪರಾಧ ತಾವು ಮಾಡಿದ್ದೀರಿ. ತಾವು ಉತ್ತರವನ್ನು ಈಗ ಕೊಡುತ್ತೀರಿ, ಮುಂಚಿನೆ ಅದರ ಮೇಲೆ ನಾವು ಚರ್ಚೆ ಮಾಡಬೇಕೆಂದು ನಾವು ಯೋಚನೆ ಮಾಡಿದ್ದುದು ಆಗಲಿಲ್ಲ. ಈಗಲಾದರೂ ತಮ್ಮಲ್ಲಿ ವಿನಂತಿಮಾಡುತ್ತೇನೆ. ನೀವು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾವೇನು ನಿಮಗೆ ರಾಜ್ಯಪಾಲರಿಗೆ ಮನವಿಯನ್ನು ಕೊಟ್ಟಿದ್ದೆವು, ಇಷ್ಟಾದರೂ ಈ ಪರಿಸ್ಥಿತಿ ತರುವುದಕ್ಕೆ ಏಕೆ ನೀವು ಕಾರಣಕರ್ತರಾದಿರಿ? ಆ ರೀತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇನ್ನೊಂದು ರಾಜಕೀಯ ಪಕ್ಷ ಉಳಿಯಬಾರದೆಂದು ನಿಮ್ಮ ಅಪೇಕ್ಷೆ ಇದೆಯಾ? ಅಥವಾ ನಿಮ್ಮ ವಿಚಾರಗಳನ್ನು ಈ ನಾಡಿನ ಜನಕ್ಕೆ ತಿಳಿಸಿ ಅವರ ಮನವೊಲಿಸುವಂತಹ ಪ್ರಯತ್ನ ಈ ಸ್ವತಂತ್ರ್ಯ ಪ್ರಜಾಪ್ರಭುತ್ವ ಭಾರತದಲ್ಲಿ ಇಲ್ಲವೇ? ಸ್ವತಂತ್ರ ಭಾರತದ ಇತಿಹಾಸದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದನ್ನು ತಡೆಯುವಂಥಾದ್ದು ಅಕ್ಷಮ್ಯ ಅಪರಾಧವಾಗುತ್ತದೆ. ಮೂರು ವರ್ಷ ಅವರಿಗೆ ಕಠಿಣ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ಪ್ರಿಕವೆನ್‌ಷನ್ ಆಫ್ ಇನಸಲ್ಟ್ ಟು ನ್ಯಾಷನಲ್ ಆನರ್ 1971 ಕಾನೂನು ನಿಮಗೆ ಅನ್ವಯವಾಗುವುದಿಲ್ಲವೇ? ಒಬ್ಬ ರಾಜ್ಯದ ಮುಖ್ಯಮಂತ್ರಿ ಈ ಕಾನೂನಿಗೆ ವಿರುದ್ಧವಾಗಿ ನೀವೇ ಗುಂಡಿಕ್ಕಿ ಕೊಲ್ಲುತ್ತೀರಾ? ನೀವೇ ರಾಷ್ಟ್ರಧ್ವಜ ಹಾರಲಿಲ್ಲ ಎಂದು ಅಟ್ಟಹಾಸದಿಂದ ಮೆರೆಯುತ್ತೀರ ಎಂದರೆ ನಿಮಗೆ ಯಾರು ಶಿಕ್ಷೆ ಕೊಡಬೇಕು ಸ್ವಾಮಿ ? ಯಾವ ಕೋರ್ಟ್ ಶಿಕ್ಷೆ ಕೊಡಬೇಕು? ಅದಕ್ಕಾಗಿ ನೀವು ಬಚಾವ್ ಆಗುವುದಕ್ಕೆ ಆಗುವುದಿಲ್ಲ. ನಾಡಿನ ನಾಲ್ಕೂವರೆ ಕೋಟಿ ಜನ ನಿಮಗೆ ಬುದ್ಧಿ ಕಲಿಸುತ್ತಾರೆ. ನಾನು ಭಗವಂತನಲ್ಲಿ

ಪ್ರಾರ್ಥನೆ ಮಾಡುತ್ತೇನೆ. ಅಲ್ಲಿ ಯಾರು ಬರುತ್ತಾರೋ ಗೊತ್ತಿಲ್ಲ. ಬಂದಾಗ ಯಾವ ಅಕ್ಷಮ್ಯ ಅಪರಾಧ ಮಾಡಿದ್ದೀರೋ ಈ ಅಪರಾಧಕ್ಕೆ ನೇತೃತ್ವವಹಿಸಿದಂತಹ ಮುಖ್ಯಮಂತ್ರಿ ನೀವಿದ್ದೀರಿ ಅದಕ್ಕೆ ತಕ್ಕ ಶಿಕ್ಷೆ ಅದೇ ಜೈಲಿನಲ್ಲಿ ಕೊಳೆಯುವಂತಹ ಕಾಲ ಹತ್ತಿರ ಬರುತ್ತಿದೆ, ಅದನ್ನು ಮರೆಯಬೇಡಿ ಎಂದು ಎಚ್ಚರಿಕೆ ಕೊಡುತ್ತಾ, ಇವತ್ತು ರಾಜ್ಯದ ಜನರಲ್ಲಿ ಕ್ಷಮಾಪಣೆ ಕೇಳಿ, ನಿಮ್ಮ ಸರ್ಕಾರವನ್ನು ವಿಸರ್ಜನೆ ಮಾಡಿ, ಇನ್ನು ಮೂರು ತಿಂಗಳು ಕಾಯುವಂತಹ ಅಗತ್ಯ ಇಲ್ಲ. ಜನ ಆಕ್ರೋಶಗೊಂಡಿದ್ದಾರೆ. ನಿಮ್ಮನ್ನು ಕಿತ್ತೆಸೆಯಲು ತೀರ್ಮಾನ ಮಾಡಿದ್ದಾರೆ. ಬನ್ನಿ ಚುನಾವಣೆಗೆ ಹೋಗೋಣ. ಯಾವುದೇ ನ್ಯಾಯಾಂಗ ತನಿಖೆ ಅಗತ್ಯವಿಲ್ಲ. ಈ ಮಾತನ್ನು ಹೇಳುತ್ತಾ, ಬಹುಶಃ ದೇಶದ ಇತಿಹಾಸದಲ್ಲಿ ನಾಲ್ಕೂವರೆ ಕೋಟಿ ಜನ ತಲೆತಗ್ಗಿಸುವಂತಹ ಕೆಲಸ ಮಾಡಿದಿರಿ. ಒಬ್ಬ ಮುಖ್ಯಮಂತ್ರಿ ಇಂಥವರು ಇದ್ದರು, ಆಗಸ್ಟ್ 15 ರಂದು ಗೋಲಿಬಾರ್ ಮಾಡಿ ಹೋಮ ಮಾಡಿದರು. ಅಕ್ಷಮ್ಯ ಅಪರಾಧ ಮಾಡಿದರು ಎಂದು ಇತಿಹಾಸದಲ್ಲಿ ಬರೆಯುವಂಥ ಅಪರಾಧ ಮಾಡಿಬಿಟ್ಟಿರಿ. ನಿಮ್ಮನ್ನು ಈ ನಾಡಿನ ಜನ ಕ್ಷಮಿಸುವುದಿಲ್ಲ, ನಾಳೆ ನೀವು ಈ ಕಾನೂನನ್ನು ಎದುರಿಸುವಂತಹ ಸಂದರ್ಭ ಬಂದಾಗ ಜೈಲಿನಲ್ಲಿ ಕೊಳೆಯುವಂತಹ ಸಂದರ್ಭ ಬಂದಾಗ ಇದೇ ಜನ ಅಟ್ಟಹಾಸದಿಂದ ಮೆರೆದು ಚಪ್ಪಾಳೆ ತಟ್ಟುವಂತಹ ಪರಿಸ್ಥಿತಿ ಬರಬಹುದು. ನಿಮ್ಮ ಜೊತೆ ಇವರಿದ್ದಾರಲ್ಲ ಇವರನ್ನು ನಂಬಬೇಡಿ. ಎಲ್ಲರಿಗೂ ಕೈಕೊಟ್ಟು ಎಲ್ಲರಿಗೂ ಅಡ್ಡದಾರಿ ಹಿಡಿಸಿ ಎಲ್ಲರನ್ನೂ ಇಳಿಸಿ ಗೆದ್ದವರ ಹಿಂದೆ ಓಡಿಹೋಗುವಂತಹ ಈ ಜನರ ಅಡ್ವೈಸ್ ತೆಗೆದುಕೊಂಡರೆ ಖಂಡಿತ ನಿಮ್ಮ ಪಕ್ಷ ನಿರ್ನಾಮವಾಗುತ್ತದೆ, ಉದ್ಧಾರವಾಗುವುದಿಲ್ಲ, ವಿನಾಶಕಾಲೇ ವಿಪರೀತಬುದ್ಧಿ ಎಂಬಂತೆ ಕೊನೆಗಾಲ ನಿಮ್ಮ ಹತ್ತಿರ ಬಂದಿದೆ. ನಾನು ಮುಖ್ಯಮಂತ್ರಿಗಳಲ್ಲಿ ಉತ್ತರ ಕೊಡಬೇಕಾದರೆ ಅದು ಡಿಸ್ಪ್ಯೂಟ್ ಲ್ಯಾಂಡ್ ಎನ್ನುವುದಕ್ಕೆ ಏನಾದರೂ ಆಧಾರ, ಕೋರ್ಟ್ ಡಿಸಿಶನ್ ಇದ್ದರೆ ಅದನ್ನು ಇಲ್ಲಿ ಸದನದಲ್ಲಿ ಇಡಬೇಕು ಮತ್ತೆ ಸ್ಪೀಕರ್ ಕೊಠಡಿಗೆ ನಾನು ಕೊಟ್ಟಿರುವ ಕ್ಯಾಸೆಟನ್ನು ಹಾಕಿಸುವಾಗ ತಾವು ಬಂದು ವಿರೋಧಪಕ್ಷದ ನಾಯಕರನ್ನು, ಪತ್ರಿಕೆಯವರನ್ನು ಕರೆಯಿರಿ, ಯಾವ ರೀತಿ ಅವತ್ತು ಗೋಲಿಬಾರಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾವ ಲ್ಯಾಬರೇಟರಿಯಲ್ಲಿ ಅದು ತಯಾರಾಯಿತು?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ನೋಡಿ, ಅದಲ್ಲ ಅಂದರೆ ರಿಜೆಕ್ಟ್ರಾಡಿ ಅಥವಾ ನಿಮ್ಮ ಒಳ್ಳೆಯ ಲ್ಯಾಬರೇಟರಿಯಲ್ಲಿ ನೀವೇ ತೆಗೆಸಿದಂತಹ ಕ್ಯಾಸೆಟಿದೆಯಲ್ಲ ಅದನ್ನು ಹಾಕಿಸಿ ಯಡಿಯೂರಪ್ಪನವರೇ ಈದ್ಗಾ ಮೈದಾನದ ಹತ್ತಿರ ನೀವು ಬರುತ್ತಿದ್ದಿರಿ, ಅದಕ್ಕೇ ಗೋಲಿಬಾರ್ ಮಾಡಿದೆವು ಎಂದು ನೀವು ಹೇಳಿದರೆ ನಾನು ಹೇಳಿದೆ, ಬದುಕಿರುವವರೆಗೆ ನಾನು ರಾಜಕೀಯದಲ್ಲಿ ಪ್ರವೇಶ ಮಾಡುವುದಿಲ್ಲ, ಅದನ್ನು ಪ್ರೂವ್ ಮಾಡುವಂತಹ ದಾಖಲೆಗಳನ್ನು ಇಡಬೇಕೆಂದು ಒತ್ತಾಯ ಈ ಸಂದರ್ಭದಲ್ಲಿ ಮಾಡಿ...

ಶ್ರೀ ಎಂ. ವೀರಪ್ಪ ಮೊಯಿಲಿ : ಇವರ ನಾಟಕ ಬಹಳ ನೋಡಿದ್ದಾರೆ, ಇದೊಂದು ಹೊಸ ನಾಟಕ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇಷ್ಟು ಹೊತ್ತು ನಾನು ಅವರ ಭಾಷಣ ಕೇಳಿದೆ, ಒಂದು ಪ್ರಶ್ನೆಗೆ ಅವರು ಉತ್ತರ ಕೊಡಲಿಲ್ಲ, ಏಕೆ ಅಲ್ಲೇ ಬಾವುಟ ಹಾರಿಸಬೇಕು ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ ಹಾರಿಸಬಾರದು ಎಂದು ಹೇಳಿ. ಈ ದೇಶದಲ್ಲಿ ರಾಷ್ಟ್ರಧ್ವಜ ಹಾರಿಸಬಾರದೆನ್ನುವ ಯಾವುದಾದರೂ ಡಿಸ್ಪ್ಯೂಟೆಡ್ ಲ್ಯಾಂಡ್ ಇದ್ದರೆ ಹೇಳಿ. ಬದುಕಿರುವವರೆಗೂ ಹೋರಾಟ ಮಾಡುತ್ತೇನೆ, ಬಿಡುವುದಿಲ್ಲ. ನೀವು ಎಲ್ಲದಕ್ಕೂ ಕಾಂಪ್ರಮೈಸ್ ಮಾಡಿಕೊಳ್ಳಬಹುದು, ನಾವು ಸಿದ್ಧವಿಲ್ಲ. ಈ ತರಹ ದೇಶ ಸ್ವಾಭಿಮಾನದ ಗೌರವದ ಸಂಕೇತಗಳ ಬಗ್ಗೆ ಅವಮಾನವಾದಾಗ ನೀವು ಕುರ್ಚಿಗಾಗಿ ಕಾಂಪ್ರಮೈಸ್ ಮಾಡಿಕೊಳ್ಳಲು ನೀವು ರೆಡಿ ಇರಬಹುದು; ನಾವು ಸಿದ್ಧವಿಲ್ಲ.

+ Sri Qumarul Islam : (Gulburga) : Speaker Sir, the Hon'ble Leader of the opposition, Mr Chandre Gowda, and Mr.B.S Yediyurappa have spoken on this. The very important point just now raised by our Hon'ble Member Mr. Chandre Gowda is that why Mr.Yediyurappa, BJP and RSS wanted that the flag hoisting should be done on a particular Idga Maidan. This is reality agitating the minds of so many of us who are sitting here "I will give the reply as to what is the purpose behind this. This is the 48th Independence which we observed ; last year was 47th, and 1992 was 46th. Till 46th, that means right from 1947 to 1991, the independence was observed, but there was no question of flag hoisting at idga Maidan of Hubli. But, one Mr. Prahlad Joshi who was having an organisation by name suraksha Rastra Raksha Samithi has tried to hoist national flag in the idga Maidan of Hubli in the year 1992. But, much importance was not given. Then, after some time, that Board has gone ; and that Committee has gone. Then, Mr.Yediyurappa came into picture as a hero. He wanted and his party wanted that the flag hoisting is to be done in the year 1993. First, it was tried by Prahlad Joshi and his party in the year 1992. That Board has been removed and that has vanished. Now, the case is taken up by Mr. Yediyurappa and his party and all his colleagues. They also tried but the Government has protected. The Same Veerappa Moily Government has protected and the flag hoisting was not allowed. There was not much agitation. But, in this year 1994, why so much importance is given for this. Just he has given the statement that it was started by Anjuman and all these things. I have also a copy of these things. Two hundred years before this was the land in the possession of the Muslims of the Hubli. They were in the possession and enjoyment of this land and they were praying. There is no dispute to Mr. Yediyurappa also. But, in the year 1920-21, city survey was done by the Government and in the city survey, in the entry of the Idga 1 Acre, 5 Guntas and 16 yards has gone to the Municipality of the Hubli. In the year 1920-21, one Mr. Sardar Mehboob Ali Khan, brother of Nawab of Shahanur who was also the legislator and who was the then founder president of Anjuman-E-Islam, raised objection that this land was under the possession of Muslim/Mohemmedan since two hundred years and when the city survery was done, no enquiry was made. So, he made an application. then an enquiry was made on the application

of the president of Anjuman, and the Divisional commissioner has already written to the Government that on these *conditions* the land may be given on lease and this is the Lease Agreement. Then in the year 1993, for your information Sir, in the Municipality a resolution was passed and the resolution passed in that General Body Meeting of the Municipality is not by Musalman, it is by sri siddappa Kumbli who was a senior Advocate, who was a non-Muslim, who was the Revenue Minister in the Bombay Karnataka Government and the propasal was seconded by another non-Muslim in the special General Body meeting held in August in 1921. And as per that special General Body Meeting this land of 1 Acre, 5 Guntas, 16 yards was recomanded to the Govenrment to be given on lease on a very minimum rate of one rupee per year for 999 years. Here so many Advocates are there. The lease is for 999 years and this is the copy of the lease Deed Agreement after the direction of the Government. " In pursuance of the order GRD No. 4999 dated 11-1- 1992, passed by the Government of Bombay a lease dated 17-5-1930 has been excuted by the first Defendant in favour of the third defendant. The lease deed has been marked and Exhibted." ಅದು ಕನ್ನಡದಲ್ಲಿ ಇದೆ ಒಂದೆರಡು ಸಾಲು ಓದುತ್ತೇನೆ. 999 ವರ್ಷಗಳ ನಿರಂತರ ಜಾಗದ ....

5.25 ಪಿ.ಎಂ.

There is no dispute. So, there is a lease for 999 years. There was no dispute till 7-3-1992. Then your Mr. Shettar the Ex- M.L.A., and all these fellows of BJP have gone to the court. Because in 1970, the second president was Goodwala who was the Chairman of the Minority Commission, then Mr. R.H. Mohsin was the chairman. Fortunately in this Anjuman, all the presidents were either MPS, MLAs or Ministers. Even our Hon'ble minister Hindusgeri was the president. Right from Mehboob Ali Khan, then F.H.Mohisin, then Goodwala, then Mohisin, then Sanadi and then Mujahid and Hindusgeri and now the other man were presidents. In 1971, Mr. Mohisin had written a letter. What he has said? He said the purpose of this was for the prayer and all lease deed has been done. He said "the Government may allow him to have the shopping Complex so that in the name of the Pandit Jawaharlal Nehru, they have started and they have passed a Resolution that they wanted to run the college and run the college, they required money, and the sanctity of the place of worship. will also be there and a complex may be allowed". It was for the Government whether to allow or disallow. The application was made by Mr.F.H. Mohisin who was the then president and

who was the MLA in 1960. He has become a member of parliament in 1962. First an application was given and then a letter was given and the Anjuman was permitted and the construction of the shop was allowed by the municipal Corporation in 1971 and in 1972, the completion certificate was also given. When this is the case in 1972, these persons belonging to B.J.P., have gone to the Munsiff court. There, the judgement has come. Their contention was that this should be declared as a public place, and the customary right of the public over this place should be declared and also the demolition of the shopping complex. Then the judgement in the Munisiffs court came in favour of the petitioners, it has not come in favour of Anjuman. The judgement was also given in the first Appeal which was in the additional court.

"There cannot be a customary right of the public"

This was the judgement in the First Appeal. But they have at the same time stated that the shops should be demolished and the permission given is illegal. Then there was second Appeal in the high court. Who has gone in second Appeal in the High court? Our Anjuman people have gone stating that permission which was given is legal and customary right has not been given to the public. That has been rejected. It is a place of worship which has been given and the lease is a perpetual and permanant one which has been up held. So there is no dispute as far as the ...

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ನಮ್ಮ ಸ್ನೇಹಿತರಿಗೆ ಒಂದನ್ನು ಕ್ಲಿಯರ್ ಮಾಡಲು ಇಚ್ಛೆಪಡುತ್ತೇನೆ. ಆ ಲ್ಯಾಂಡ್ ಯಾರಿಗೆ ಸೇರಬೇಕೆಂಬ ಬಗ್ಗೆ ಸುಪ್ರೀಂಕೋರ್ಟ್ ಹೈಕೋರ್ಟ್‌ಗಳಲ್ಲಿ ಏನಾಗುತ್ತದೆ ಅದರ ಬಗ್ಗೆ ನನಗೆ ಏನೂ ಸಂಬಂಧವಿಲ್ಲ ಗೊಂದಲವಿಲ್ಲ. ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಅಲ್ಲಿ ಅವಕಾಶ ಮಾಡಿಕೊಡಬೇಕಾಗಿತ್ತು. ಅಲ್ಲಿ ಎಲ್ಲಾ ಪಕ್ಷದ ಸಭೆಗಳು ಆಗುತ್ತವೆ. ಗಾಡಿಗಳು ನಿಲ್ಲುತ್ತವೆ, ವ್ಯಾಪಾರ ನಡೆಯುತ್ತದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮೊನ್ನೆ ಅಲ್ಲಿ ಸಭೆ ಮಾಡಿದ್ದರು. ನಾವೂ ಮಾಡಿದ್ದೇವೆ. ನೀವು ಮಾಡಿದ್ದೀರಿ. ಅಲ್ಲಿ ವರ್ಷಕ್ಕೆರಡು ಬಾರಿ ನಮ್ಮ ಸ್ನೇಹಿತರು ನಮಾಜು ಮಾಡುತ್ತಾರೆ. ಅಲ್ಲಿ ರಾಷ್ಟ್ರಧ್ವಜ ಹಾರಿಸುವುದು ಅಪರಾಧವೇ. ಕೋರ್ಟ್ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಅದಕ್ಕೆ ನಾವೂ ನೀವೂ ಬೈಂಡಿಂಗ್ ಆಗಬೇಕಾಗುತ್ತದೆ. ರಾಷ್ಟ್ರಧ್ವಜವನ್ನು ಹಾರಿಸುವುದು ಅಪರಾಧವೇ?

Sri Qamarul Islam : I fully agree with the Hon'ble Member. My purpose is not to tell all these court cases. I am coming to the crux of the problem. Again they have gone to the High court in the year 1992. There was a cross Appeal from them only to show that there should be a proven evidence, to create an evidence, there should be a customary right to the public. The High

Court also upheld that there is no customary right of the public and the case is there in the Supreme Court and again they have gone in Cross Appeal. In the year 1992, thtis Sinister design was made.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಹತ್ತಿರ ಆರ್ಡರ ಕಾಪಿ ಇದೆ. ಹೈಕೋರ್ಟ್ ಡಿಸಿಷನ್ ಏನಿದೆ ಎಂದರೆ ಅದು ಕಾರ್ಪೊರೇಷನ್‌ಗೆ ಸೇರಿದಂಥ ಸ್ಥಳ. ಎರಡು ಬಾರಿ ನಮಾಜು ಮಾಡಬೇಕು, ಆ ಕಟ್ಟಡವನ್ನು ಒಡೆಯಬೇಕು ಎಂದು ಇದೆ. ಡಿಸ್ಟ್ರಿಕ್ಟ್ ಕೋರ್ಟಿನ ಡಿಸಿಷನ್ ಅಷ್ಟೆ. ಹೈಕೋರ್ಟ್ ಡಿಸಿಷನ್ ಅಷ್ಟೆ. ಕಾಪೀಸ್ ಇದೆ, ಬೇಕಾದರೆ ಅದನ್ನು ನೋಡಿ. ಒರಿಜಿನಲ್ ಕಾಪಿ ಕೊಟ್ಟಿದ್ದೇನೆ. ಇಲ್ಲ ರೆಕಾರ್ಡ್‌ಗೆ ತಪ್ಪು ಮಾಹಿತಿ ಹೋಗಬಾರದು.

Sri Qamarul Islam : I will give the copies of the judgements. Five judgments are there. I will also give the original copy. The customary right was not proved. Now, in the year 1992, when the case has come up for arguments, some of the Advocates have advised and also our Hon'ble Member and his party have advised that the case is there in the Supreme court, now it has come for arguments and you have no ground except to create an evidence, so that, by that way you can say it is a public place. So, the purpose of Flag hoisting is not to give an honour to the flag. Every citizen is ready to honour the National flag, and to give our blood and life. But here the sinister design is, not to give respect to the national flag, but just to create an evidence for the Supreme court. This is the sinister design. This is the purpose as to why these people are so much agitating. This is the reason why these people are so much emotional. There are so many valleys. There is a ground, Nehru Maidan ground, and a club in Deshapandenagar, and there is also the old Durgad Bail. Why in all these places, the party people have not gone and hoisted the flag?

One thing I wanted to tell you. It is the duty of the Government. Now, it has been said, it was given for a religious purpose. I wanted to know, whether this is the only land of one acre five guntas and sixteen yards which was given to the Muslims in the past thirty to forty years? The Public Municipality has given lands not only to one, but to many religious persons for their religious purposes, for the educational purpose, for the charitable purpose, Is it not a fact that it has been given to "Mooru Savira Matt" Swamiji? Now the complex has been created there? It it not a fact that it has been given to Cancer Hospital at Hubli? It has been given by the Municipality and they have constructed the complex. For a good purpose, the Cancer Hospital has come. For Swamiji, it has been given for a very good Matt, so that there should be preaching of the truth. These complexes have been created to see that they have the finances and also in thte Hondas so many merchants have been given. Is this the only place which has been

given by the Municipality not by a Musalman, but it has been given by the Non-Muslim and that too a calibered and Senior Advocate who was the then Member of the Municipality in 1992, through the Resolution which was passed. Fortunately, that was also in the August of 1991. Just imagine our country in the year 1992, how we were having the communal harmony. But here, we are sowing the seeds of hatredness between the community and community. We all know the R.S.S. are having no faith in the Secularism.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ದೇಶದ್ರೋಹಿ ಮುಸ್ಲಿಂ ಲೀಗ್ ಜೊತೆಗೆ ಪಾಠ ಹೇಳಿಸಿಕೊಳ್ಳುವಂಥ ಪರಿಸ್ಥಿತಿ ಬಂದರೆ ಹೇಗೆ? I am sorry.

ಶ್ರೀ ಕಮರುಲ್ ಇಸ್ಲಾಂ : ನಾನು ಈಗ ಮುಸ್ಲಿಂ ಲೀಗ್ ಇಲ್ಲ. ನಾನು ಮುಸ್ಲಿಂ ಕ್ಯಾಂಡಿಡೇಟ್ ಅಲ್ಲ. ನಾನು ಇಂಡಿಯನ್ ನ್ಯಾಷನಲ್ ಲೀಗ್ ಕ್ಯಾಂಡಿಡೇಟ್ ನಮ್ಮದು ಪಕ್ಷ ರಿಜಿಸ್ಟರ್ ಆಯಿತು. ನಮ್ಮ ಕಾನ್‌ಸ್ಟಿಟ್ಯೂಷನನ್ನು ತಾವು ನೋಡಿ.

ಶ್ರೀ ಕೆ.ಹೆಚ್. ರಂಗನಾಥ್ : ಅವರಿಬ್ಬರೂ ಫಂಡಮೆಂಟಲಿಸ್ಟ್. ಅವರು ಮುಸ್ಲಿಂ ಫಂಡಮೆಂಟಲಿಸ್ಟ್.

Sri Qamarul Islam : I am just narrating. The R.S.S., don't have faith in the Secularism of this country. They don't have faith in the socialistic pattern of this country. That is why, they exploited Religion in Ayodhya. That was the trump. card. Lot of yatras have been made and finally the mosque was demolished. But we must congratulate the people of our country, they have got nothing. They wanted to come to power. But in North India, with all the exploitation of the Religion by the B.J.P., and the Sangh pariwar, they have failed to come to power. Now they are trying to use the National Flag.

ಶ್ರೀ ವಾಟಾಳ್ ನಾಗರಾಜ್ : ಈ ಇಬ್ಬರ ಜಾಗವನ್ನು ಬದಲಾವಣೆ ಮಾಡಬೇಕು.

ಶ್ರೀ ವೈ.ಕೆ. ರಾಮಯ್ಯ : ಇಬ್ಬರೂ ಅಕ್ಕಪಕ್ಕದಲ್ಲಿ ಕುಳಿತರೆ ಕಷ್ಟ.

(ಗೊಂದಲ)

Sri Qumurul Islam : Now the record is changed. Because they failed in using religion, now they are trying to use the national flag as if they are the only nationalist and others have no respect for the national flag and the nation. With this intention all this drama was made. I have got a feeling because 5 or 6 innocent people have been killed in the firing. Mr. Yediyurappa himself said they were innocent and were taking food. As far as that part is concerned when there was a curfew in the whole of the city and all the eliminations of 8 police stations, he was going to deviate that. A very responsible lady member of Lok Sabha had come with this intention. The police authorities knew very well they are coming with this intention. Respected

hon.member and senior leader Mr. Yediyurappa has gone there, Mr. Eshwarappa and even Mr. Tanga and all MLAs and MLCs of BJP have gone there. The police knew this. Now TADA is the blackest law among all the black laws. We don't want TADA to continue. But, at the same time, TADA should have been implemented for this incident when they are playing with our national flag and the secular fabric of this country.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ರಾಷ್ಟ್ರಧ್ವಜವನ್ನು ಹಾರಿಸುವುದು ಅಪರಾಧವೆಂದು ಹೇಳುವವರಿಗೆ ಇಲ್ಲಿ ಮಾತನಾಡಲು ಅವಕಾಶ ಮಾಡಿಕೊಡುವುದೂ ಸಹ ಅಪರಾಧ ಆಗುತ್ತದೆ. ಈ ರೀತಿ ಭಾಷೆ ಉಪಯೋಗಿಸುವುದಾದರೆ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಷ್ಟ್ರ ಧ್ವಜ ಹಾರಿಸುವುದನ್ನು ತಡೆಯುವುದಕ್ಕೆ ಇರತಕ್ಕಂಥ ಇವರ ಪ್ರವೃತ್ತಿಯನ್ನು ನಾವು ಹತ್ತಿಕ್ಕಬೇಕಾಗುತ್ತದೆ. ನಾವು ಈ ಪ್ರವೃತ್ತಿಯನ್ನು ಖಂಡಿಸಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ದಯಮಾಡಿ ಕುಳಿತುಕೊಳ್ಳಿ ಅವರು ಮುಗಿಸಲಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮಲ್ಲಿ ಒಂದು ಗಾದೆ ಮಾತು ಇದೆ. ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡು ಎಂದು. ನೀವು ಏಕೆ ಪದೇ ಪದೇ ಎದ್ದು ಹೇಳುತ್ತೀರಿ, ಅವರು ಹೇಳಲಿ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಚಂದ್ರೇಗೌಡರು ಕುಂಬಳ ಕಾಯಿ ಕಳ್ಳ ಎಂದರೆ ನೀವು ಏಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಶ್ನೆ ಇಷ್ಟೆ. ನೀವು ಮನ ಬಂದಂತೆ ಮಾತನಾಡುತ್ತೀರಿ. ನಮ್ಮದು ದುಃಖ ಇಲ್ಲ ಮಾತನಾಡಿ. ಆದರೆ ಇಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಹೋದವರನ್ನು ಟಾಡಾ ಮೇಲೆ ಬಂಧನ ಮಾಡಬೇಕು ಎಂದು ಹೇಳುವಂತಹದು ಅಕ್ಷಮ್ಯ ಅಪರಾಧ ಆಗುತ್ತದೆ. ಈ ರೀತಿ ಮಾತನಾಡುವುದು ಗೌರವ ತರುವಂತಹ ಸಂಗತಿ ಅಲ್ಲ.

(ಗೊಂದಲ)

Sri Qumurul Islam : We are the law makers. The personalities who had come there are the constitution makers. Nobody is above the law. I will show the statement of, She has said , 'I will challenge the police. If they are having guts let them come'. She was able to reach Deshpande Nagar. More than five thousand people had come and they were agitated. In the name of victory false and fabricated video films and clumsy photos were shown. Some of the photos have appeared in newspapers. I don't have faith in this, I don't

believe this. One thing is real, she is responsible for killings of these 5 or 6 innocent people.

ಶ್ರೀ ಬಿ.ಎಸ್. ಯಡಿಯೂರಪ್ಪ : ಲೋಕಸಭೆಯ ಒಬ್ಬ ಸದಸ್ಯರ ಹೆಸರನ್ನು ಈ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶವಿಲ್ಲ. ಯಾರೂ ಸಹ ಅದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ತಾವು ಅದಕ್ಕೆ ರಕ್ಷಣೆ ಕೊಡಬೇಕಾಗುತ್ತದೆ. ಲೋಕಸಭೆಯ ಸದಸ್ಯರ ಬಗ್ಗೆ ಏನು ಬೇಕಾದರೂ ಮಾತನಾಡಬಹುದೇ? ಇದರ ಬಗ್ಗೆ ರೂಲಿಂಗ್ ಕೊಡಿ. ಈ ಕುರಿತು ತಾವು ನಿರ್ದೇಶನ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ.

(ಈ ಹಂತದಲ್ಲಿ ಯಡಿಯೂರಪ್ಪನವರು ಸದನದ ಬಾವಿಯೆಡೆ ಧಾವಿಸುತ್ತಿದ್ದರು)

ಉಪಾಧ್ಯಕ್ಷರು : ದಯಮಾಡಿ ತಾವು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಬ್ಬ ಲೋಕಸಭಾ ಸದಸ್ಯರ ಹೆಸರನ್ನು ಇಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶವಿಲ್ಲ, ತಮ್ಮ ಮನ ಬಂದಂತೆ ಮಾತನಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀವಾಟಾಳ್ ನಾಗರಾಜ್ : ಲೋಕಸಭಾ ಸದಸ್ಯರ ಹೆಸರನ್ನು ಈ ಸದನದಲ್ಲಿ ಪ್ರಸ್ತಾಪಿಸಬಾರದು.

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು, ಬಾವಿಯಲ್ಲಿ ಇತರ ಬಿಜೆಪಿ ಸದಸ್ಯರಾದ ರುಕ್ಮಯ್ಯ ಪೂಜಾರಿ ಮತ್ತು ನಾರಾಯಣರಾವ್ ಮನಹಳ್ಳಿಯವರು ನಿಂತಿದ್ದರು)

ಸಭಾಧ್ಯಕ್ಷರು : ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಎರಡು ವಿಚಾರಗಳಿವೆ. ಒಂದು, ಯಡಿಯೂರಪ್ಪನವರು ತಮ್ಮ ಭಾಷಣ ಮಾಡುವಾಗ ಸದನದ ಬಾವಿಯೊಳಗೆ ಇಳಿಯುವುದಿಲ್ಲವೆಂದು ಹೇಳಿದ್ದರು. ಈಗ ನಾನು ಅದನ್ನು ನೆನಪಿಸುತ್ತಿದ್ದೇನೆ. ಅವರು ಈಗ ಬಾವಿಯಲ್ಲಿದ್ದಾರೆ. ಬಾವಿಗಿಳಿಯುವುದಿಲ್ಲವೆಂದು ಸ್ಪಷ್ಟವಾಗಿ ಭರವಸೆ ಕೊಟ್ಟಿದ್ದರು. ಮತ್ತೊಂದು ಅವರು ಎತ್ತಿರತಕ್ಕಂಥ ಪ್ರಶ್ನೆಯೇನೆಂದರೆ, ಸದನದಲ್ಲಿ ಲೋಕಸಭಾ ಸದಸ್ಯರ ಹೆಸರುಗಳನ್ನು ಪ್ರಸ್ತಾಪಿಸಿದಾಗ ಅನೇಕ ಬಾರಿ ನಾವೆಲ್ಲರೂ ವಿರೋಧ ಮಾಡಿದ್ದೇವೆ. ಈ ಸದನದಲ್ಲಿ ಲೋಕಸಭಾ ಸದಸ್ಯರ ಹೆಸರನ್ನು ಪ್ರಸ್ತಾಪಿಸಬಾರದು. ಅದು ಸದನದ ನಡವಳಿಕೆಯ ಪ್ರಕಾರ ಇದೆ. ಆದುದರಿಂದ, ಈ ವಿಷಯದಲ್ಲಿ ನಾವು ಯಡಿಯೂರಪ್ಪನವರಿಗೆ ಬೆಂಬಲ ಕೊಡುತ್ತೇವೆನ್ನುವ ಪ್ರಶ್ನೆಯಲ್ಲ. ಲೋಕಸಭಾ ಸದಸ್ಯರ ಹೆಸರನ್ನು ಇಲ್ಲಿ ಪ್ರಸ್ತಾಪಿಸುವುದು ಅನುಚಿತ. ಇದಕ್ಕೆ ತಾವು ಕೆಟ್ಟ ಸಂಪ್ರದಾಯ ಹಾಕುವುದು ಬೇಡ.

(ಬಾವಿಯಲ್ಲಿ ನಿಂತು ಯಡಿಯೂರಪ್ಪನವರು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ತಮ್ಮ ಸ್ಥಾನವನ್ನು ಅಲಂಕರಿಸಬೇಕು.

Sri Qumurul Islam : She has challenged the police...

ಶ್ರೀ ಕೆ.ಎಚ್. ರಂಗನಾಥ್ : ಅವರ ಹೆಸರನ್ನು ತೆಗೆದುಬಿಟ್ಟು, ಲೋಕಸಭಾ ಸದಸ್ಯರು ಅಲ್ಲಿಗೆ ಬಂದಿದ್ದರೆಂದು ಹೇಳಿ ಸಾಕು.

Sri Qumurul Islam : I will take back that word (name)

(ಈ ಹಂತದಲ್ಲಿ ಯಡಿಯೂರಪ್ಪನವರು, ರುಕ್ಮಯ್ಯ ಪೂಜಾರಿ ಮತ್ತು ನಾರಾಯಣರಾವ್ ಮನಹಳ್ಳಿಯವರು ತಮ್ಮ ಸ್ವಸ್ಥಾನಕ್ಕೆ ಮರಳಿ ಕುಳಿತುಕೊಂಡರು)

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಖಮರುಲ್ ಇಸ್ಲಾಂರವರು (ಉಮಾಭಾರತಿ) ಎಂಬ ಹೆಸರನ್ನು ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆದುಹಾಕುವುದು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾಜಿ ಸಂಸದೀಯ ಸಚಿವರು ಈಗ ಹೇಳಿದ ವಿಚಾರ ನನಗೇನೂ ಅಷ್ಟು ಒಪ್ಪಿಗೆಯಾಗುವುದಿಲ್ಲ. ಕೇವಲ ಒಬ್ಬ ......

(ಗೊಂದಲ)

(ಈ ಹಂತದಲ್ಲಿ ಮಂತ್ರಿಗಳಾದ ವಸಂತ ಸಾಲಿಯಾನ ಮತ್ತು ಆಡಳಿತ ಪಕ್ಷದ ಕೆಲವರು ಯಡಿಯೂರಪ್ಪನವರನ್ನು ಉದ್ದೇಶಿಸಿ ಕೂಗುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಕುಸ್ತಿ ಮಾಡುತ್ತಿದ್ದೀರಾ? ಗೌರವದಿಂದ ನಡೆದುಕೊಳ್ಳಿರಿ, ಮನ ಬಂದಂತೆ ಮಾತನಾಡುತ್ತೀರಾ? ಈ ದೇಶವನ್ನು ಹಾಳು ಮಾಡಿದಂತೆ

ಇದನ್ನು ಗಡಿಪ್ರದೇಶವೆಂದು ತಿಳಿದುಕೊಂಡಿದ್ದೀರಾ? ತಾವು ಮಂತ್ರಿಯಾಗಿದ್ದೀರಿ, ಗೌರವದಿಂದ ನಡೆದುಕೊಳ್ಳಿ. ತಮ್ಮ ಜವಾಬ್ದಾರಿಯನ್ನು ಅರಿತು ಮಾತನಾಡಿ.

ಉಪಾಧ್ಯಕ್ಷರು : ಯಡಿಯೂರಪ್ಪನವರೆ, ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೇನು ಕುಸ್ತಿ ಅಖಾಡವೇ? ನಿಮ್ಮಂಥ ಬಹಳ ಜನರನ್ನು ನೋಡಿದ್ದೇನೆ, ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸದನವನ್ನು ಸುಗಮ ರೀತಿಯಲ್ಲಿ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಇದಕ್ಕೆ ಸಂಬಂಧಿಸಿದಂತೆ ಒಂದು ವಿಚಾರ ಪ್ರಸ್ತಾಪಿಸಲು ನನಗೆ ಅವಕಾಶ ಕೊಡಿ.

(ಗೊಂದಲ)

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಲೋಕಸಭೆಯ ಸದಸ್ಯರ ಹೆಸರನ್ನು ಇಲ್ಲಿ ಚರ್ಚೆ ಮಾಡಬೇಕೋ ಬೇಡವೋ ಎಂಬ ಬಗ್ಗೆ ಏನು ಚರ್ಚೆ ನಡೆಯುತ್ತಿದೆ ಅದರ ಬಗ್ಗೆ ಮಾಜಿ ಸಂಸದೀಯ ಸಚಿವರಾದ ಕೆ.ಹೆಚ್. ರಂಗನಾಥ್‌ರವರು ಲೋಕಸಭೆಯ ಸದಸ್ಯರ ಹೆಸರನ್ನು ಬಿಟ್ಟು ಬರೆ ಲೋಕಸಭೆಯ ಸದಸ್ಯರು ಎಂದು ಹೇಳಿದರೆ ಸಾಕು ಎಂದು ತಮಗೆ ಸಲಹೆಯನ್ನು ಕೊಟ್ಟಿದ್ದಾರೆ. ಇದು ಸಂಸದೀಯ ನಿಯಮಗಳಿಗೆ ಯಾವುದೇ ರೀತಿಯಾದ ಧಕ್ಕೆ ಬರತಕ್ಕ ವಿಚಾರವಲ್ಲ. ಏಕೆಂದರೆ ಕೇವಲ ಒಬ್ಬರು ಲೋಕಸಭೆಯ ಸದಸ್ಯರಾಗಿದ್ದು ಅವರು ನಮ್ಮ ರಾಜ್ಯಕ್ಕೆ ಬಂದು ಏನು ಬೇಕಾದರೂ ಮಾಡಬಹುದು, ಅವರ ಹೆಸರನ್ನು ಈ ಸದನದಲ್ಲಿ ನಾವು ಎತ್ತಬಾರದೆಂದು ಹೇಳಿದರೆ ನಮ್ಮ ಹಕ್ಕುಚ್ಯುತಿಯಾದಂತಾಗುತ್ತದೆ. ದಯಮಾಡಿ ಮಾಜಿ ಸಂಸದೀಯ ಸಚಿವರು ಮತ್ತೊಮ್ಮೆ ಇದರ ಬಗ್ಗೆ ಉಪಾಧ್ಯಕ್ಷರಿಗೆ ಹೇಳಿದರೆ ಒಳ್ಳೆಯದು.

ಶ್ರೀ ಕೆ.ಹೆಚ್. ರಂಗನಾಥ್ : ನಮ್ಮ ನಿಯಮದಲ್ಲಿ ಏನಿದೆ ಎಂದರೆ one who cannot defend himself here in his House....

(Interruptions)

Prof M.D. Nanjundaswamy : If they indulge in criminal activities...

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಪ್ರೂವ್ ಮಾಡುವುದಕ್ಕೆ ನೀವು ಯಾರು? ಸಂದರ್ಭ ಬಂದಾಗ ಅದನ್ನು ಮಾಡೋಣ. ಕೋರ್ಟ್ ಅದನ್ನು ಮಾಡುತ್ತದೆ.

(Interruptions)

Sri Qamarul Islam : The name has been removed. So far as the hoisting of National flag is concerned, one Mr. Devendra Naik, who is an advocate filed a case in the Munsiff Court in Hubli in 1993 before 15th August, stating to the Court that this is a disputed matter. I am not using any other word than the "disputed place". Flag cannot be hoisted. There is a judgment in this case and the case number is 1730/1994. A clear judgment has come and the Petition was dismissed.

The prayer there in that case was that the National Flag is to be hoisted at Idga Maidan which is a disputed place. Whether the Flag can be hoisted in a disputed place? This is the issue. There is also a Writ Petition pending in the Court in 1993 and there also, in clear cut terms they have said, "We will take a final decision, but because this is a matter of disputed place, it is left to the Defendants 1, 2 and 3, the Government, Anjuman and the Commissioner to deal with the issue. They have not allowed to hoist the flag. Another point referred to by Sri D.B. Chandregowda is "why at this particular place?". My friend Sri Yediyurappa said, "no, we will not go. Let a Muslim man, let Anjuman man, let Mr. Hindusgeri go and hoist the flag "For the nation, Muslims are not behind. Again it is their intention to see that there should be the customary right of the people to hoist the flag. That is the sinister design. That is why we are objecting. That is the issue before us, that is the issue before law and that is the issue before the Supreme Court. Till the judgment comes everybody has to respect Supreme Court.

SRI. B.H. BANNIKOD : The land is in dispute according to you. If the dispute is over, are you willing to hoist the flag.? ಧ್ವಜಾರೋಹಣ ಮಾಡಬೇಕೋ, ಮಾಡಬಾರದೋ ಎನ್ನುವ ಬಗ್ಗೆ ಯಾರಿಗೂ ಆತಂಕವಿಲ್ಲ.

SRI QAMARUL ISLAM : Everybody has to respect the Supreme Court. It is the matter of Anjuman. What I am arguing is the intention and the purpose. O.K., we are bad. I am a bad man. Let others do it. Innocent people will say that when they wanted the National flag to be hoisted, these Muslims are not allowing, Anjuman people are not allowing and Mr. Veerappa Moily took up as a challenge that it will not be allowed, all these controversies will come. Even in the Second Appeal, the Supreme court said, construction permission which has been given should be allowed, but it was not allowed. But so far as the lease is concerned, that is in their favour. I respect our Senior most Parliamentarian who is the leader of the Opposition of their party Sri Attal Bihari Vajpayeeeji who has been recently given the Award as the best Parliamentarian. Has his statement not appeared in the newspaper that "Our party will hoist the Flag next year"? As a Senior Parliamentarian, who got award, we have lot of respect for him. I can understand Mr. Murali Manohar Joshi or I can understand Mr. Advaniji making such a statement.

But I never expected such a statement from Attalji. He is supposed to be the balanced man. He has given a statement.

Mr. Deputy Speaker : please come to the point.

ಶ್ರೀ ಬಿ.ಎಸ್. ಯಡಿಯೂರಪ್ಪ :ಮಾನ್ಯ ಮುಖ್ಯಮಂತ್ರಿಗಳು ಇರುವಾಗ ಇಂತಹ ಚರ್ಚೆ ಆಗಬಹುದು. ನನ್ನದು ಏನೂ ಅಭ್ಯಂತರವಿಲ್ಲ.

ಉಪಾಧ್ಯಕ್ಷರು : ಖಮರಲ್‌ರವರೇ ತಾವು ಮುಗಿಸಿ, ಯಡಿಯೂರಪ್ಪನವರೇ ನಾನು ಹೇಳುತ್ತಿದ್ದೇನೆ, ವಿಚಾರಕ್ಕೆ ಬನ್ನಿ ಎಂದು....

ಶ್ರೀ ಖಮರಲ್ ಇಸ್ಲಾಂ : ನಾನು ಏನು ಕ್ರಿಟಿಸೈಸ್ ಮಾಡಿಲ್ಲ. ಪೇಪರ್‌ನಲ್ಲಿ ಏನು ಸ್ಟೇಟ್‌ಮೆಂಟ್ ಇದೆ ಅದನ್ನು ಕ್ವೋಟ್ ಮಾಡಿ ವಿಧಾನಸಭೆಯಲ್ಲಿ ಹೇಳುತ್ತಿದ್ದೇನೆ. ನಾನು ಎಂ.ಎಲ್.ಎ. ಆಗಿದ್ದೇನೆ. ನಾನು ನನ್ನ ಹಕ್ಕನ್ನು ಉಪಯೋಗ ಮಾಡಿ ಭಾಷಣ ಮಾಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರ ಅಬ್ಜೆಕ್ಷನ್ಸ್ ನಿಮಗೆ ಅರ್ಥವಾಗಲಿಲ್ಲ. ಅಡ್ವಾನಿಜಿ ಅವರ ಹೆಸರನ್ನು ಹೇಳುವ ಬದಲು ವಿರೋಧ ಪಕ್ಷದ ನಾಯಕರು ಅನ್ನಿ ಎಂದು ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಚಂದ್ರೇಗೌಡರು ಉತ್ತರ ಕೊಡುತ್ತಾರೆ? ಮಾಜಿ ಪ್ರಧಾನಮಂತ್ರಿ ಶ್ರೀ ಚಂದ್ರಶೇಖರ್‌ರವರು ಈ ದೇಶದಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸುವುದಕ್ಕೆ ಬರುವುದಿಲ್ಲ ಎನ್ನುವ ಸ್ಥಳವಿಲ್ಲ ಸುಪ್ರೀಂ ಕೋರ್ಟ್‌ಗೂ ಅಧಿಕಾರವಿಲ್ಲ. ಎಂದು ಹೇಳಿದರು. ಇದಕ್ಕೆ ಮಾನ್ಯ ಸಿಂಧ್ಯಾರವರು, ಮಾನ್ಯ ಚಂದ್ರೇಗೌಡರು, ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ.

Sri D.B. ChandreGowda : We are in full agreement with you. ನಿಮ್ಮ ಅಭಿಪ್ರಾಯಕ್ಕೆ ನಮ್ಮದೇನು ಇಲ್ಲ. ಈದ್ಗಾ ಎಲ್ಲಿದೆ ಅಲ್ಲಿಗೆ ಹೋಗುತ್ತೀರಿ. ಅಯೋಧ್ಯ ಮಸೀದಿಯನ್ನು ಹೊಡೆಯುವುದಕ್ಕೆ ಅಲ್ಲಿಗೆ ಹೋಗುತ್ತೀರಿ?

Sri Qamarul Islam : I have just oen or two points. I welcome the judicial probe. At the same time, I request the Hon'ble Chief Minister that there should be a reference in this probe to the Lady Parliamentarian who has come here, who has instigated. There should be a reference in this Judicial Probe to the Leader of the Opposition in the Rajya Sabha who has come here with an intention and who has given a statement that he will defy the prohibitory orders. There should be a reference to the Member of the house belonging to BJP who has given a statement that they will defy the prohibitory orders. If that reference is there, I believe Mr. Veerappa Moily is doing justice with the probe, otherwise it is only an eye-wash. It is my demand because these are the persons who have instigated.

My argument is there, my feeling is there, let there be a probe. I welcome it. I have faith in your sincerity and that is why I am giving you this suggestion. Then only the Judicial probe will be a perfect probe and the truth will come out. The guilty will be punished. I do not want to go into the details because my colleagues have said so many things. Only one thing I

wanted to say is, that there are statement from the B.J.P. leaders that they have trained two Monkeys who will go and hoist the flag. It has come in the papers. I can only say even Parachutes will come from Helicopter. Everything is there. Their case is a lost case. Monkeys have been used for this. Just imagine. I do not want to go into the details. With these words, I thank the Chair for having given this opportunity.

5.55 ಪಿ.ಎಂ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಈಗ ಸಮಗ್ರವಾಗಿ ನಾವು ಕಳುಹಿಸಿರತಕ್ಕಂತಹ ನಿಲುವಳಿ ಸೂಚನೆ ಗೋಲಿಬಾರ್ ನಡೆದ ಬಗ್ಗೆ ಎನ್ನುವುದು ಸ್ಪಷ್ಟವಾಗಿದೆ. ಇಲ್ಲಿ ನಮ್ಮ ಅನೇಕ ಸ್ನೇಹಿತರುಗಳು ಚರ್ಚೆ ನಡೆಸಿದಾಗ ಅದು ಗೋಲಿಬಾರ್ ವಿಚಾರಕ್ಕಿಂತ ಹೆಚ್ಚಾಗಿ ಒಂದು ಮೈದಾನದ ಬಗ್ಗೆ, ಆ ಮೈದಾನ ಯಾರದ್ದು, ಯಾರಿಗೆ ಸೇರಬೇಕು ಎನ್ನುವ ಚರ್ಚೆ, ಕೊನೆಗೆ ಮುಂದೆ ಯಾರ ಸರ್ಕಾರ ಬರುತ್ತದೆ. ನಿಮ್ಮ ಸರ್ಕಾರ ಎಲ್ಲಿ, ನಮ್ಮ ಸರ್ಕಾರ ಇಲ್ಲಿ ಎಂದು ದಾರಿ ತಪ್ಪಿ ಹೋಗುವಂತಹ ಮಾತನಾಡಿದ್ದಾರೆ. ಅಂತಿಮವಾಗಿ ಮಾನ್ಯ ಯಡಿಯೂರಪ್ಪನವರು ನಮ್ಮ ಸರ್ಕಾರ ಬಂದೇ ಬರುತ್ತದೆ; ಆಗ ಮೊಯಿಲಿಯವರೇ ನಾವು ನಿಮ್ಮನ್ನು ಜೈಲಿಗೆ ಇಡುತ್ತೇವೆ ಕೊಲ್ಲಿಸುತ್ತೇವೆ ಎಂದು ಹೃದಯವೇ ಇಲ್ಲದೆ ಮಾತನಾಡಿರತಕ್ಕಂಥಾದ್ದನ್ನು ನೋಡಿ ನನಗೆ ಬಹಳ ನೋವಾಯಿತು. ಜೈಲಿನಲ್ಲಿ ಇಟ್ಟು ಕೊಲ್ಲಿಸುತ್ತೇವೆ ಎನ್ನುವ ಪದ ಇದೆಯಲ್ಲ ಅದು ಈ ಪ್ರಪಂಚದಲ್ಲಿ ಬ್ರಿಟಿಷರ ಕಾಲದಲ್ಲಿ ಈ ರೀತಿ ಆಗಿತ್ತೋ ಇಲ್ಲವೋ ಎನ್ನುವಷ್ಟು ಮನಸ್ಸಿಗೆ ನೋವಾಗುತ್ತದೆ. ಆದರೆ ಅದು ಈ ದೇಶದಲ್ಲಿ ಸರ್ವಾಧಿಕಾರಿಗಳಿಗೆ ಮಾತ್ರ ಸಾಧ್ಯವೇ ಹೊರತು ಪ್ರಜಾ ತಂತ್ರವಾದಿಗಳು ಪ್ರಜಾಪ್ರಭುತ್ವವನ್ನು ಒಪ್ಪಿರತಕ್ಕಂಥವರಿಗೆ ಅದು ಸಾಧ್ಯವಿಲ್ಲ. ನಮ್ಮ ಸರ್ಕಾರ ಬಂದೇ ಬರುತ್ತದೆ ನಿಮ್ಮನ್ನು ನಾವು ಜೈಲಿನಲ್ಲಿ ಇಟ್ಟು ಕೊಲ್ಲಿಸುತ್ತೇವೆ ಎಂದು ಹೇಳುವುದು ಹೃದಯ ಇಲ್ಲದೇ ಮಾತನಾಡುವಂತಾದ್ದು. ಎಂದರೆ ಇದು ಆವೇಶದಲ್ಲಿ ಮಾತನಾಡಿದ್ದಾರೆ. ಮತ್ತೆ ತಲೆ ಬೋಳಿಸುವುದಕ್ಕೂ ಜೈಲಿನಲ್ಲಿ ಇಡುವುದಕ್ಕೂ ಬಹಳ ವ್ಯತ್ಯಾಸ ಇದೆ. ಆದರೆ ಅವರು ಏನು ಹೇಳಿದರು ಎಂದರೆ ನಾನು ಬೋಳಿಸುತ್ತೇನೆ ಎಂದು ಹೇಳಲಿಲ್ಲ, ತಲೆ ಬೋಳಿಸಿಕೊಂಡು ಸ್ನಾನ ಮಾಡಿಕೊಂಡು ಹೋಗಬೇಕಾಗುತ್ತದೆ ಎಂದು ಹೇಳಿದರೆ ಹೊರತು ನಾನು ಬೋಳಿಸುತ್ತೇನೆಂದು ಅವರು ಹೇಳಲಿಲ್ಲ. ತಲೆ ಬೋಳಿಸತಕ್ಕಂಥಾದ್ದು ಒಂದು ನಿಮಿಷದ ಕೆಲಸ. ಆದರೆ ನಿಮ್ಮನ್ನು ನಿರಂತರವಾಗಿ ಕೊಳೆಸುತ್ತೇವೆಂದು ಹೇಳುವುದು ಸಮಂಜಸವಲ್ಲ ಎಂದು ನನಗೆ ಅನಿಸಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಮಾನ್ಯ ಯಡಿಯೂರಪ್ಪನವರ ವಿಚಾರ ಏನಿಲ್ಲ, ಅವರು ಪಕ್ಷದ ಸಿದ್ಧಾಂತವನ್ನು ಹೇಳಿದರು. ಈ ದೇಶದಲ್ಲಿ ನಾವು ಯಾವಾಗಲೂ ಹೇಳಿಕೊಂಡು ಬಂದಿದ್ದೇವೆ. ಏನೆಂದರೆ ಈ ಪಕ್ಷ ಒಂದು ಫ್ಯಾಸಿಸ್ಟ್ ಪಕ್ಷ. ಎಂದರೆ ಹಿಟ್ಲರ್ ಏನು ಮಾಡಿದ ಸಾವಿರಾರು, ಲಕ್ಷಾಂತರ ಮಂದಿಯನ್ನು ಜೈಲಿನಲ್ಲಿ ಹಾಕಿ ಕೊಲ್ಲಿಸಿ ಏನೇನೋ ಮಾಡಿದನಲ್ಲ ಆ ಭಾಷೆಗೂ ಆ ಹಿಟ್ಲರ್ ಮಾಡಿದಂತಹ ಕೆಲಸಕ್ಕೂ ಇವತ್ತು ನಮ್ಮ ಬಿಜೆಪಿ ನಾಯಕರು ಮಾಡಿದಂತಹ ಕೆಲಸಕ್ಕೂ ಸಾಕಷ್ಟು ತಾಳೆ ಇದೆ. ಆದುದರಿಂದ ಇದು ಒಂದು ಫ್ಯಾಸಿಸ್ಟ್ ಪಕ್ಷ ಎಂದು ಇವತ್ತು ಯಡಿಯೂರಪ್ಪನವರು ಇಡೀ ದೇಶಕ್ಕೆ ಸಾಬೀತು ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಸ್ಟ್ 15ನೇ ತಾರೀಖು ಹಿಟ್ಲರನ್ನು ಮೀರಿಸುವಂತಹ ಕೆಲಸವನ್ನು ನೀವು ಮಾಡಿದ್ದೀರಿ. ಹಿಟ್ಲರ್‌ನ ಸರಿಸಮಾನವಾದ ವರ್ತನೆ ನೀವು ಮಾಡಿದ್ದೀರಿ. ಅದನ್ನು ಮರೆಯಬೇಡಿ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ಜೈಲಿನಲ್ಲಿ ಇಟ್ಟು ಕೊಳೆಸತಕ್ಕಂತಹ ಸರ್ಕಾರ ಬರುವುದು ಬೇಡ. ಯಾರೇ ಆಗಲಿ, ಯಡಿಯೂರಪ್ಪನವರೇ ಆಗಲಿ, ಮೊಯಿಲಿಯವರೇ ಆಗಲಿ. ನಿಮ್ಮ ಪರಿಸ್ಥಿತಿಗಳನ್ನು ನೋಡಿದರೆ ಜನ ನನಗೆ ಓಟು ಕೊಡತಕ್ಕಂತಹ ಪರಿಸ್ಥಿತಿ ಇದೆ. ನಿಮ್ಮ ಈ ಪರಿಸ್ಥಿತಿ, ಈ ಅವಿವೇಕ, ಈ ತರಹ ಚರ್ಚೆಗಳು, ದಿನಕ್ಕೆ ಒಂದು ಸುಳ್ಳು ಹೇಳುವುದು ಜಾಸ್ತಿಯಾಗಿದೆ. ನಾನು ಒಬ್ಬನೇ ಇದ್ದರೂ ನಿಮ್ಮ 224 ಜನಕ್ಕೆ ಸಮ ನಾನು, ಇದು ಅವರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ. ಒಂದು ನಿಮಿಷ ನಿಮಿಷಕ್ಕೂ ನಮ್ಮ ರಾಜಕಾರಣ ಎಷ್ಟು ಬದಲಾವಣೆ ಆಗುತ್ತಿದೆ, ರಾಜಕಾರಣಿಗಳು ಜನರಿಗೆ ಯಾವ ರೀತಿ ಸುಳ್ಳು, ಮೋಸ ಹೇಳುತ್ತಿದ್ದಾರೆ ಎನ್ನುವುದನ್ನು ನಾವು ಸಾಬೀತು ಮಾಡಬೇಕಾಗುತ್ತದೆ. ಇದೇ ಸದನದಲ್ಲಿ ಅನೇಕ ಜನ ನಮ್ಮ ಸ್ನೇಹಿತರು. ಈಗ ಅದನ್ನು ಹೇಳುವುದಕ್ಕೆ ಹೋದರೆ ಅದು ಬೇರೆ ಕಡೆಗೆ ಹೋಗುತ್ತದೆ. ಅದು ಸರಿಯಲ್ಲ. ಏಕೆಂದರೆ ಯಾವ್ಯಾವ ರಾಜಕಾರಣಿಗಳು ಯಾವ್ಯಾವ ಸಂದರ್ಭದಲ್ಲಿ ಏನೇನು ಹೇಳಿದ್ದಾರೆ ಅವನ್ನೆಲ್ಲಾ ನಮ್ಮ ಜನ ಮರೆಯುತ್ತಿದ್ದಾರೆ. ಇವತ್ತು ಏನಾಗಿದೆ ಎಂದರೆ ನಮ್ಮ ಜನ ಹೋದ ವರ್ಷ ಹೇಳಿದಂತಹ ಮಾತನ್ನು ಈ ವರ್ಷ ಮುಗಿತು ಅವನು ಸರಿಯಿಲ್ಲ, ಇವನು ಸರಿಯಿಲ್ಲ, ಇವನು ಭ್ರಷ್ಟಾಚಾರಿ. ಆದ್ದರಿಂದ ಇವನನ್ನು ಅಧಿಕಾರದಿಂದ ಇಳಿಸಬೇಕು ಎಂದು ಹೇಳಿ ನಾವು ವಾದ ಮಾಡುತ್ತಿದ್ದೇವೆ. ಆದಾದನಂತರ ಇನ್ನೊಂದು ಸರ್ಕಾರ ಬರುತ್ತದೆ, ಇವನು ಭ್ರಷ್ಟಾಚಾರಿ ಅವನೇ ಸರಿ ಎನ್ನುವ ತರಹ ಹೋಗುತ್ತಿದೆ. ನಮ್ಮಲ್ಲಿ ಅನೇಕ ಜನ ರಾಜಕಾರಣಿಗಳು ಜನರ ಮುಂದೆ ಏನು ಸತ್ಯವನ್ನು ಹೇಳುತ್ತಿದ್ದಾರೆ. ನನಗೆ ಅನಿಸುತ್ತಿದೆ ನೂರಕ್ಕೆ 90 ಭಾಗ ನಮ್ಮ ರಾಜಕಾರಣಿಗಳು ಜನಗಳ ಮುಂದೆ ಸತ್ಯವನ್ನು ಹೇಳುತ್ತಿಲ್ಲ, ಬರೀ ಬುರುಡೆ, ಬರೀ ನಾಚಿಕೆಗೇಡಿನ ಮಾತುಗಳು. ರಾಜಕಾರಣಿಗಳು ತಮ್ಮ ಸ್ವಂತ ರಾಜಕೀಯಕ್ಕೋಸ್ಕರ ಬೇರೆ ದೃಷ್ಟಿಗೆ ತಿರುಗುತ್ತಿದ್ದಾರೆ. 1967 ರ ಹಿಂದೆ ಇದ್ದ ರಾಜಕೀಯ ಬೇರೆ, ಅಲ್ಲಿಂದೀಚೆಗೆ ಬರತಕ್ಕಂತಹ ರಾಜಕಾರಣವನ್ನು ನಾವು ನೋಡಿದರೆ ನಮ್ಮ ರಾಜಕಾರಣಿಗಳು ಯಾವುದೇ ಪಕ್ಷದವರಾಗಿರಲಿ ಅವರು ಒಂದು ಸಿದ್ಧಾಂತ, ಒಂದು ತತ್ವ ಒಂದು ನಿಲುಮೆ, ಒಂದು ಸತ್ಯ. ಇದಕ್ಕೆ ಅವರು ಭಾಗಿಗಳಾಗಿಲ್ಲ. ಅವರದೇ ಆದಂತಹ ಧಾಟಿಯಲ್ಲಿ ಕಾಲಕ್ಕೆ ತಕ್ಕಂತೆ ತಮ್ಮ ಮುಖಕ್ಕೆ ನೇರಕ್ಕೆ ಬಂದಂತೆ ಮಾತುಗಳನ್ನು ಆಡುತ್ತಿದ್ದಾರೆ. ಇದನ್ನು ನೋಡಿದಾಗ ನನಗೆ ಅನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ಪಕ್ಷಗಳ ಪ್ರಾರಂಭ, ಆ ಪಕ್ಷಗಳ ಸಿದ್ಧಾಂತಗಳು ಪ್ರಾರಂಭ. ಈ ಪಕ್ಷದಿಂದ ಆ ಪಕ್ಷಕ್ಕೆ ಹೋಗತಕ್ಕಂಥವರು. ಅವರು ಹೇಳತಕ್ಕಂತಹ ಹೇಳಿಕೆಗಳು, ಅವರಲ್ಲಿ ಬರತಕ್ಕಂತಹ ವಾದಗಳು. ಇದೆಲ್ಲಾ ನೋಡಿದಾಗ ನಾವು ಎಲ್ಲಿಗೆ ಹೋಗುತ್ತಿದ್ದೇವೆ. ನಮ್ಮ ಜನರನ್ನು ಯಾವ ದಾರಿಗೆ ತಪ್ಪಿಸುತ್ತಿದ್ದೇವೆ. ಈ ರೀತಿಯಾದಂತಹ ಸಂಘಟನೆಗಳು, ಜನಗಳು, ಪಕ್ಷಾಂತರಿಗಳು ಇರುವಾಗ- ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದರು, ಬೈರೇಗೌಡರು ಹೇಳುತ್ತಿದ್ದರು, ನೀವು ಬರುತ್ತೀರಾ? ಎಂದು. ನಿಜ, ನನ್ನದು ಮೊದಲಿನಿಂದಲೂ ಒಂದೇ ಸಿದ್ಧಾಂತ, ಒಂದೇ ತತ್ವ, ಒಂದೇ ನೀತಿ. ಹೆಜ್ಜೆಹೆಜ್ಜೆಗೂ ಬೇರೆ ಪಕ್ಷಕ್ಕೆ ಹೋಗಿಲ್ಲ. ಬೇರೆ ನೀತಿಗೆ ಹೋಗಿಲ್ಲ. ಹಗಲು ಒಂದು, ರಾತ್ರಿ, ಒಂದು ನಾನು ಏನೂ ಹೇಳಿಲ್ಲ. ಆದುದರಿಂದ ನಾನು ಈ ರಾಜ್ಯಕ್ಕೆ ಬರುವುದರಲ್ಲಿ ಅನುಮಾನವೇ ಇಲ್ಲ ಎನ್ನುವ ಮಾತನ್ನು ಮಾನ್ಯ ಬೈರೇಗೌಡರಿಗೆ ಹೇಳುತ್ತಿದ್ದೇನೆ. ನಾನು ಒಬ್ಬನೇ ಏನು? ನೀವೂ ನಮ್ಮ ಜೊತೆ ಬರಬಹುದು. ಯಾವ ಕಾಲದಲ್ಲಿ ಏನು ಬರುತ್ತದೆ ಎಂದು ಹೇಗೆ ಹೇಳುತ್ತೀರಿ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಶ್ರೀಮಾನ್ ಯಡಿಯೂರಪ್ಪನವರು 2 ಬಾರಿ ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟು ಹೇಳಿದರು. ನಾನು ಮಾನ್ಯ ಯಡಿಯೂರಪ್ಪನವರ ಬಗ್ಗೆ ಮಾತನಾಡಿದ್ದುದು ಅವರನ್ನು ವೈಯುಕ್ತಿಕವಾಗಿ ನೋಯಿಸಬೇಕು ಎಂದು ಅಲ್ಲ. ಅವರ ಮಾತಿನ ಧಾಟಿ ನನಗೆ ಅನಿಸಿತು. ಮಾನ್ಯ ಸಿಂಧ್ಯಾರವರು ಇಲ್ಲಿಗೆ ಬಂದ

ತಕ್ಷಣ ಹೇಳಿದರು ಯಡಿಯೂರಪ್ಪನವರು ಬಹಳ ಬದಲಾವಣೆ ಆಗಿದ್ದಾರೆಂದು. ನನಗೂ ಹಾಗೆಯೇ ಅನಿಸಿತು. ಏಕೆಂದರೆ ಇವತ್ತಿನ ದಿವಸ ಈ ಚರ್ಚೆ ಸುಲಲಿತವಾಗಿ ಸುಧೀರ್ಘವಾಗಿ ನಡೆಯಬೇಕು ಎಂದು ನಿನ್ನೆಯ ನಮ್ಮ ಕಲಾಪದ ಸಮಿತಿಯಲ್ಲಿ ಮಾತುಕತೆ ಆಡಿದ್ದು. ಆದರೆ ಅವರು ಯಾವತ್ತೂ ಸಹ ಈ ರೀತಿ ಸುಧೀರ್ಘವಾಗಿ ಒಂದು ವಿಚಾರವಾಗಿ ಚರ್ಚೆ ಮಾಡುವುದಕ್ಕಿಂತ ಹೆಚ್ಚಾಗಿ ಧಾಳಿಯನ್ನೇ ಮಾಡುತ್ತಿದ್ದರು. ಇವತ್ತು ಚರ್ಚೆಯ ವಿಧಾನದಲ್ಲಿ ಅವರು ತೆಗೆದುಕೊಂಡ ರೀತಿ ನೀತಿ ನೋಡಿದಾಗ ನಿಜ ಬದಲಾಗಿದ್ದಾರೆ ಎನ್ನುವ ಒಂದು ನಂಬಿಕೆ ನನಗಂತೂ ಬರುತ್ತಿದೆ.

ಶ್ರೀ ಆರ್. ನಾರಾಯಣ್ : ಕಾರಣ ಏನೆಂದರೆ ಅವರು ಅಧಿಕಾರಕ್ಕೆ ಬರುತ್ತೇವೆ ಎನ್ನುವ ಕನಸು ಬಿದ್ದಿದೆ. ಅದಕ್ಕೆ ಈ ರೀತಿ ಅವರು ಬದಲಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ನಿರಂತರವಾಗಿ ಸುಮಾರು 30-32 ವರ್ಷ ಹೋರಾಟ ಮಾಡಿದ್ದೇನೆ. ಯಾರ ಮನಸ್ಸನ್ನು ನೋಯಿಸಿ ಅಥವಾ ಯಾರಿಗೂ ತೊಂದರೆ ಕೊಡತಕ್ಕಂತಹ ಹೋರಾಟ ಮಾಡಿದ್ದಿಲ್ಲ. ಶ್ರೀಮಾನ್ ಶಾಂತವೇರಿ ಗೋಪಾಲ ಗೌಡರು ಈ ಸದನದಲ್ಲಿ ಇದ್ದರು. ಹೊರಗಡೆ ಹೋರಾಟ ಮಾಡಿದ್ದಾರೆ. ಮತ್ತು ಅನೇಕ ಸಾರಿ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ವರ್ಷಗಟ್ಟಲೆ ಅವರು ಈ ರಾಜ್ಯದ ಉದ್ದಗಲಕ್ಕೂ ಚಳುವಳಿ ಮಾಡಿರತಕ್ಕಂಥಾದ್ದು ಉಂಟು. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಒಂದು ರೀತಿಯ ಚಳುವಳಿಗಳು ಹೋರಾಟಗಳು ಬೇರೆ ದಿಕ್ಕನ್ನೇ ಕಾಣತಕ್ಕಂತಹ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಇದನ್ನು ನೋಡಿದಾಗ ನನಗಂತೂ ಅತ್ಯಂತ ನೋವಾಗಿದೆ. ಇಲ್ಲಿ ಇರತಕ್ಕಂತಹ ಪ್ರಶ್ನೆ ಎರಡು. ಒಂದು ರಾಷ್ಟ್ರಧ್ವಜ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ನಿಜ ರಾಷ್ಟ್ರ ಧ್ವಜದ ಬಗ್ಗೆ ನಾವು ಯಾರೂ ಅಗೌರವ ಮಾಡತಕ್ಕಂಥಾದ್ದು ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಬುದ್ಧಿ ಉಪಯೋಗಿಸಿದ್ದರೆ, ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಸುಮಾರು ಎರಡು ಎರಡೂವರೆ ವರ್ಷದಿಂದ ಯಡಿಯೂರಪ್ಪನವರು ಮತ್ತು ಅವರ ಮಿತ್ರರು ರಾಷ್ಟ್ರ ಧ್ವಜ ಹಾಕುತ್ತೇವೆ ಎಂದು ಹೇಳುತ್ತಿದ್ದರು. ಈ ರಾಷ್ಟ್ರಧ್ವಜ ಹಾಕುವುದಕ್ಕೆ ಈ ರಾಜ್ಯದ ಮುಸ್ಲಿಂ ಜನರಿಗಾಗಲಿ, ದೇಶದ ಮುಸ್ಲಿಂ ರಾಗಲಿ ಯಾರ ವಿರೋಧ ಇಲ್ಲ. ಹಾಗಿದ್ದಾಗ ಈ ರಾಷ್ಟ್ರ ಧ್ವಜವನ್ನು ಆ ಒಂದು ಮೈದಾನದಲ್ಲಿ ಹಾಕತಕ್ಕಂತಹ ವ್ಯವಸ್ಥೆ ಏನಿದೆ ಇದರ ಬಗ್ಗೆ ಮುಂಚಿತವಾಗಿ ಎಲ್ಲಾ ವರ್ಗದ ಜನರನ್ನು ಕರೆಯಿಸಿ ಮಾತುಕತೆ ಆಡಿ ಈ ರೀತಿಯ ಪರಿಸ್ಥಿತಿಯನ್ನು ನಿರ್ಮಾಣ ಆಗುವುದಕ್ಕೆ ಅವಕಾಶ ಮಾಡದೇ ಇರತಕ್ಕಂತಹ ಶಕ್ತಿ ಮತ್ತು ವ್ಯವಸ್ಥೆ ಮಾನ್ಯ ಮುಖ್ಯಮಂತ್ರಿಗಳಿಗೆ ಇತ್ತು ಎಂದು ನಾನು ಅಂದುಕೊಂಡಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಪ್ರಾಮಾಣಿಕವಾದ ಚಿಂತನೆಯನ್ನು ನಡೆಸಿದ್ದಿದ್ದರೆ ರಾಷ್ಟ್ರಧ್ವಜದ ಬಗ್ಗೆ ಇಷ್ಟೊಂದು ಗದ್ದಲವಾಗುತ್ತಿರಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಈಗಲೂ ಕೂಡ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ರಾಜ್ಯದಲ್ಲಾಗಲಿ ರಾಷ್ಟ್ರದಲ್ಲಾಗಲಿ ಹೊಸ ರೀತಿಯ ಕ್ಷೋಭೆ ಬೆಳೆಯುವುದಕ್ಕೆ ಅವಕಾಶವನ್ನು ಕೊಡದೆ ಸರ್ವಪಕ್ಷಗಳ ಸಮಿತಿಯನ್ನು ರಚನೆ ಮಾಡಿ 1 ತಿಂಗಳೊಳಗೆ ಸಂಬಂಧಪಟ್ಟ ಎಲ್ಲರ ಜೊತೆ ಮಾತುಕತೆ ನಡೆಸಿ ಸಂತೋಷ,ಪ್ರೀತಿ, ವಿಶ್ವಾಸದಿಂದ ಆ ಜಾಗದಲ್ಲಿ ರಾಷ್ಟ್ರಧ್ವಜವನ್ನು ಹಾಕುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ವಿರೋಧಪಕ್ಷದವರನ್ನು, ಆಡಳಿತಪಕ್ಷದವರನ್ನು ಎಲ್ಲರನ್ನೂ ಒಂದುಕಡೆ ಒಟ್ಟಿಗೇ ಕೂಡಿಸಿ ಚರ್ಚೆಮಾಡಿ ಸಮಾಧಾನಕರವಾದ ತೀರ್ಮಾನಕ್ಕೆ ಬರಬಹುದಿತ್ತು. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸದನದ ಸಮಿತಿಯನ್ನು ರಚಿಸಬೇಕೆಂದು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಬಿ.ಜೆ.ಪಿ.ಯವರು ನಾವು ರಾಷ್ಟ್ರಧ್ವಜವನ್ನು ಹಾಕಿಯೇ ಹಾಕುತ್ತೇವೆಂದು ಹೇಳುವುದು, ನಾವು ಅದನ್ನು ತಡೆಯುತ್ತೇವೆಂದು ನೀವು ಈದ್‌ಗಾ ಮೈದಾನದ ಸುತ್ತ ನೀವು ವ್ಯವಸ್ಥಿತವಾಗಿ ಮಾಡಿದ ಪೊಲೀಸ್ ವ್ಯವಸ್ಥೆಯಲ್ಲಿ ಕೊನೇಪಕ್ಷ ನೀವು ಸಫಲರಾದರೂ ಆದಿರಾ? ಇಲ್ಲ, ವಿಫಲರಾದಿರಿ. ನೀವು ಒಂದು ವ್ಯವಸ್ಥೆಯನ್ನು ಮಾಡಿದಮೇಲೆ ಅದರಲ್ಲಿ ಎಲ್ಲೂ ಲೋಪವಾಗದೆ, ಗೋಲಿಬಾರ್ ಆಗದೆ ಇರುವಂತೆ ನೋಡಿಕೊಳ್ಳಬೇಕಾಗಿತ್ತು. ಕಂಡಲ್ಲಿ ಗುಂಡು ಎಂದು ಹೇಳಿದ್ದೀರಿ. ಕರ್ಫ್ಯೂವನ್ನು ವಿಧಿಸಿದ್ದೀರಿ. ಇಷ್ಟೆಲ್ಲಾ ಮಾಡಿದ್ದರೂ ನೀವು 5 ಜನರನ್ನು ಕೊಂದು ಕ್ಷೋಭೆಯಾಗಿ ಗಲಾಟೆ ಆದಮೇಲೆ ಸರ್ಕಾರದವರು ಸಂಪೂರ್ಣವಾಗಿ ವಿಫಲವಾಗಿದೆ. ಈ ದಿಸೆಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಸ್ವಲ್ಪ ಮುಂದಾಲೋಚನೆ ಮಾಡಿದ್ದಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಈಗಲೂ ಮಾನ್ಯ ಮುಖ್ಯಮಂತ್ರಿಯವರಲ್ಲಿ ನೇರವಾಗಿ ಸಲಹೆ ಮಾಡುತ್ತಿದ್ದೇನೆ. ಕೋರ್ಟ್‌ನ ವಿಚಾರದಲ್ಲಿ ಮಾತನಾಡುವುದಿಲ್ಲ. ಆ ಜಾಗ ಯಾರದ್ದು ಎಂಬ ವಿಚಾರ ಬೇಡ. ರಾಷ್ಟ್ರಧ್ವಜವನ್ನು ಹಾಕಬೇಡಿ ಎಂದು ಕೋರ್ಟ್‌ನಲ್ಲಿ ಎಲ್ಲೂ ಹೇಳಿಲ್ಲ. ರಾಷ್ಟ್ರಧ್ವಜವನ್ನು ಹಾಕಬೇಡಿ ಎಂದು ಯಾವ ಮುಸ್ಲೀಮರೂ ಹೇಳುವುದಿಲ್ಲ. ಯಾರೂ ಎಲ್ಲೂ ಹೇಳುವುದಕ್ಕೆ ಸಾಧ್ಯವಿಲ್ಲ. ಮುಸ್ಲಿಂ ಮುಖಂಡರು, ವಿರೋಧಪಕ್ಷದ ಮುಖಂಡರು ಆಡಳಿತ ಪಕ್ಷದ ಮುಖಂಡರು ಎಲ್ಲರೂ ಸೇರಿ 1 ಗಂಟೆಯೊಳಗೆ ತೀರ್ಮಾನ ಮಾಡಿಕೊಳ್ಳಬಹುದು. ಅಧ್ಯಕ್ಷರ ಮೂಲಕ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದ ಸಮಿತಿ ನೇಮಕ ಮಾಡಿ, ಆ ಸ್ಥಳದ ಮುಖಂಡರನ್ನು ಭೇಟಿ ಮಾಡಿದರೆ ಖಂಡಿತ ಈ ಸಮಸ್ಯೆ ಬಗೆಹರಿಯುತ್ತದೆ ಈಗಾಗಲೇ ಹುಬ್ಬಳ್ಳಿಯಿಂದ ಅನೇಕ ಮುಖಂಡರು ಹೇಳಿಕೆ ಕೊಟ್ಟು ರಾಜ್ಯಸರ್ಕಾರವೂ ಕೈಹಾಕುವುದು ಬೇಡ. ಬಿ.ಜೆ.ಪಿಯವರೂ ಬರುವುದೂ ಬೇಡ. ನಮ್ಮ ಸಮಸ್ಯೆಯನ್ನು ನಾವೇ ಬಗೆಹರಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ಸಮಸ್ಯೆ ಉಲ್ಬಣಗೊಂಡು ಬೇರೆ ದಿಕ್ಕಿಗೆ ತಿರುಗುವುದಕ್ಕೆ ಮುಂಚೆ ಇವರ ಸ್ನೇಹ, ವಿಶ್ವಾಸ, ಅಭಿಮಾನದಿಂದ ಮಾಡಬೇಕೆಂದು ನನ್ನ ಮನವಿ. ಗೋಲಿಬಾರ್ ನಡೆದ ಬಗ್ಗೆ 2 ರೀತಿಯ ಹೇಳಿಕೆ ಇವೆ. ಮೊದಲನೆಯದು ಅಲ್ಲಿಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಹಿರಿಯ ಪೊಲೀಸ್ ಅಧಿಕಾರಿ ಬರ್ಮನ್‌ರವರು ಅಲ್ಲಿ ಗೋಲಿಬಾರ್ ನಡೆದಿದ್ದು ತಪ್ಪು ಎಂದು ಹೇಳಿದ್ದಾರೆ.

ಇದು ಎರಡನೇ ದಿವಸ ಡ್ರೈವರ್ ಹೊಡೆದದ್ದು ಅಲ್ಲ. ಇದು ಮೊದಲನೇ ದಿವಸದ್ದು. ಮೊದಲನೇ ದಿವಸ ಗೋಲಿಬಾರ್ ನಡೆದಮೇಲೆ, ಕೊನೆಯಲ್ಲಿ ಡಿ.ಐ.ಜಿ. ಯವರು ಅಲ್ಲಿಗೆ ಹೋಗಿ ಇದು ನಡೆದಿದ್ದು ಸರಿ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇಲ್ಲಿ ಎರಡು ವಾದಗಳಿವೆ. ಆದುದರಿಂದ ಇದರಲ್ಲಿ ಯಾವ ವಾದ ಸರಿ? ಮತ್ತೊಂದು ನೇರವಾದ ಪ್ರಶ್ನೆ ಎಂದರೆ ಅಲ್ಲ ಕರ್ಫ್ಯೂ ಇದೆ. ಕರ್ಫ್ಯೂ ಇರುವಾಗ ಐದು ಜನ ಎಲ್ಲೂ ಕೂಡ ಸದಸ್ಯರಾಗಲಿ, ಸಾರ್ವಜನಿಕರಾಗಲಿ ಯಾರೂ ತಿರುಗಾಡಬಾರದು, ಹೊರಗಡೆ ಯಾರೂ ಕೂಡ ಬರಬಾರದು ಎಂದು ಇರುವಾಗ ಅಲ್ಲಿ ಸಾವಿರಾರು ಜನರು ಬೀದಿಯಲ್ಲಿ ಬರತಕ್ಕಂಥ ವ್ಯವಸ್ಥೆಗೆ ಪೋಲೀಸರು ಏತಕ್ಕೆ ಅವಕಾಶವನ್ನು ಕೊಟ್ಟರೆಂಬುದು ನೇರವಾದ ಪ್ರಶ್ನೆ. ಗುಂಡು ಹಾರಿಸುವ ಪ್ರಶ್ನೆ ಅನಂತರ. ಇಲ್ಲಿ ಕರ್ಫ್ಯೂ ಇರುವಾಗ ಜನರು ಹೊರಗೆ ಬರಲು ಸಾಧ್ಯವೇ? ಆದುದರಿಂದ ಕರ್ಫ್ಯೂವನ್ನು ಉಲ್ಲಂಘನೆ ಮಾಡುತ್ತೇವೆಂದು ಎಷ್ಟೇ ಸಾವಿರ ಜನರು ಹೇಳಿದರೂ ಆ ಜನರನ್ನು ಬಂಧಿಸಿ ಅವರನ್ನು ನಿಯಂತ್ರಣದಲ್ಲಿ ಇಡಬೇಕಾಗುದುದು ಪೋಲೀಸರ ಕರ್ತವ್ಯ. ಇಷ್ಟೆಲ್ಲಾ ಪೋಲೀಸ್ ಬಂದೋಬಸ್ತನ್ನು ಇಟ್ಟುಕೊಂಡು, ವ್ಯವಸ್ಥಿತವಾಗಿ ನಡೆಸಿ ಕೊನೇ ಗಳಿಗೆಯಲ್ಲಿ ಗುಂಡನ್ನು ಹಾರಿಸಿರುವುದು ಸರಿಯಲ್ಲ ಎಂಬುದು ಬಹಳ ಪ್ರಮುಖವಾದ ವಿಚಾರ. ಸತ್ತಿರುವವರು ಬಿ.ಜೆ.ಪಿ.ಸದಸ್ಯರು ಇರಬಹುದು, ಸಾರ್ವಜನಿಕರಿರಬಹುದು, ಅಥವಾ ಬೇರೆಯವರು ಇರಬಹುದು. ಆದರೆ ಪ್ರಾಣವಂತೂ ಹೋಗಿದೆ. ಗುಂಡಿನ ಬಾಯಿಗೆ 5 ಜನರು ಸಂಪೂರ್ಣವಾಗಿ ಬಲಿಯಾಗಿದ್ದಾರೆ. ಪತ್ರಿಕಾ ಹೇಳಿಕೆಯ ಪ್ರಕಾರ ಅಲ್ಲಿ ಸುಮಾರು 15 ನಿಮಿಷಗಳ

ಕಾಲ ಗುಂಡಿನ ಕಾಳಗ ನಡೆದಿದೆ. 15 ನಿಮಿಷಕಾಲ ಗುಂಡನ್ನು ಹಾರಿಸಿರಬೇಕಾದರೆ ಅಲ್ಲಿ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿತ್ತು? ಈ ಗುಂಡನ್ನು ಹಾರಿಸಬೇಕಾದರೆ ಅನೇಕ ವಿಧಿ ವಿಧಾನಗಳಿವೆ. ಮೊದಲು ತಮ್ಮ ಆದೇಶವನ್ನು ಪಡೆದನಂತರ ಗುಂಡನ್ನು ಹಾರಿಸಬೇಕು. ನಂತರ ಅದನ್ನು ಮಾಡುವ ಸಲಕರಣೆಗಳನ್ನು ಉಪಯೋಗಿಸಬೇಕು. ಆದರೆ ಇದನ್ನೆಲ್ಲಾ ಬಿಟ್ಟು ನೇರವಾಗಿ ಮಾಡಿದ್ದಾರೆ. ನಾವು ಲಾಠಿ ಛಾರ್ಜ್ ಮಾಡಿದೆವು, ಟಿಯರ್ ಗ್ಯಾಸ್ ಬಿಟ್ಟೆವು, ಪರಿಸ್ಥಿತಿ ಹತೋಟಿಗೆ ಬರಲಿಲ್ಲ, ಅಂತಿಮವಾಗಿ ನಾವು ಗುಂಡನ್ನು ಹಾರಿಸಿದೆವು ಎಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಇದರ ಬಗ್ಗೆ ನನಗೆ ಬಹಳವಾಗಿ ಸಂಶಯ ಮತ್ತು ಅನುಮಾನಗಳಿವೆ. ಈ ಬಗ್ಗೆ ನಾನು ಹೇಳುವುದಾದರೆ, ಅನೇಕ ಸಾರಿ ಗುಂಡುಹಾರಿಸಿರುವ ಪರಿಸ್ಥಿತಿಯನ್ನು ನೋಡಿದ್ದೇನೆ. ಆದರೆ ಇಲ್ಲಿ ಇಷ್ಟುಬೇಗ ಒಂದೇಸಾರಿ ಗುಂಡನ್ನು ಹಾರಿಸಿ ಸುಮಾರು ಜನರನ್ನು ಕೆಳಗೆ ಬೀಳಿಸಿರುವುದನ್ನು ತಾವೂ ನೋಡಿರಬಹುದು. ಈ ಪತ್ರಿಕೆಯಲ್ಲಿ ಬಂದಿರುವ ಚಿತ್ರವನ್ನು ನೋಡಿದಾಗ ನನಗೆ ಬಹಳ ನೋವಾಯಿತು. ಇದನ್ನು ಬಹುಶಃ ತಾವೂ ಕೂಡ ನೋಡಿರಬಹುದು. ಗುಂಡಿನೇಟುಗಳನ್ನು ತಿಂದು ಕೆಳಗೆ ಬಿದ್ದಿರುವ ವ್ಯಕ್ತಿಗಳನ್ನು ಮೇಲಕ್ಕೆತ್ತುವ ಪರಿಸ್ಥಿತಿ ಕೂಡ ಇರಲಿಲ್ಲ. ನಾನಾದರೂ ಹೇಳುತ್ತೇನೆ. ಗುಂಡನ್ನು ಹಾರಿಸುವುದಕ್ಕೆ ಮುಂಚೆ ಅನೇಕ ವಿಧಿವಿಧಾನಗಳಿವೆ ಎಂದು ನಾನು ತಮಗೆ ಹೇಳಿದ್ದೇನೆ. ನಮ್ಮ ಸರ್ಕಾರದವರು ಗುಂಡು ಹಾಕಿಸುವುದಕ್ಕೆ ಮುಂಚೆ ಕೆಲವು ಹೊಸ ಹೊಸ ರೀತಿಯ ಸಲಕರಣೆಗಳನ್ನು ಉಪಯೋಗಿಸುವುದನ್ನು ಕಂಡು ಹಿಡಿದಿದ್ದಾರೆ. ನೀರನ್ನು ಎರೆಚತಕ್ಕದ್ದು, ರಬ್ಬರ್ ಗುಂಡುಗಳನ್ನು ಹಾರಿಸುವುದು ಇನ್ನೂ ಮುಂತಾದ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಇಲ್ಲಿ ಆ ಯಾವ ವಿಧಾನಗಳನ್ನೂ ಅನುಸರಿಸದೆ ಗುಂಡನ್ನು ಹಾರಿಸಿರುವುದು ಸರಿಯಾದ ಮಾರ್ಗವಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಅಂತಿಮವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ. ಅವರ ಸರ್ಕಾರದವರು ಗುಂಡನ್ನು ಜನರ ಮೇಲೆ ಹಾರಿಸಿದ್ದಾರೆ. ಆದರೆ ಈ ರೀತಿ ಮಾಡಿದ್ದು ಸರಿ ಎಂದು ಹೇಳುವ ವಾದ ಬೇರೆ ಆಗುತ್ತದೆ. ಆದರೆ ಗುಂಡನ್ನು ಹೊಡೆಯುವುದಕ್ಕೆ ಮುಂಚೆ ನಮ್ಮ ಪರಿಸ್ಥಿತಿ ಏನು? ಯಾವ ರೀತಿಯಲ್ಲಿ ಗುಂಡು ಹಾರಿಸುವ ಮುನ್ನ ಅನುಸರಿಸಬೇಕಾದ ವಿಧಿವಿಧಾನಗಳನ್ನು ಅನುಸರಿಸಲಾಗಿದೆ. ಎಂಬುದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು. ಬೇರೆ ವಿಚಾರವನ್ನು ನಾನು ಹೇಳುತ್ತಿಲ್ಲ. ಅಲ್ಲಿನ ಮೈದಾನಕ್ಕೆ ಸಂಬಂಧ ಪಟ್ಟಂತೆ ಬೇಕಾದರೆ ತಾವು ಒಂದು ಸಮಿತಿಯನ್ನು ರಚನೆ ಮಾಡಿ. ನ್ಯಾಯಾಂಗ ತನಿಖೆಗೆ ಇವರು ಒಪ್ಪಿಸಬೇಕಾದ ಪ್ರಮುಖವಾದ ವಿಚಾರ ಯಾವುದು? ಗೋಲಿಬಾರ್ ನಡೆಸಿದ ಹಿನ್ನೆಲೆ ಏನು? ಹಾಗೂ ಈ ಗೋಲಿಬಾರ್‌ನ್ನು ನಡೆಸುವ ಅಗತ್ಯ ಇತ್ತೆ? ಇದನ್ನು ಇಲ್ಲಿ ಸ್ಪಷ್ಟವಾಗಿ ತಿಳಿಸಬೇಕೆಂದು ಒತ್ತಾಯಪೂರ್ವಕವಾಗಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನಾದರೂ ಹೇಳುತ್ತೇನೆ, ಇದರ ಬಗ್ಗೆ ಒಂದು ಸಮಿತಿಯನ್ನು ರಾಜ್ಯಸರ್ಕಾರದವರು ರಚನೆ ಮಾಡಲಿ. ಈ ರೀತಿ ರಚನೆ ಮಾಡಿದರೆ ಕೇವಲ ಒಂದು ಗಂಟೆಯಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರ ಗೌರವಾನ್ವಿತ ಸದಸ್ಯರು ಬಹಳಷ್ಟು ವಿಚಾರಗಳನ್ನು ಮಾತನಾಡಿ ಈಗಾಗಲೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ನ್ಯಾಯಾಂಗ ತನಿಖೆಯನ್ನು ಘೋಷಣೆ ಮಾಡಿ ಇಲ್ಲಿಗೆ ತಮ್ಮ ಜವಾಬ್ದಾರಿ ಇಲ್ಲಿಗೆ ಮುಗಿಯಿತೆಂದು ರಾಜ್ಯದ ಜನತೆಗೆ ಪ್ರಕಟಣೆಯನ್ನು ಕೂಡ ಮಾಡಿದ್ದಾರೆ. ಬಹುಶಃ ಸತ್ತವರ ಕುಟುಂಬದವರಿಗೆ ಕೊಡಬೇಕಾದ ಪರಿಹಾರವನ್ನೂ ಕೂಡ ಒದಗಿಸಿದ್ದಾರೆ. ಆದ್ದರಿಂದ ಈ ಚರ್ಚೆಗೆ ಇವತ್ತು ಅಷ್ಟೊಂದು ಮಹತ್ವ ಬರುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದು ಒಂದು ರೀತಿಯಲ್ಲಿ ಶವಸಂಸ್ಕಾರ ಆದಂತೆ. ನಿನ್ನೆಯ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿಯ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಒಳ್ಳೆಯ ಮಾತನ್ನು ಹೇಳಿದರು. ಅದು ಬಹಳ ಮಾರ್ಮಿಕವಾಗಿತ್ತು. ಅವರು

ಏನು ಹೇಳಿದರೆಂದರೆ, Now the battle field is outside this House. The battle is not in this house ಎಂದು. ನಾನು ಅವರ ಅಭಿಪ್ರಾಯವನ್ನು ಒಪ್ಪುತ್ತೇನೆ. ಈಗ ಈ ಬ್ಯಾಟಲ್ ಫೀಲ್ಡ್‌ನ್ನು ಈ ಹೌಸ್‌ನ್ನು ಬಿಟ್ಟು ಹೊರಗಡೆ ಮಾಡಬೇಕೆಂದು ಯೋಚನೆ ಮಾಡಿರುವವರು ಬಿ.ಜೆ.ಪಿ.ಯವರು. ಬಿ.ಜೆ.ಪಿ. ನಾಯಕರ ವಿರುದ್ಧವಾಗಿ ನಾನು ಯಾವತ್ತೂ ಕೂಡ ಲಘುವಾಗಿ ಮಾತನಾಡಿಲ್ಲ. ಇವತ್ತೂ ಕೂಡ ಹೇಳುತ್ತೇನೆ. ಅವರ ನಾಯಕರುಗಳಾದಂಥ ಅಟಲ್‌ಬಿಹಾರಿ ವಾಜಪೇಯಿಯವರಾಗಲಿ, ಅಡ್ವಾನಿಯವರಾಗಲಿ ಅಥವಾ ಬೇರೆ ನಾಯಕರಾಗಲಿ, ಅಥವಾ ಮಾನ್ಯ ಯಡಿಯೂರಪ್ಪನವರ ರಾಷ್ಟ್ರ ಪ್ರೇಮವನ್ನಾಗಲಿ ನಾವು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿಗೆ ಅವರಿಗೂ ಗೊತ್ತಿದೆ, ನಾವು ಯಾರೂ ಕೂಡ ಅವರನ್ನು ರಾಷ್ಟ್ರದ್ರೋಹಿಗಳೆಂದು ಕರೆಯುವುದಿಲ್ಲ ಎಂದು.

ಆದರೆ ನಿಜವಾದ ಪರಿಸ್ಥಿತಿ ಏನಿದೆ ಇದರಲ್ಲಿ? ಇವರ ಉದ್ದೇಶವಾದರೂ ಏನು? ಮಾನ್ಯ ಯಡಿಯೂರಪ್ಪನವರು ಚರಿತ್ರೆಯನ್ನು ಓದಿ ಕೊಂಡಿದ್ದಾರೆ. ಅವರು ಸುಮ್ಮನೆ ಹೇಳುತ್ತಾರೆ ನಾನು ಗ್ರಾಜುಯೇಟ್ ಅಲ್ಲ ಎಂದು. ಅವರು ಚರಿತ್ರೆಯನ್ನೂ ಓದಿದ್ದಾರೆ. ಅವರು ಓದದೇ ಇದ್ದರೂ ಅವರಿಗೆ ಓದಿ ಹೇಳತಕ್ಕವರು ಇದ್ದಾರೆ. ಬಹುಶಃ ಅವರು ಮರೆತಿದ್ದಾರೆ. ಧಾರವಾಡ ಜಿಲ್ಲೆ ಶಿಶುನಾಳ ಷರೀಫ ಹುಟ್ಟಿದ ಜಿಲ್ಲೆಯೆಂಬುದನ್ನು ಅವರು ಮರೆತಿದ್ದಾರೆ. ತಮಗೆ ಗೊತ್ತಿದೆ ಅಧ್ಯಕ್ಷರೇ, ತಾವು ಆ ನಾಡಿನಿಂದ ಬರತಕ್ಕ ಗಣ್ಯ ವ್ಯಕ್ತಿಗಳು. ಶಿಶುನಾಳ ಷರೀಫ ಹೇಳಿತಕ್ಕ ವಿಚಾರಗಳೇನು? ಅದೇನೂ ಬಹಳ ಶತಮಾನಗಳ ಹಿಂದೆ ಏನಲ್ಲ. ಶಿಶುನಾಳ ಷರೀಫ ಹುಬ್ಬಳ್ಳಿ ಪಕ್ಕದಲ್ಲಿ ಹುಟ್ಟಿದವನು. 150-200 ವರ್ಷದ ಹಿಂದೆ ಹುಟ್ಟಿದವನು. ಆ ಊರಿನಲ್ಲಿ ಇವತ್ತೂ ಸಹ ಶಿಶುನಾಳ ಷರೀಫನ ವಿಚಾರಗಳು ಏನು ಎಂಬುದು ಗೊತ್ತಿದೆ. ಮುಸಲ್ಮಾನರು ಈ ದೇಶ ನಮ್ಮದಲ್ಲ ಎಂದು ಹೇಳುತ್ತಾರೆ ಎಂಬ ಮೂಲಭೂತ ವಿಚಾರ ಏನಿದೆ ಅದು ತಪ್ಪು. ಅದನ್ನು ನಾವು ತೆಗೆದುಹಾಕಬೇಕಾಗುತ್ತದೆ. ನಾವು ಮುಂದೆ ಹೋಗಬೇಕಾಗುತ್ತದೆ. ನಾವು ನಮ್ಮ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಹೇಳಿದರೆ ಪಕ್ಕದಲ್ಲಿರತಕ್ಕ ಬಾಂಗ್ಲಾದೇಶ, ಆ ಕಡೆ ಇರತಕ್ಕ ಪಾಕಿಸ್ತಾನ, ಈ ಕಡೆ ಇರತಕ್ಕ ಶ್ರೀಲಂಕಾ ಇವರ ಜೊತೆಯಲ್ಲೆಲ್ಲಾ ತಬ್ಬಿಕೊಳ್ಳಬೇಕಾಗುತ್ತದೆ. ನಾವೆಲ್ಲಾ ಒಂದು ರಾಷ್ಟ್ರ ಎಂದು ಹೇಳಿಕೊಳ್ಳಬೇಕಾಗುತ್ತದೆ. ಶ್ರೀಮತಿ ಇಂದಿರಾಗಾಂಧಿಯವರು ಅವರು ಬದುಕಿರುವವರೆಗೂ 24 ವರ್ಷ ಅವರನ್ನು ವಿರೋಧ ಮಾಡಿದ್ದೆವು. ಆದರೆ ಶ್ರೀಮತಿ ಇಂದಿರಾಗಾಂಧಿಯವರ ಒಂದು ವಿಚಾರವನ್ನು ಅವರು ಸತ್ತಮೇಲೂ ಹೇಳಿದ್ದೇವೆ, ಬದುಕಿರುವಾಗಲೂ ನಾವು ಹೇಳಿದ್ದೇವೆ. ಏನೆಂದರೆ ಅವರ ದೃಷ್ಟಿಕೋನ. ಅಮೇರಿಕಾ ಶಕ್ತಿಗಳ ವಿರುದ್ಧ ಈ ಪ್ರಪಂಚದಲ್ಲಿ ಇಂಡಿಯಾ ದೇಶದವರು ರಷ್ಯಾ ಜೊತೆಯಲ್ಲಿ ಹೋಗಬೇಕು ಎಂದು ಹೇಳುವಂಥ ಒಂದು ದೃಷ್ಟಿಕೋನ ಏನಿದೆ ಅದನ್ನು ಎಲ್ಲರೂ ಮೆಚ್ಚಬೇಕಾಗುತ್ತದೆ. ಇವತ್ತು ರಷ್ಯಾ ಒಡೆದಿದೆ. ರಷ್ಯಾ ಒಡೆದಿದ್ದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನಾವು ಬಹಳ ಶಕ್ತಿಹೀನರಾಗಿದ್ದೇವೆ ಎಂಬುದನ್ನು ನಾವು ಒಪ್ಪಬೇಕಾಗಿದೆ. ಅದೇ ರೀತಿ ನಾವು ಬಾಂಗ್ಲಾ ದೇಶದ ಜೊತೆಯಲ್ಲಿ ಪಾಕಿಸ್ತಾನದ ಜೊತೆಯಲ್ಲಿ ಹೊಡೆದಾಟ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಯಡಿಯೂರಪ್ಪನವರಿಗೂ ಇದು ಬಹಳ ಚೆನ್ನಾಗಿ ಗೊತ್ತಿದೆ. ನಾನು ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಯಡಿಯೂರಪ್ಪನವರೆ ತಾವು ಬರಬೇಕು.

ನೋಡಬೇಕು. ನನ್ನ ಕ್ಷೇತ್ರ ಕನಕಪುರದಲ್ಲಿ ಹಾರೋಹಳ್ಳಿ ಎಂಬ ಊರಿದೆ. ಅಲ್ಲಿ ಮುಸಲ್ಮಾನರು ಬಹಳ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಸ್ವತಃ ಒಬ್ಬ ಮೌಲ್ವಿ ಪ್ರತಿ ವರ್ಷ ಆಗಸ್ಟ್ 15 ಮತ್ತು ಜನವರಿ 26ನೇ ತಾರೀಖು ಯಾರಿಗೂ ಹೇಳುವುದಿಲ್ಲ, ಕೇಳುವುದಿಲ್ಲ ಅವನೇ ಹೋಗಿ ಮಸೀದಿ ಮೇಲೆ ಒಂದು ಬಾವುಟವನ್ನು ಹಾಕಿಬಿಡುತ್ತಾನೆ. ಈ ತರಹದ್ದು ಲಕ್ಷಾಂತರ ಉದಾಹರಣೆಗಳಿವೆ. ನಾವು ಏತಕ್ಕೆ ಮುಸಲ್ಮಾನರನ್ನು

ಸಂಶಯ ದೃಷ್ಟಿಯಿಂದ ನೋಡಬೇಕೋ ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಬಹಳ ದುಃಖದಿಂದ ನಾನು ಈ ಮಾತನ್ನು ಹೇಳಬೇಕಾಗಿದೆ. ಇವರ ಒಂದೇ ಒಂದು ಉದ್ದೇಶ ಎಂದರೆ ಓಟು. ಓಟು ಬಿಟ್ಟು ಇನ್ನೇನೂ ಇಲ್ಲವೇ ಇಲ್ಲ. ರಾಮನ ದೇವಸ್ಥಾನ ಕಟ್ಟುವವರಾ ಇವರು? ಎಲ್ಲಿ ಕಟ್ಟಿದವರು ರಾಮನ ದೇವಸ್ಥಾನ? ರಾಮನ ದೇವಸ್ಥಾನ ಕಟ್ಟುವುದಿಲ್ಲ. ಆದರೆ ಆ ವಿಚಾರ ಏನಿದೆ ಅದು ಸಾಯುವುದಕ್ಕೆ ಇವರು ಬಿಡುವುದಿಲ್ಲ. ಇವರಿಗೆ ರಾಮಮಂದಿರ ಬೇಕಾಗಿಲ್ಲ. ಶಂಕರಾಚಾರ್ಯರು ಅದನ್ನ ಕಟ್ಟಬೇಕು ಎಂದು ಹೊರಟಾಗ, ಇವತ್ತು ಶಂಕರಾಚಾರ್ಯರ ವಿಚಾರದಲ್ಲಿ, ಧರ್ಮದಲ್ಲಿ ನಂಬಿಕೆ ಇರತಕ್ಕ ಜನರಿಗೆ ಶೃಂಗೇರಿ ಶಂಕರಾಚಾರ್ಯರ ಬಗ್ಗೆ ಬಹಳ ಅಭಿಮಾನ ಗೌರವ ಇದೆ. ಇವತ್ತು ದೆಹಲಿಯಲ್ಲಿ ವಿ.ಎಚ್.ಪಿ.ಯವರನ್ನು ಭಜರಂಗಬಲದವರನ್ನು ಮತ್ತೊಬ್ಬರನ್ನು ಎಲ್ಲ ಆಚಾರ್ಯರನ್ನೂ ಕರೆಸಿ ಕಟ್ಟುತ್ತೇವೆ ಎಂದರೆ ಅದಕ್ಕೆ ಇವರು ಅಡ್ಡಗಾಲು ಹಾಕಿದ್ದಾರೆ. ಇಲ್ಲ ನಾವೇ ಕಟ್ಟಬೇಕು ಎಂದು ಹೇಳಿದ್ದಾರೆ. ಏತಕ್ಕೆ ನೀವೇ ಕಟ್ಟಬೇಕು? ನಿಮಗೆ ಗುತ್ತಿಗೇನಾ ಅದು? ರಾಮಮಂದಿರ ಕಟ್ಟುವುದು ನಿಮ್ಮ ಗುತ್ತಿಗೆಯೇನ್ರಿ? ರಾಷ್ಟ್ರಪ್ರೇಮ ಎಂಬುದು ನಿಮ್ಮ ಗುತ್ತಿಗೇನಾ? [illegible] ಹಾಳಿಸುವುದು ನಿಮ್ಮ ಗುತ್ತಿಗೇನಾ? ಇದನ್ನು ಮಾಡಿದವರು. ಏತಕ್ಕೋಸ್ಕರ ಮಾಡಿದರು? ಎಲ್ಲಾ ಕಡೆಗಳಲ್ಲಿ ಮೆರವಣಿಗೆ ಮಾಡಿದ್ದಾರೆ. ಎಲ್ಲೆಲ್ಲಿ ಮೆರವಣಿಗೆ ಮಾಡಿದ್ದಾರೆ ಅಲ್ಲಿ ಎಲ್ಲಾ ಕಡೆಗಳಲ್ಲಿ ಕೂಡ ಪ್ರಚೋದನೆಯಾಗಿದೆ. ಹಿಂದೂಗಳು ಆಸ್ತಿಗಳನ್ನು ಕಳೆದುಕೊಂಡಿದ್ದಾರೆ. ಮುಸಲ್ಮಾನರು ಆಸ್ತಿಗಳನ್ನು ಕಳೆದುಕೊಂಡಿದ್ದಾರೆ. ದಂಗೆಗಳಾಗಿವೆ. ಆಸ್ತಿ ಹೋಗಿದೆ. ಯಾರು ರಕ್ಷಣೆ ಮಾಡುವವರು? ನಾನು ಯಾವುದೇ ಸರ್ಕಾರವನ್ನು ಯಾವುದೇ ಒಂದು ವ್ಯವಸ್ಥೆಯನ್ನು ಟೀಕೆ ಮಾಡಿದರೆ ಅರ್ಥವಿಲ್ಲ. ನಾವು ಆತ್ಮಾವಲೋಕನ ಮಾಡಿಕೊಳ್ಳೋಣ ನಾವು ಎಷ್ಟು ಜವಾಬ್ದಾರಿಯಿಂದ ಇದ್ದೇವೆ ಎಂದು. ಇವತ್ತು 4 ಜನ ಮೌಲ್ವಿಗಳು ತಪ್ಪು ಮಾಡಿರಬಹುದು ಅಥವಾ ಯಾರೋ ನಾಲ್ಕು ಜನ ಮುಸಲ್ಮಾನ್ ಮುಖಂಡರುಗಳು ತಪ್ಪು ಮಾಡಿರಬಹುದು. ಇವತ್ತು ನನ್ನ ಹೃದಯ ಕಲಕುತ್ತದೆ ಮಾನ್ಯ ಅಧ್ಯಕ್ಷರೆ, ತಮಗೂ ಇದೇ ಅನುಭವವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇವತ್ತು ಅನೇಕ ಹಳ್ಳಿಗಳಲ್ಲಿ ಹಿಂದೂ ಮುಸ್ಲಿಮರ ದಂಗೆಯಾಗುತ್ತದೆ, ಏನೋ ಒಂದು ಸಂಘರ್ಷವಾಗುತ್ತದೆ ಎಂದು ಹೇಳಿದಾಕ್ಷಣ ಮುಸಲ್ಮಾನರು ಏನು ಮಾಡುತ್ತಾರೆಂದರೆ ಅವರ ಹೆಂಡತಿ ಮಕ್ಕಳನ್ನು ಪಟ್ಟಣ ಪ್ರದೇಶಕ್ಕೆ ಕಳುಹಿಸುತ್ತಾರೆ. ಏತಕ್ಕೋಸ್ಕರ ಕಳುಹಿಸುತ್ತಾರೆ? ರಕ್ಷಣೆಗೋಸ್ಕರ ಕಳುಹಿಸುತ್ತಾರೆ. ಈ ದೇಶದಲ್ಲಿ ಮುಸಲ್ಮಾನರು ಕಾಂಗ್ರೆಸ್ಸಿಗೆ ಓಟನ್ನು ಹಾಕಬೇಕಾದರೆ ಮುಖ್ಯವಾದ ಕಾರಣ ಏನೆಂದರೆ ಅವರಿಗೆ ಒಂದು ಮೂಢನಂಬಿಕೆ ಇದೆ ನಮಗೆ ಕಾಂಗ್ರೆಸ್ಸಿನವರು ರಕ್ಷಣೆ ಕೊಡುತ್ತಾರೆ ಎಂದು. ನೀವು ಕಾಂಗ್ರೆಸ್ಸಿನವರನ್ನು ಸೋಲಿಸಬೇಕು ಎಂದು ಹೇಳುತ್ತೀರಿ. ಕಾಂಗ್ರೆಸ್‌ನವರನ್ನು ಸೋಲಿಸುವುದಕ್ಕೆ ನಿಮಗೆ ಎಲ್ಲಿ ಆಸಕ್ತಿ ಇದೆ? ಮುಸಲ್ಮಾನರ ಓಟೆಲ್ಲಾ ಅವರಿಗೆ ಹೋಗುವ ಹಾಗೆ ಮಾಡುತ್ತಿದ್ದೀರಿ ನೀವು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಿಂಧ್ಯಾರವರು ಒಂದು ನಿಮಿಷ ಈಲ್ಡ್ ಆಗಬೇಕು. ಮಾನ್ಯ ಸದಸ್ಯರು ಏನು ಮಾತನಾಡುವುದಕ್ಕೂ ಸ್ವಾತಂತ್ರ್ಯವಿದೆ. ಮಧ್ಯಪ್ರದೇಶ ಉತ್ತರಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಹಿಂದೂ ಮುಸ್ಲೀಮರ ಒಂದು ಸಣ್ಣ ಗಲಭೆ ನಡೆದಿದೆಯೇ ಅಥವಾ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಇದ್ದ ಕಡೆ ಗಲಭೆಗಳು ನಡೆದಿದೆಯೇ ಎನ್ನುವುದು ನಿಮಗೆ ಗೊತ್ತಿದೆ. ಎರಡನೆಯದು ಇವತ್ತು ಸಾವಿರಾರು ಜನ ಮುಸ್ಲಿಂ ಮುಖಂಡರು ನಮ್ಮ ಜೊತೆ ಬರುತ್ತಿದ್ದಾರೆ. ಇವತ್ತು ಅವರಿಗೆ ಅರ್ಥವಾಗಿದೆ. ಓಟಿನ ಬ್ಯಾಂಕ್ ರಾಜಕಾರಣ ಮಾಡಿಕೊಂಡು ಕಾಂಗ್ರೆಸ್‌ನವರು ಆ ಕೆಲಸ ಮಾಡುತ್ತಿದ್ದಾರೆ

ಎನ್ನುವ ಸತ್ಯಸಂಗತಿಯನ್ನು ಅರ್ಥಮಾಡಿಕೊಂಡು ಬಿಜೆಪಿಗೆ ಮುಸ್ಲೀಮರು ಬರುತ್ತಿದ್ದಾರೆ. ಸಾವಿರಾರು ಜನ ನಮ್ಮ ಕಡೆಗೆ ಬರುತ್ತಿದ್ದಾರೆಂದು ಉದ್ದೇಶಪೂರ್ವಕವಾಗಿ ಇವರು ಮುಸ್ಲಿಂ ವಿರೋಧಿಗಳು ಎನ್ನುವ ವಿಷ ಬೀಜವನ್ನು ಬಿತ್ತುವ ಕೆಲಸ ಸತತವಾಗಿ ನಡೆದುಕೊಂಡು ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಏನು ಹೇಳುತ್ತಿದ್ದೇನೆ, ನೀವು ದಯವಿಟ್ಟು ಮುಸ್ಲಿಂ ವಿರೋಧಿ ಧೋರಣೆಯನ್ನು ಬಿಟ್ಟು ಬಿಡಿ. ನಿಮ್ಮ ಜೊತೆಗೆ ಮುಸ್ಲಿಮರು ಬರುತ್ತಾರೆ. ನೀವು ಸರ್ಕಾರ ರಚನೆ ಮಾಡಬಹುದು, ನೀವು ಮುಖ್ಯಮಂತ್ರಿಗಳಾಗಬಹುದು, ಆಗ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ನೀವು ಅದನ್ನು ಬಿಡುವುದಕ್ಕೆ ತಯಾರಾಗಿಲ್ಲವೆಂದು ನಾನು ಹೇಳುತ್ತಿರುವುದು. ಅವರು ಎರಡು ವಿಚಾರ ಹೇಳಿದರು, ಮಧ್ಯಪ್ರದೇಶದಲ್ಲಿ ನಮ್ಮ ಸರ್ಕಾರವಿತ್ತು, ರಾಜಸ್ಥಾನದಲ್ಲಿ ಮತ್ತು ಹಿಮಾಚಲ ಪ್ರದೇಶದಲ್ಲಿತ್ತು ಅಲ್ಲಿ ಹಿಂದೂ ಮುಸ್ಲೀಂರ ಗಲಭೆಗಳಾಗಲಿಲ್ಲವೆಂದು ಹೇಳಿದರು. ಏಕೆ ಗಲಭೆಗಳು ಆಗಲಿಲ್ಲ, ಏಕೆ ಗಲಭೆಗಳು ಆಗಲಿಲ್ಲವೆಂದು ಹೇಳಿದರೆ ಉಸಿರು ಬಿಡುವುದಕ್ಕೂ ನೀವು ಅವರಿಗೆ ಅವಕಾಶ ಕೊಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಂಕಿ ಹಚ್ಚುವುದು ಅಂದರೆ ಹೀಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಏನು ಬೆಂಕಿ ಹಚ್ಚಿದ್ದೇನೆ? ನೀವು ಮಾಡುತ್ತೀರಿ ಅನ್ನುವುದು ನನಗೆ ಗೊತ್ತಿದೆ. ಆ ವಿಚಾರ ನಿಮ್ಮ ಹೃದಯಕ್ಕೆ ತಟ್ಟುವುದಿಲ್ಲ. ಮುಸ್ಲಿಂ ಹೆಣ್ಣುಮಕ್ಕಳು ಡಬ್ಬಗಳನ್ನು ಇಟ್ಟುಕೊಂಡು ರುಗಾಂಡಲ್ಲಿ ಇವತ್ತು ಹೋರಾಟ ಮಾಡುತ್ತಿದ್ದಾರೆ. ಇವತ್ತು ಪಟ್ಟಣಗಳಿಗೆ ಮುಸ್ಲಿಂ ಮಹಿಳೆಯರು ರಕ್ಷಣೆಗೋಸ್ಕರ ಬರುತ್ತಾರೆ. ಅವರು ಈ ದೇಶದವರಲ್ಲವಾ? ಮುಸ್ಲಿಂರಲ್ಲಿರತಕ್ಕ ಬಡತನದ ಬಗ್ಗೆ ನಾವು ಯಾರು ಮಾತನಾಡುತ್ತೇವೆ? ಯಾವುದೇ ಸರ್ಕಾರವಿರಲಿ, ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರ ಬಗ್ಗೆ ನೀವೇನು ಮಾತನಾಡುತ್ತೀರಿ? ಮುಸ್ಲೀಂ ಬಡವರ ಬಗ್ಗೆ ನೀವು ಮಾತನಾಡುವುದಕ್ಕೆ ಹೋಗುವುದಿಲ್ಲ. ಮುಸಲ್ಮಾನರ ನಿರುದ್ಯೋಗದ ಬಗ್ಗೆ ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ. ಮುಸಲ್ಮಾನರ ಬಾವುಟ ಹಾಕಿಸುವುದಿಲ್ಲವೆಂದು ಹೇಳುತ್ತೀರಿ. ಅವರ ವಿಶ್ವಾಸ ಗಳಿಸುವುದಕ್ಕೆ ನೀವು ಪ್ರಯತ್ನ ಮಾಡಿ. ಸಾವಿರಾರು ಜನ ಮುಸಲ್ಮಾನರು ಇವರ ಪಾರ್ಟಿಗೆ ಸೇರುತ್ತಿದ್ದಾರಂತೆ. ಎಲ್ಲಿ ಯಾವ ಸಾವಿರಾರು ಜನ ಯಾವ ಪಾರ್ಟಿಗೆ ಸೇರಿಕೊಂಡಿದ್ದಾರೋ ನನಗೂ ಗೊತ್ತಿಲ್ಲ. ಇದರ ಬಗ್ಗೆ ನನಗೆ ಸಂಶಯ ಬಂದಿದೆ. ಮುಸ್ಲಿಂ ಡ್ರೆಸ್ ಹಾಕಿಕೊಂಡು ಮುಸಲ್ಮಾನರು ಸೇರಿಸಿಕೊಂಡಿದ್ದಾರೆಂದು ಹೇಳುತ್ತಿರೋ ಏನೋ ಗೊತ್ತಿಲ್ಲ. ನಾನು ಚುನಾವಣೆಗೆ ನಿಲ್ಲುವವರೆಗೆ ನಾನು ಮರಾಠಿ ಎಂದು ನನಗೆ ಅನಿಸಿರಲಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಸಿಂಧ್ಯಾರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಮುಸ್ಲಿಂರು ಬಹಳಷ್ಟು ಜನ ಬಿಜೆಪಿಗೆ ಸೇರುತ್ತಿದ್ದಾರೆಂದರೆ ಅವರ ನಾಯಕರಾದಂತಹ ಸಿಕಂದರ್ ಭಕ್ತ್‌ರವರು ಇದ್ದಾರಲ್ಲ ಅವರ ಕಡೆಯವರು ಇವರ ಪಾರ್ಟಿಗೆ ಸೇರಿರಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪಾಪ ಸಿಕಂದರ್ ಭಕ್ತ್‌ರವರು ರಾಜ್ಯಸಭೆಯ ಸದಸ್ಯರಾಗಬೇಕು ಅವರನ್ನು ನಾನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ ಅವರು ಒಬ್ಬ ದೊಡ್ಡ ರಾಷ್ಟ್ರಪ್ರೇಮಿಗಳು, ಅವರನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅಟಲಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾನಿಯವರಾಗಲೀ ಎಲ್ಲಾ ಒಂದೇ ಇವರಂತೂ ಸಾಯುವುದಿಲ್ಲ, ಸಾಯುವವರು ಕಂಡವರ ಮಕ್ಕಳು. ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವ ಲೆಕ್ಕಚಾರ. ಅದಲ್ಲ ಪ್ರಶ್ನೆ, ಇವರಿಗೆ ಓಟು ಬೇಕು ಹಿಂದೂ ಮುಸ್ಲಿಂರಲ್ಲಿ ಗಲಭೆ ಎಬ್ಬಿಸಬೇಕು. ನಾನು 17ನೇ ತಾರೀಖು ಹುಬ್ಬಳ್ಳಿಯಲ್ಲಿದ್ದೆ.

ಪೋಲೀಸ್‌ನವರು ಏನು ಮಾಡುತ್ತಾರೆ? 17ರ ಸಂಜೆ ಈದ್ಗಾ ಮೈದಾನ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಅವರಿಗೆ ಊಟವಿಲ್ಲ ಅವರು ಬಂದೂಕು ಹಿಡಿದುಕೊಂಡು ನಿಂತಿದ್ದಾರೆ. ಜನಗಳಿಗೆ ಇದೇನು ಸಂಬಂಧವಿಲ್ಲ. 17, 18 ಮತ್ತು 19ನೇ ತಾರೀಖು ಅಲ್ಲೆ ಇದ್ದೆ, ಯಾರಿಗೂ ಏನೂ ಬೇಕಾಗಿಲ್ಲ. ಇವರಿಗೆ ಬೇಕಾಗಿದೆ. ಅಲ್ಲಿಗೆ ಹೋಗಿರತಕ್ಕ ಜನ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿದ್ದಾರೆ. ಏಕೆ ಬರಬೇಕು? ಉತ್ತರ ಕನ್ನಡ ಜಿಲ್ಲೆಯಿಂದ ಬರಬೇಕು, ಮೈಸೂರಿನಿಂದ ಬರಬೇಕು, ಕಾಸರಗೋಡಿನಿಂದ ಬರಬೇಕು, ದೆಹಲಿಯಿಂದ ಇಂಪೋರ್ಟ್ ಮಾಡಿಕೊಂಡಿದ್ದಾರೆ. ಏಕೆ ನಿಮಗೆ ತಾಕತ್ತು ಇಲ್ಲವೆ? ನೀವು ಇದನ್ನೆಲ್ಲ ಏಕೆ ಮಾಡುವುದಕ್ಕೆ ಹೋಗುತ್ತೀರಿ? ನಾನು ಇವರಿಗೆ ಬುದ್ಧಿವಾದ ಹೇಳುತ್ತೇನೆ. ಇದನ್ನು ಏಕೆ ಮಾಡುತ್ತೀರಿ? ನೀವು ಒಂದು ಆರ್ಥಿಕ ನೀತಿಯನ್ನು ಇಟ್ಟುಕೊಳ್ಳಿ. ಬಡವರಿಗೋಸ್ಕರ ಏನು ಮಾಡುತ್ತೇವೆಂದು ಹೇಳಿ, ಮುಸಲ್ಮಾನರಿಗೆ ಏನು ಮಾಡುತ್ತೀರಿ ನಿಮ್ಮ ಕಾರ್ಯಕ್ರಮವೇನು? ಮುಸ್ಲಿಂರು ಹೇಳುತ್ತಾರೆ, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದು, ಬಡತನವನ್ನು ಬಗೆಹರಿಸುವುದು congress has faith. But still they vote for congress why they vote? ಏಕೆ ಆ ದೃಷ್ಟಿಕೋನದಲ್ಲಿ ನೀವು ಯೋಚನೆ ಮಾಡುವುದಿಲ್ಲ. ಇದರ ಬಗ್ಗೆ ನೀವು ಯೋಚನೆ ಮಾಡಬೇಕು.

ನಾನು ಹೇಳುತ್ತೇನೆ, ನಿಮ್ಮ ಆತ್ಮವಂಚನೆ ಮಾಡಿಕೊಳ್ಳುತ್ತಾ ಇದ್ದೀರಿ. ಇತ್ತೀಚೆಗೆ ಸ್ವಲ್ಪ ಪ್ರೌಢಿಮೆಯನ್ನು ತೋರಿಸುತ್ತಾ ಇದ್ದೀರಿ ಅದು ನಮಗೆ ಬಹಳ ಸಂತೋಷದ ವಿಚಾರ. ನೀವು ಇನ್ನು ಸ್ವಲ್ಪ ಪ್ರೌಢಿಮೆಯನ್ನು ತೋರಿಸಿ. ಹಿಪೋಕ್ರಸಿ ಇರಬಾರದು. ಒಪ್ಪಿಕೊಳ್ಳಬೇಕು. ನಾನು ಮಾಡಿರುವುದು ತಪ್ಪೆಂದು ನಾನು ಹೇಳುತ್ತೇನೆ. ತಪ್ಪಾಗುತ್ತದೆ. ಅನುಭವದಿಂದ ಆಗುತ್ತದೆ ಏನು ಮಾಡುವುದಕ್ಕಾಗುತ್ತದೆ. ನೀವು ಸೆಲ್ಯೂಟನ್ನು ಬೆಳಿಗ್ಗೆ ಹೊತ್ತು ಒಂದು ತರಹ ಹೊಡೆಯುತ್ತೀರಿ ಸಾಯಂಕಾಲದ ಹೊತ್ತು ಒಂದು ತರಹ ಹೊಡೆಯುತ್ತೀರಿ ಏಕೆ? ನಾನು ನಿಮಗೆ ಕೇಳುತ್ತಿದ್ದೇನೆ. ನಿಮ್ಮ ತಂದೆ ತಾಯಿ ಯಾರೆಂದು ನಾನು ಆಗಲೇ ಹೇಳಿದ್ದೇನೆ. ನಿಮ್ಮ ಬಿಜೆಪಿಯ ತಂದೆ ವಿಹೆಚ್‌ಪಿ, ತಾಯಿ ಆರ್‌ಎಸ್‌ಎಸ್. ನಿಮ್ಮ ತಾಯಿ ಮಾತನಾಡುವ ಭಾಷೆ ಯಾವುದು. 'ನಮಸ್ತೆ ಸದಾ ವತ್ಸಲಂ' ನಿಮ್ಮ ತಂದೆ ಹಾಕಿಕೊಳ್ಳುವ ಬಟ್ಟೆ ಯಾವುದು ಕೇಸರಿ ಬಟ್ಟೆ ಅದನ್ನು ನೀವು ಮುಂಚೆ ತೆಗೆಯಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವ ಗರಡಿಯಲ್ಲಿ ಬೆಳೆದು ಇವತ್ತು ನೀವು ಇಲ್ಲಿ ನಿಲ್ಲುವುದಕ್ಕೆ ಕಾರಣಕರ್ತರಾದಿರೋ ಅದರ ಬಗ್ಗೆ ಇಷ್ಟು ಹಗುರವಾಗಿ ಮಾತನಾಡುವುದು ಸರಿಯೇ? ನಮ್ಮ ಅಪ್ಪ ಅಮ್ಮ ಎಂದು ಒಪ್ಪಿಕೊಂಡು ಬೆಳೆದು ಇಲ್ಲಿ ನಿಲ್ಲುವುದಕ್ಕೆ ಕಾರಣಕರ್ತರಾದವರ ಬಗ್ಗೆ ಇಷ್ಟು ಹಗುರವಾಗಿ ಮಾತನಾಡುವುದು ಕೆಳಮಟ್ಟದ ವರ್ತನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಹೇಳುತ್ತೇನೆ ಅನುಭವದಿಂದ ಪಾಠ ಕಲಿತಿದ್ದೇನೆಂದು, ಇವರಿಗೆ ಗೊತ್ತಿಲ್ಲ, ಒಂದು ದಿನ ಕರ್ನಾಟಕದ ಜನತೆಗೆ ಗೊತ್ತಾಗಬೇಕಾಗುತ್ತದೆ. ತಾವು 2ನಿಮಿಷ ದಯವಿಟ್ಟು ಕೇಳಬೇಕು. ಇದು ಅಪ್ರಕೃತವಾಗುತ್ತದೆ. ಆದರೂ ದಯವಿಟ್ಟು ಕೇಳಬೇಕು. ಮಾನ್ಯ ಯಡಿಯೂರಪ್ಪನವರು ನನ್ನ ಮೂಲವನ್ನು ಹೇಳುವುದಕ್ಕೆ ಹೊರಟಿದ್ದಾರೆ. ನನ್ನ ಬೇರು ಎಲ್ಲಿ ಹುಟ್ಟಿತೆಂದು ನಾವೇ ಹುಟ್ಟಿಸಿದೆವು ಎಂದು ಹೇಳುತ್ತಿದ್ದಾರೆ. ಅವರು ಏನು ಅಂದುಕೊಂಡಿದ್ದಾರೆಂದರೆ, ಸಿಂಧ್ಯಾರವರು ಆರ್‌ಎಸ್‌ಎಸ್‌ನಲ್ಲಿದ್ದವರು, ಸಿಂಧ್ಯಾರವರು ಎಂಎಲ್‌ಎ ಆಗುವುದಕ್ಕೆ ಆರ್‌ಎಸ್‌ಎಸ್ ಕಾರಣ ನಾನೊಬ್ಬ ಆರ್‌ಎಸ್‌ಎಸ್‌ನವನು ಇವರು ಬಿಜೆಪಿಯಲ್ಲಿದ್ದರು ಮತ್ತೆ ಮುಂದೆ ಬೆಳೆಯಬಾರದು ಎನ್ನುವ ದೃಷ್ಟಿಯಿಂದ ಇದನ್ನೆಲ್ಲ ಹೇಳುತ್ತಿದ್ದಾರೆ. ಬಿಜೆಪಿಗೆ ಹೋದರೆ ದೊಡ್ಡ ಬಾವಿಗೆ ಬಿದ್ದ ಹಾಗೆಂದು ನಾನು ಹೇಳುತ್ತೇನೆ. 1969ರಲ್ಲಿ ನನ್ನ ವಿದ್ಯಾರ್ಥಿ

ಜೀವನದಲ್ಲಿ ಕಾಂಗ್ರೆಸ್ ಪ್ರವೇಶ ಮಾಡಿ ನನ್ನ ರಾಜಕೀಯ ಜೀವನ ಪ್ರಾರಂಭ ಮಾಡಿದ್ದೇನೆ. ಇವತ್ತು ಗುಂಡೂರಾಯರು ಇಲ್ಲ, ಗುಂಡೂರಾಯರು ಸತ್ತಾಗ ಅತ್ತಿರಬೇಕಾದರೆ ಇದೇ ಕಾರಣ. ಕಾರಣ ಅದನ್ನೆಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ಕಾಂಗ್ರೆಸ್ ಇಬ್ಭಾಗವಾಯಿತು. ನಾನು ಮತ್ತು ಜೀವರಾಜ ಆಳ್ವರವರು ಬೇರೆ ಕಡೆ ಹೋದೆವು ಹೀಗಾಯಿತು. ನಮಗೆ ನೀವು ದೂರದಿಂದ ನೋಡಿದಾಗ, ವಿದ್ಯಾರ್ಥಿ ದಿಸೆಯಲ್ಲಿ ಸ್ವಲ್ಪ ಶಿಸ್ತು, ರಾಷ್ಟ್ರಪ್ರೇಮ ಇದೆಯೆಂದು ಬಂದು ನೋಡಿದಾಗ, ಅಪ್ಪಾ ಸಾಕು ಇವರು ಕೊಡುವ ಕಷ್ಟ. ಎರಡು ವರ್ಷ ನನಗೆ ಒಂದು ತರಹ ದೊಡ್ಡ ಜೈಲು. ಎಮರ್ಜೆನ್ಸಿಯಲ್ಲಿ 1974ರಲ್ಲಿ ನಾನು ಜೈಲಿಗೆ ಹೋದೆ. ನಾನು ಎರಡು ವರ್ಷದಲ್ಲಿಯೇ ಇವರನ್ನು ಬಿಟ್ಟಿದ್ದೇನೆ. 1974ರಲ್ಲಿ ಜೈಲಿಗೆ ಹೋದ ನಂತರ ನಮಗೆ ಗೊತ್ತಾಯಿತು ಇವರು ಎಷ್ಟೊಂದು ಪ್ಯಾಸಿಸ್ಟರು ಎಂದು ನಿಮ್ಮ ವಿಚಾರ ಸರಿಯಿಲ್ಲ. ಮೂಲಭೂತವಾಗಿ ಹೇಳುತ್ತಿದ್ದೇನೆ, ನಾನು ವೈಯಕ್ತಿಕವಾಗಿ ಮಾನ್ಯ ಯಡಿಯೂರಪ್ಪನವರು ಹೀಗೆ ಮಾಡುತ್ತಾರೆಂದು ಹೇಳುವುದಿಲ್ಲ. ಮತ್ತೊಬ್ಬರು ಹೀಗೆ ಮಾಡುತ್ತಾರೆಂದರೆ ನಾನು ಹೇಳುವುದಿಲ್ಲ. ಪ್ರೊ: ನಂಜುಂಡಸ್ವಾಮಿಯವರಿಗೆ ಗೊತ್ತಿದೆ. ವೈಚಾರಿಕವಾಗಿ ಭಿನ್ನ ಇರತಕ್ಕದ್ದೆ ವಿನಹ ವೈಯಕ್ತಿಕವಾಗಿ ಅಲ್ಲ. ವೈಚಾರಿಕತೆಯನ್ನು ನೀವು ಬದಲಾವಣೆ ಮಾಡಿಕೊಳ್ಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಅವರು ಸ್ವಲ್ಪ ಹೊತ್ತಿನ ಹಿಂದೆ ಶಂಕರಾಚಾರ್ಯರ ಹೆಸರು ಹೇಳುತ್ತಿದ್ದರು. ಇನ್ನು ಸ್ವಲ್ಪ ದಿವಸಗಳಲ್ಲಿ ಶಂಕರಾಚಾರ್ಯರಿಗೂ ಈಶ್ವರಪ್ಪನವರಿಗೂ ಏನಾದರೂ ಸಂಬಂಧವಿದೆಯೇ ಎಂದು ಗೊತ್ತಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಅವರು ಹೇಳುವ ಮಾತನ್ನು ಒಪ್ಪಿಕೊಳ್ಳುತ್ತೇನೆ. ಏಕೆ ಇಷ್ಟೆಲ್ಲ ಹೇಳುತ್ತಿದ್ದೇನೆಂದರೆ, ಯಡಿಯೂರಪ್ಪನವರು ಕಳೆದ ನಾಲ್ಕು ವರ್ಷಗಳಿಂದ ರೈತರ ಸಾಲದ ಬಗ್ಗೆ ಹೋರಾಟ ಮಾಡಿ ರೈತರ ಸಾಲವನ್ನು ಮನ್ನಾ ಮಾಡಿ ಮಾಡಿಯೆಂದು ಹೇಳಿದರು. ಯಡಿಯೂರಪ್ಪನವರು ರೈತರ ಮುಖಂಡರು ಎಂದು ಹೇಳುತ್ತಿದ್ದಾರೆ ಪಾಪ ಗೊತ್ತಿಲ್ಲದ ಜನ. ಅದಕ್ಕೆ ನಾವು ಹೇಳುತ್ತಿದ್ದೇನೆ ಅವರ ಪಕ್ಷದ ಸರ್ಕಾರ ಮಧ್ಯಪ್ರದೇಶ, ಉತ್ತರ ಪ್ರದೇಶ, ಹಿಮಾಚಲಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಇದ್ದಾಗ ಅವರು ಏನೂ ಮಾಡಲಿಲ್ಲ ಅವರನ್ನು ನಂಬಬೇಡಿಯೆಂದು ಹೇಳುತ್ತಿದ್ದೇವೆ. ಆದರೂ ಇವರು ಹೋರಾಟ ಮಾಡಿದ್ದಾರೆ. ರೈತರ ಪರವಾಗಿ ಏನೋ ಸ್ವಲ್ಪ ಮಾಡಿದ್ದಾರೆ. ಅಸೆಂಬ್ಲಿಯಲ್ಲಿ ನಾಲ್ಕು ಜನ ಇದ್ದುಕೊಂಡು ಗಲಾಟೆ ಮಾಡಿದ್ದಾರೆ. ನೀವು ಹೋಗತಕ್ಕ ವೈಚಾರಿಕವಾದ ದಾರಿ ಏನಿದೆ ಅದನ್ನು ಬದಲಾವಣೆ ಮಾಡಿಕೊಳ್ಳಿ. ಈ ರಾಷ್ಟ್ರದಲ್ಲಿ ಮುಸಲ್ಮಾನರು ಕ್ರಿಶ್ಚಿಯನ್ನರು, ಸಿಕ್ಕರು, ಜೈನರು, ಹಿಂದೂಗಳು ಪ್ರತಿಯೊಬ್ಬರೂ ಸಮಾನವಾಗಿ ಬಾಳಬೇಕಾದ ಹಕ್ಕು ಇದೆಯೆಂದು ನೀವು ಒಪ್ಪಿಕೊಳ್ಳಿ. ಈ ದೇಶದಲ್ಲಿರುವ ನಿರುದ್ಯೋಗ ಸಮಸ್ಯೆ ಆರ್ಥಿಕ ಸಮಸ್ಯೆ ಬಡತನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾವುನೀವು ಸೇರಿಕೊಂಡು ಮಾಡೋಣ. ಅದು ನಿಮ್ಮಲ್ಲಿ ಮೂಲಭೂತವಾಗಿ ಬದಲಾವಣೆಯಾಗಬೇಕು. ಹುಬ್ಬಳ್ಳಿಯಲ್ಲಿ ಗಲಾಟೆಯಾಗುತ್ತದೆ. ಮುಧೋಳದಲ್ಲಿ ಬೆಳಿಗ್ಗೆ 11 ಗಂಟೆಗೆ ಸಾರ್ವಜನಿಕ ಸಭೆಯನ್ನು ಮುಗಿಸಿಕೊಂಡು ಬರುತ್ತೇವೆ. ಅಲ್ಲಿ ಇವರ ಕಡೆಯವರು ನಾಲ್ಕು ಜನ ಹೋಗಿ ಗಲಾಟೆ ಮಾಡಿದರು. ಅಲ್ಲಿ ಜನತಾದಳದವರಿಗೆ ಸಭೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ,

6.25 ಪಿ.ಎಂ.

ನಮಗೂ ಕೊಡಿ ನಾವು ನಮ್ಮ ಬಾವುಟ ಹಾರಿಸುತ್ತೇವೆ ಎಂದರು. ಆದರೆ ಇವರು ಹಾರಿಸುವ ಬಾವುಟ ಯಾವುದು? ಮುಸಲ್ಮಾನರು ವಿರೋಧದ ಬಾವುಟ. ರಾಷ್ಟ್ರಧ್ವಜ ಅಲ್ಲ, ಅಲ್ಲಿ ಹಾಕುವುದಕ್ಕೆ ಇವರು ಹೋದದ್ದು? ಮುಸಲ್ಮಾನರ ವಿರೋಧದ ಸಂಕೇತವಾಗಿ ಅಲ್ಲಿ ಬಾವುಟ ಹಾರಿಸಬೇಕು, ಅವರ ಮನಸ್ಸನ್ನು ನೋಯಿಸಬೇಕು.

ಹಿಂದುಗಳಿಗೆ ಪ್ರಚೋದನೆಯಾಗಬೇಕು, ಮತ್ತು ಇವರು ಗೆಲ್ಲಬೇಕು. ಭದ್ರಾವತಿಯಲ್ಲೂ ಅದನ್ನೇ ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಇವತ್ತು ಐದು-ಆರು ಜನವೋ ಸತ್ತಿರಬೇಕಾದರೆ ಗುಂಡು ಹೊಡೆದವರು ಪೋಲೀಸರಾದರೆ ಹೊಡೆಸಿದವರು ನೀವು. ಅದರಲ್ಲೇನೂ ಅನುಮಾನ ಇಲ್ಲ. ಮಾನ್ಯ ಈಶ್ವರಪ್ಪನವರು ಸತ್ತ ಮೇಲೆ ಕಾಂಪನ್‌ಸೇಷನ್ ಕೊಡುವುದಕ್ಕೆ ಹೋಗಿದ್ದರಂತೆ. ನಿಮ್ಮ ಯಾವ ಕಾಂಪನ್‌ಸೇಷನ್ ತೆಗೆದುಕೊಂಡು ಏನು ಮಾಡುತ್ತಾರೆ ಅವರು, ಪ್ರಾಣ ಹೋದಮೇಲೆ. ಇವತ್ತು ನೀವು ಜೀವಗಳ ಜೊತೆಯಲ್ಲಿ ಚೆಂಡಾಟ ಆಡುತ್ತಿದ್ದೀರಿ. You must stop this. Ideologically you must chage. That is my earnest appeal to you.

1992ನೇ ಇಸವಿಯಿಂದಲೂ ಅವರು ಈ ಆಟವನ್ನು ಆಡುತ್ತಲೇ ಇದ್ದಾರೆ. 1992ರಿಂದ ಇವರು ಈ ಓಟಿನ ಆಟ, ಓಟಿನ ಭೇಟೆಯನ್ನು ಪ್ರಾರಂಭ ಮಾಡಿದಮೇಲೆ ನೀವು ಅಲ್ಲಿ ಸ್ಥಳೀಯವಾಗಿ ಎಲ್ಲಾ ಪಕ್ಷದವರನ್ನು, ಮುಸಲ್ಮಾನರನ್ನು, ಹಿಂದೂಗಳನ್ನು, ಕ್ರಿಶ್ಚಿಯನ್ನರನ್ನು, ಬಿಜೆಪಿ, ಜನತಾದಳ ಕಾಂಗ್ರೆಸ್ಸಿನ ಮುಖಂಡತ್ವದಲ್ಲೇ ನಿಮ್ಮಲ್ಲಿಯೇ ಮಂತ್ರಿಗಳಿದ್ದಾರೆ ಶ್ರೀ ಹಿಂಡಸಗೇರಿಯವವು secular leader. ಅವರನ್ನು ಬರೀ ಮುಸಲ್ಮಾನರ ಲೀಡರ್ ಎಂದು ಹುಬ್ಬಳ್ಳಿಯಲ್ಲಿ ಯಾರೂ ಹೇಳುವುದಿಲ್ಲ. ಅವರನ್ನೆಲ್ಲ ಕರೆಯಿಸಿ ನೀವು ಒಂದು ಸಭೆಯನ್ನು ಮಾಡಿ ಇದನ್ನು ಬಗೆಹರಿಸುವುದಕ್ಕೆ ಏಕೆ ಆಗಲಿಲ್ಲ ಎನ್ನುವಂಥಾದ್ದೂ ನಮಗೆ ಇನ್ನೂ ಅರ್ಥವಾಗದೇ ಇರತಕ್ಕಂಥ ವಿಚಾರ. ಮತ್ತೆ ನೀವು ಏನು ಭಾಷಣ ಮಾಡುತ್ತಿದ್ದೀರಿ, ಮತ್ತು ನಿಮ್ಮ ಭಾಷಣದಲ್ಲಿ ನಮಗೇನು ಶಂಕೆ ಬರುತ್ತದೆ ಎಂದರೆ we are going to protect the interest of minorities. ಅಂದರೆ ಅದರ ಅರ್ಥ ಏನು? ನಿಮಗೆ ಮುಸಲ್ಮಾನರ ಓಟು ಬೇಕೇ? ಇದಕ್ಕೇ ನಾವು ಹೇಳುವುದು Two faces of the same coin - ಎಂದು. ನೀವು ಇದನ್ನು ಉಪಯೋಗಿಸಿಕೊಳ್ಳುತ್ತೀರಿ. ಅವರು ಅದನ್ನು ಉಪಯೋಗಿಸಿಕೊಳ್ಳುತ್ತಾರೆ. ಜನ ಸಾಯುತ್ತಾರೆ, ಆಸ್ತಿ ಲೂಟಿಯಾಗುತ್ತದೆ. ನೀವು ಜವಾಬ್ದಾರಿಯಿರತಕ್ಕಂಥವರು, ನಿಮ್ಮ ಪೊಲಿಟಿಕಲ್ ಲೀಡರ್‌ಶಿಪ್ ಫೇಲ್ಯೂರ್ ಆಗಿರತಕ್ಕಂಥಾದ್ದು ಇಲ್ಲಿಯೇ ಈಗ ನೀವು ಏನು ಹೇಳುತ್ತೀರಿ? ನೋಡಿರಿ, ಗುಂಡು ಹಾರಿಸದೇ ಹೋಗಿದ್ದರೆ ಇನ್ನೂ ಸಾವಿರಾರು ಜನರು ಸತ್ತುಹೋಗಿ ಬಿಡೋರು, ನಾವು ಮುಸಲ್ಮಾನರನ್ನು ಪ್ರೊಟೆಕ್ಷನ್ ಮಾಡಿದ್ದೇವೆ ಎಂದು ಹೇಳುತ್ತೀರಿ. ಉಮಾಭಾರತಿಯವರನ್ನು ಹುಬ್ಬಳ್ಳಿಗೆ ಹೋಗುವುದಕ್ಕೆ ನೀವು ಏಕೆ ಬಿಟ್ಟಿರಿ? ನಿಮ್ಮ ಇಂಟಲಿಜೆನ್ಸಿ ಇಲ್ಲವೇ? ಯಡಿಯೂರಪ್ಪನವರನ್ನು ಹುಬ್ಬಳ್ಳಿಗೆ ಹೋಗುವುದಕ್ಕೆ ಏಕೆ ಬಿಟ್ಟಿರಿ? ಶಿಕಾರಿಪುರದಲ್ಲೇ ಅವರನ್ನು ಹಿಡಿದು ನಿಲ್ಲಿಸಬೇಕಾಗಿತ್ತು. ಅಷ್ಟು ಶಕ್ತಿ ನಿಮ್ಮ ಹತ್ತಿರ ಇಲ್ಲವೇನು? ಉತ್ತರ ಪ್ರದೇಶದಲ್ಲಿ ಏನಾಯಿತು ಎಂದು ನಿಮಗೆ ಗೊತ್ತಿಲ್ಲವೇನು? ಮಸೀದಿಯನ್ನು ಉರುಳಿಸುವುದಿಲ್ಲ, ಉರುಳಿಸುವುದಿಲ್ಲ ಎಂದು ಹೇಳಿ ಅವರು ಉರುಳಿಸಲಿಲ್ಲವೇ? ಇದನ್ನೆಲ್ಲ ನೀವು ಟಿ.ವಿ.ಯಲ್ಲಿ ನೋಡಿದ್ದೀರಿ. ಪತ್ರಿಕೆಗಳಲ್ಲಿ ಓದಿದ್ದೀರಿ, ಕೇಳಿದ್ದೀರಿ. ಅವಶ್ಯಕತೆ ಇದ್ದರೆ ನೀವು ಇನ್ನೂ ಹೆಚ್ಚಿಗೆ ಆರ್ಮಿಯನ್ನು ಕರೆಯಿಸಿಕೊಳ್ಳಬೇಕಾಗಿತ್ತು. Why did you not prevent them from coming to Hubli? You have failed and that is why we have to criticise the government. ಅವರ ಮೇಲೆ ಎಷ್ಟು ಜವಾಬ್ದಾರಿ ಇದೆಯೋ ನಿಮ್ಮ ಮೇಲೂ ಕೂಡ ಅಷ್ಟೇ ಜವಾಬ್ದಾರಿ ಇದೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಕೊನೆಯಲ್ಲಿ ಹೇಳತಕ್ಕದ್ದು ಇಷ್ಟೇ ನನಗೆ ಪೋಲೀಸರಲ್ಲಿ ಒಂದು ತಪ್ಪು ಕಾಣುತ್ತದೆ. ಆ ಡ್ರೈವರ್ ಏಕೆ ಗುಂಡು ಹಾರಿಸಿದ ಎಂಬುದು ನಮಗೆ ಅರ್ಥವಾಗುತ್ತಾ ಇಲ್ಲ. ಈಗ ಜ್ಯೂಡಿಷಿಯಲ್ ಪ್ರೋಬ್‌ನ್ನು ಅನೌನ್ಸ್ ಮಾಡಿದ್ದಾರೆ. ಜ್ಯುಡಿಷಿಯಲ್ ಪ್ರೋಬ್ ಬಂದು, ನವೆಂಬರ್‌ನಲ್ಲಿ ಚುನಾವಣೆಯಾಗಿ ಹೊಸ ಸರ್ಕಾರ ಬಂದು ಅದೇನು ಆಗುತ್ತದೆಯೋ ನೋಡಬೇಕು. ಜ್ಯುಡಿಶಿಯಲ್ ಪ್ರೋಬ್ ಬಗ್ಗೆ ನನಗೆ ನಂಬಿಕೆ ಇದ್ದರೂ ಸಹಿತ, ಅದರ ಫಲಿತಾಂಶದಿಂದ ಆಗತಕ್ಕಂಥ ಪರಿಣಾಮ ಅಷ್ಟೇ. ನಾನು

ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದು ಏನು ಎಂದರೆ, ಈಗ ಅವರು ಇನ್ನೊಂದು ಅನೌನ್ಸ್‌ಮೆಂಟ್ ಅನ್ನು ಮಾಡಿದ್ದಾರೆ. ಜನವರಿ 26ನೇ ತಾರೀಖು ನಾವು ಮತ್ತೆ ಬಾವುಟ ಹಾರಿಸಿಬಿಡುತ್ತೇವೆ ಎಂದು ಹೇಳಿದ್ದಾರೆ. ಚುನಾವಣೆಯಲ್ಲಿ ಸೋತಮೇಲೆ ಅವರೇನು ಮಾಡುತ್ತಾರೋ ಗೊತ್ತಿಲ್ಲ. ಶ್ರೀ ಬಿ.ಎಸ್. ಯಡಿಯೂರಪ್ಪ : ಜನವರಿ 26ಕ್ಕೆ ರಾಷ್ಟ್ರಧ್ವಜಕ್ಕೆ ಗೌರವ ಕೊಡುವಂಥ ಒಳ್ಳೆಯ ಸರ್ಕಾರ ಬರುತ್ತದೆ. ಅಧಿಕೃತವಾಗಿ ರಾಷ್ಟ್ರಧ್ವಜವನ್ನು ಹಾರಿಸುವಂಥ ಒಳ್ಳೆಯಕಾಲ ಬರುತ್ತದೆ ಎಂದು ನಾನು ಹೇಳಿದ್ದುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಅವರ ಕನಸು. ನಾವು ಏಕೆ ಬೇಡ ಎಂದು ಹೇಳಬೇಕು? ಐದು ವರ್ಷಗಳಿಂದ ಹೇಳುತ್ತಾ ಇದ್ದಾರೆ. ಆದ್ದರಿಂದ ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ, ಈಗ ಅವರು ಆ ಪ್ರಾಪರ್ಟಿ ಡಿಸ್‌ಪ್ಯೂಟ್‌ನಲ್ಲಿ ಇದೆಯೆಂದು ಹೇಳುತ್ತಾರೆ. ದುಷ್ಮನ್‌ಗಳನ್ನೆಲ್ಲಾ ಅವರು ಸೇರಿಸಿಕೊಳ್ಳುತ್ತಿದ್ದಾರೆ. ಏಕೆ ನೀವು ಸೇರಿಸಿಕೊಳ್ಳುತ್ತಿದ್ದೀರಿ? ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದನೆ, ಪ್ರಾಪರ್ಟಿ ಡಿಸ್‌ಪ್ಯೂಟ್ ಇದೆ. ಆದರೆ ಅಲ್ಲಿ ಟೆನ್‌ಷನ್ ಉಳಿದಿದೆ. ಮತ್ತೆ ಇವರು ಹೋಗಿ ಕೆದಕುತ್ತಲೇ ಇರುತ್ತಾರೆ. ಇದಕ್ಕೆ ಒಂದು ಪರ್ಮನೆಂಟ್ ಸೊಲ್ಯೂಷನ್ ಆಗಬೇಕಾದರೆ, ನಮ್ಮ ಜನತಾದಳದ ಅಧ್ಯಕ್ಷರಾದ ಶ್ರೀ ಬೊಮ್ಮಾಯಿಯವರು ಒಂದು ಸಲಹೆಯನ್ನು ಮುಂದೆ ಇಟ್ಟಿದ್ದಾರೆ. ಅಲ್ಲಿ ಲೋಕಲ್ ಆಗಿ ಸಮಸ್ಯೆಯನ್ನು ಇತ್ಯರ್ಥ ಮಾಡುವುದಕ್ಕೆ ನಾವು ಏನಾದರೂ ಪ್ರಯತ್ನ ಮಾಡಬೇಕು ಅಂತಹೇಳಿ. ಆ ಪ್ರಯತ್ನವನ್ನು ಮುಖ್ಯಮಂತ್ರಿಗಳು ಏನಾದರೂ ಮಾಡಿದರೆ, ಅದು ಎಲ್ಲರ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತದೆ ಎಂದು ಹೇಳಿ, ನಮ್ಮ ಎಲ್ಲರ ಬೆಂಬಲ ನಮ್ಮದು ಮತ್ತು ಪಕ್ಷದ್ದು ಇದೆ. ಇದರ ಬಗ್ಗೆ ನಾವು ಪ್ರಯತ್ನ ಮಾಡಬೇಕೆಂದು ಹೇಳಿ, ಈ ಗೋಲಿಬಾರ್‌ಗೆ ಕಾರಣಕರ್ತರಾಗಿರತಕ್ಕಂಥ ಇವರನ್ನು ನಾವು ಖಂಡಿಸಲೇಬೇಕಾಗುತ್ತದೆ. ನಾವು ಈ ಸಂದರ್ಭದಲ್ಲಿ ಅದನ್ನು ಖಂಡಿಸುತ್ತೇವೆ. ಇವರು ಸ್ವಲ್ಪ ಇಂತಹ ಕಾರ್ಯಕ್ರಮಗಳನ್ನೆಲ್ಲ ಬದಿಗೊತ್ತಿ ಬಡತನ, ನಿರುದ್ಯೋಗ ಇಂತಹವುಗಳ ಕಡೆ ಯೋಚಿಸಿದರೆ ಈ ನಾಡಿಗೆ ಮತ್ತು ರಾಷ್ಟ್ರಕ್ಕೆ ಬಹಳ ಒಳ್ಳೆಯದಾಗುತ್ತದೆ ಎಂದು ಹೇಳಿ ತಾವು ನನಗೆ ಸಾಕಷ್ಟು ಅವಕಾಶ ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೇ, ಆಗಸ್ಟ್ 15ನೇ ತಾರೀಖು ಹುಬ್ಬಳ್ಳಿಯಲ್ಲಿ ನಡೆದಂಥ ಘಟನೆ ಬಗ್ಗೆ ಈ ದಿವಸ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾನು ಎಲ್ಲವನ್ನೂ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನನಗೆ ಏನು ಅನ್ನಿಸುತ್ತದೆ ಎಂಬುದನ್ನು ಮಾತ್ರ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ದೇಶದಲ್ಲಿ ನಮ್ಮ ರಾಷ್ಟ್ರಜೀವನವೇ ಕುಲಗೆಡತಕ್ಕಂಥ ದಿಕ್ಕಿನಲ್ಲಿ ನಾವು ಹೋಗುತ್ತಿದ್ದೇವೆ. ರಾಷ್ಟ್ರಜೀವನ ಏತಕ್ಕೆ ಕುಲಗೆಡುತ್ತಿದೆ ಎಂದರೆ, ಕುರ್ಚಿಯ ಆಸೆಯಿಂದ, ನಾವು ಎಲ್ಲವನ್ನೂ ಕೂಡ ಮರೆಯುತ್ತಾ ಇದ್ದೇವೆ. ನಾವು ಕುರ್ಚಿಮೇಲೆ ಕುಳಿತುಕೊಳ್ಳಬೇಕಾದರೆ ಏನಾದರೂ ಒಂದು ಅವಕಾಶ, ಯಾವುದರ ಮೂಲಕವಾದರೂ ಸಿಗುತ್ತದೆ. ಅದು ಯಾವುದನ್ನೂ ಕೂಡ ನಾವು ಇವತ್ತು ಬಿಡುವುದಕ್ಕೆ ತಯಾರಿಲ್ಲ. ಆ ಕುರ್ಚಿಯ ಮೇಲಿನ ಆಸೆಯಿಂದ ಇದು ಪ್ರಾರಂಭವಾಯಿತು. ಗೋಡೆಗಳ ಮೇಲೆ ಬರಹ ಹಿಂದೂ ಎಲ್ಲಾ ಒಂದೇ ಅದಾದಮೇಲೆ ಪ್ರಾರಂಭವಾಯಿತು ಇಟ್ಟಿಗೆ ಪೂಜೆ. ಇಟ್ಟಿಗೆ ಪೂಜೆ ಆದಮೇಲೆ ಬೂದಿ ಪೂಜೆ. ಮತ್ತೆ ಚಪ್ಪಲಿ ಪೂಜೆ. ಕಲ್ಲಿನ ಪೂಜೆ ಆಯಿತು. ಇಟ್ಟಿಗೆ ಪೂಜೆ ಆಯಿತು, ಚಪ್ಪಲಿ ಪೂಜೆ ಆಯಿತು. ಯಾವ ಹಂತಕ್ಕೆ ನಾವು ಈ ದೇಶದಲ್ಲಿ ಇಳಿಯುತ್ತಿದ್ದೇವೆ ಎಂದರೆ ಜನಗಳಲ್ಲಿ ಇನ್ನೂ ಕೆಲವರಲ್ಲಿ

ಉಳಿದುಕೊಂಡಿರುವ ಮೌಢ್ಯತೆಯನ್ನು ಇರಬಹುದಾದಂಥ ಮೌಢ್ಯತೆಯನ್ನು ದುರುಪಯೋಗಪಡಿಸಿಕೊಳ್ಳತಕ್ಕಂಥ ವ್ಯವಸ್ಥಿತವಾದಂಥ ರೀತಿಯಲ್ಲಿ ಇವತ್ತು ಈ ಬೆಳವಣಿಗೆಗಳು ನಡೆಯುತ್ತಲೇ ಇರುತ್ತವೆ. ಇದನ್ನು ಕಂಡಾಗ ನನ್ನ ಮನಸ್ಸಿಗೆ ಖೇದ ಉಂಟಾಗುತ್ತಿದೆ. ಆ ದೃಷ್ಟಿಯಿಂದಲೇ ನಾನು ಮಾತನಾಡಬೇಕೆಂದು ಎದ್ದು ನಿಂತಿರತಕ್ಕಂಥಾದ್ದು. ನಾವು ರಾಜಕೀಯ ಮಾಡಬೇಕಾದರೆ, ರಾಜಕೀಯ ಕುರ್ಚಿ ಮೇಲೆ ಬರಬೇಕಾಗಿದ್ದರೆ ನಮ್ಮದ್ದೇ ಆದಂಥ ಒಂದು ಸಿದ್ಧಾಂತ ಇದೆ. ಒಂದು ದೇವಸ್ಥಾನ ಕಟ್ಟತಕ್ಕಂಥಾದ್ದು ಯಾವುದೇ ರಾಜಕೀಯ ಪಕ್ಷದ ಕಾರ್ಯಕ್ರಮ ಆಗಬಾರದು. ಒಂದು ಮಸೀದಿಯನ್ನು ಉರುಳಿಸತಕ್ಕಂಥಾದ್ದು, ಮಸೀದಿಯನ್ನು ಕಟ್ಟತಕ್ಕಂಥಾದ್ದು ಯಾವುದೇ ರಾಜಕೀಯ ಪಕ್ಷದ ಸಿದ್ಧಾಂತ ಆಗಬಾರದು. ಅವರವರ ಮತ ಧರ್ಮವನ್ನು ಕಾಪಾಡತಕ್ಕಂಥಾದ್ದು, ಪಾಲಿಸತಕ್ಕದ್ದು ಅದು ಅವರವರಿಗೆ ಬಿಟ್ಟಿರತಕ್ಕಂಥ ವಿಚಾರ. ಯಾವುದು ವೈಯಕ್ತಿಕವಾಗಿ ಇರಬೇಕಾಗಿತ್ತೋ ಅದು ಇವತ್ತಿನದಿವಸ ಬಹಿರಂಗವಾಗಿ ಬೀದಿಬೀದಿಯಲ್ಲಿ ಓಡಾಡುತ್ತಿದೆ. ಇವತ್ತು ಇಟ್ಟಿಗೆ ಬೂದಿ ಚಪ್ಪಲಿ, ಕಲ್ಲಿನ ಪೂಜೆ ಆಯಿತು, ಎಲ್ಲಾ ಆಯಿತು. ಕೊನೆಗೆ ಶ್ರೀ ರಾಮಚಂದ್ರನ ಹೆಸರು ಕೂಡ ಬಳಕೆ ಆಯಿತು. ಆದಾದಮೇಲೆ ಇವತ್ತಿನದಿವಸ ಮತ್ತೊಂದು ವೇಷ. ನಾವು ರಾಷ್ಟ್ರಪ್ರೇಮಿಗಳು, ನಾವು ರಾಷ್ಟ್ರಭಕ್ತರು, ನಮಗಿಂತ ರಾಷ್ಟ್ರಪ್ರೇಮಿಗಳಾಗಿರತಕ್ಕಂಥವರು, ರಾಷ್ಟ್ರಭಕ್ತರಾಗಿರತಕ್ಕಂಥವರು ಬೇರೆ ಯಾರೂ ಇಲ್ಲ ಎನ್ನತಕ್ಕಂಥಾದ್ದನ್ನು ತೋರಿಸತಕ್ಕದ್ದು. ಏಕೆಂದರೆ ಅಲ್ಲೆಲ್ಲ ಇವರ ಬೇಳೆ ಕಾಳು ಬೇಯಲಿಲ್ಲ. ಈಗ ಹೊಸದಾಗಿ ಇದನ್ನು ಹುಡುಕಿದ್ದಾರೆ. ರಾಷ್ಟ್ರಧ್ವಜಕ್ಕೆ ಸಲ್ಲಿಸಬೇಕಾಗಿರುವ ಗೌರವ ಎನ್ನತಕ್ಕದ್ದು. ಇಲ್ಲಿ ಒಂದು ಮಾತನ್ನು ನಾನು ಉಲ್ಲೇಖ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ರಾಷ್ಟ್ರಪ್ರೇಮ ಎನ್ನುವುದಕ್ಕೆ ಪ್ರಪಂಚದಲ್ಲಿ ಇರತಕ್ಕಂಥ ಕೆಲವು ಉದಾಹರಣೆಗಳು ಇವೆ. ಇಂಗ್ಲೆಂಡ್ ದೇಶದಲ್ಲಿ ಒಬ್ಬ ಕಳ್ಳ ಕಳ್ಳತನ ಮಾಡುವುದಕ್ಕೋಸ್ಕರ ಒಂದು ಮನೆಗೆ ಹೋಗುತ್ತಾನೆ. ಆ ಮನೆಯ ಮಾಲೀಕ ನಿರಾಯುಧನಾಗಿರುತ್ತಾನೆ. ಆತನ ಕೈಯಲ್ಲಿ ಏನೂ ಇರುವುದಿಲ್ಲ. ಆದರೆ ಕಳ್ಳತನ ಮಾಡಲಿಕ್ಕೆ ಬಂದಿರುವವನ ಕೈಯಲ್ಲಿ ಆಯುಧ ಇರುತ್ತದೆ. ಮನೆ ಮಾಲೀಕನ ರಕ್ಷಣೆಗೆ ಬೇರೆ ಏನೂ ಇರಲಿಲ್ಲ.

ಅಂತಹ ಪರಿಸ್ಥಿತಿಯಲ್ಲಿ ಅವನು ನಿಂತುಕೊಂಡು ಇಂಗ್ಲೆಂಡ್ ದೇಶದ ರಾಷ್ಟ್ರಗೀತೆ ಹಾಡುವುದಕ್ಕೆ ಪ್ರಾರಂಭ ಮಾಡುತ್ತಾನೆ. ರಾಷ್ಟ್ರಗೀತೆ ಹಾಡಿದಾಗ ಕಳ್ಳತನ ಮಾಡಬೇಕೆಂದು ಬಂದಿರತಕ್ಕಂಥವನು ಅಟೆನ್‌ಷನ್ ಪೊಸಿಷನ್‌ನಲ್ಲಿ ನಿಂತುಕೊಂಡು ರಾಷ್ಟ್ರಗೀತೆಗೆ ತನ್ನ ಗೌರವವನ್ನು ತೋರಿಸುತ್ತಾನೆ. ಆದರೆ ಇಲ್ಲಿ ನಾವು ಏನು ಮಾಡುತ್ತಿದ್ದೇವೆ. ಒಬ್ಬ ಕಳ್ಳನು ತೋರಿಸತಕ್ಕಂಥ ಗೌರವದ ಉದಾಹರಣೆ ಏನಿದೆ, ಕಳ್ಳತನ ಮಾಡಬೇಕೆಂದು ಹೋಗಿರತಕ್ಕಂಥವನು ಆ ಉದ್ದೇಶದಿಂದ ಹೋಗಿರುವವನು ಅಟೆನ್‌ಷನ್ ಪೊಸಿಷನ್‌ಗೆ ಬಂದು ರಾಷ್ಟ್ರಗೀತೆಗೆ ಗೌರವ ತೋರಿಸತಕ್ಕಂಥ ಉದಾಹರಣೆ ಇರತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತು ನಾವು ರಾಷ್ಟ್ರಧ್ವಜವನ್ನು ಅವಮಾನಿಸಿರತಕ್ಕ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದೇವೆ. ನಮ್ಮ ಸ್ನೇಹಿತರಾಗಿರತಕ್ಕಂಥವರು ಹೇಳುತ್ತಿದ್ದರು. ನಾವು ಅಲ್ಲಿ ರಾಷ್ಟ್ರಧ್ವಜವನ್ನು ಹಾಕಬಾರದೆಂದು ಎಲ್ಲಿದೆ. ಹುಬ್ಬಳ್ಳಿಯಲ್ಲಿರತಕ್ಕಂಥ ಈದ್‌ಗಾ ಮೈದಾನವೋ ಅಥವಾ ಯಾವುದೋ ಮೈದಾನ ಏನಿದೆ ಅಲ್ಲಿ ನಾವು ರಾಷ್ಟ್ರಧ್ವಜ ಹಾಕಬಾರದೆನ್ನತಕ್ಕಂಥದ್ದು ಎಲ್ಲಿದೆ, ಯಾವ ಕಾನೂನಿನಲ್ಲಿದೆ ಎಂದು ಹೇಳುತ್ತಾರೆ. ಸ್ವಾಮಿ ರಾಷ್ಟ್ರಧ್ವಜ ಹಾಕಬೇಕಾದರೂ ಕೂಡ ಅತ್ಯಂತ ಗೌರವಯುತವಾಗಿ ನಡೆದುಕೊಳ್ಳಬೇಕಾಗುತ್ತದೆ. ಹಾಗಾದರೆ ಪ್ರಧಾನಮಂತ್ರಿಗಳಾಗಿರತಕ್ಕಂಥವರು ಆಗಸ್ಟ್15ನೇ ತಾರೀಖಿನ ದಿವಸ ಕೆಂಪುಕೋಟೆಯ ಮೇಲೆ ಏತಕ್ಕೆ ರಾಷ್ಟ್ರಧ್ವಜವನ್ನು ಹಾರಿಸುತ್ತಾರೆ. ಅದರ ಔಚಿತ್ಯ ನಮಗೆ ಯಾರಿಗೂ ಗೊತ್ತಿಲ್ಲವೇ? ಅದು ಈ ರಾಷ್ಟ್ರದ ಸಂಕೇತ. ಅದು ಅತ್ಯಂತ ಉನ್ನತವಾದ ಸ್ಥಾನದಲ್ಲಿ ರಾಷ್ಟ್ರಧ್ವಜ ಹಾರಾಡಬೇಕಾಗಿರತಕ್ಕಂಥಾದ್ದು. ಪ್ರಧಾನಮಂತ್ರಿಗಳಾಗಿರತಕ್ಕಂಥವರು ಕೆಂಪು ಕೋಟೆಯ ಮೇಲೆ ರಾಷ್ಟ್ರಧ್ವಜ ಹಾರಿಸುವುದಕ್ಕೆ

ಬದಲಾಗಿ ಮುಂದಕ್ಕೆ ನಾನು ಮಾತು ಹೇಳುವುದಕ್ಕೆ ಹೋಗುವುದಿಲ್ಲ, ಅಪ್ರಕೃತವಾಗಿರತಕ್ಕಂಥ ಜಾಗದಲ್ಲಿ ಹಾಕಿದರೆ ನಾವು ಅದಕ್ಕೆ ಗೌರವ ತೋರಿಸಿದಂತೆ ಆಗುತ್ತದೆಯೇ? ರಾಷ್ಟ್ರಧ್ವಜ ಹಾಕಬೇಕಾಗಿದ್ದರೆ ಅದಕ್ಕೂ ಕೂಡ ಯೋಗ್ಯವಾದ ಸ್ಥಾನ ಮಾನ ಪ್ರತಿಯೊಂದೂ ಕೂಡ ಉನ್ನತವಾದ ಸ್ಥಾನದಲ್ಲಿ ಇರಬೇಕು. ಸಿಕ್ಕಿಸಿಕ್ಕಿದ ಕಡೆ ಎಲ್ಲಾ ರಾಷ್ಟ್ರಧ್ವಜ ಹಾಕತಕ್ಕ ಪರಿಸ್ಥಿತಿ ಉಂಟಾದರೆ ಅದು ನಾವು ರಾಷ್ಟ್ರಧ್ವಜಕ್ಕೆ ಮಾಡಿದ ಅಪಚಾರವಾಗುತ್ತದೆ. ಇದನ್ನು ನಮ್ಮ ಸ್ನೇಹಿತರು ಪಾಲಿಸತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಅದರಲ್ಲೂ ಕೂಡ ಹುಬ್ಬಳ್ಳಿಯಲ್ಲಿರತಕ್ಕಂಥ ಜನ ಅವರಿಗೆ ಯಾರಿಗೂ ಕೂಡ ಹಿಂದೂಗಳಿರಬಹುದು, ಮುಸ್ಲಿಂ ಬಾಂಧವರು ಇರಬಹುದು ಅವರು ಯಾರ ತಲೆಗೂ ಕೂಡ ಇದು ಹೋಗದಿರತಕ್ಕಂಥಾದ್ದು. ಇವತ್ತು ಇಂಡಿಯನ್ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಒಂದು ಫೋಟೋ ಬಂದಿದೆ. ಇದನ್ನು ನಮ್ಮ ರಾಜ್ಯದಿಂದ ಹೋಗಿರತಕ್ಕಂಥ ಒಬ್ಬ ಲೋಕಸಭಾ ಸದಸ್ಯರು, ಅವರ ಹೆಸರು ಹೇಳಬಾರದೆಂದು ಹಿರಿಯರು ಹೇಳಿದ್ದಾರೆ, ಧನಂಜಯಕುಮಾರ್ ಎನ್ನತಕ್ಕಂಥವರು ಅಲ್ಲಿ ಹೋಗುತ್ತಾರೆ. ವಿದ್ಯಾರ್ಥಿ ಪರಿಷತ್ ಯುವಕರನ್ನು ತೆಗೆದುಕೊಂಡು ಈದ್ಗಾ ಮೈದಾನದ ಕಡೆ ಹೋಗುತ್ತೇವೆ ಎಂದು ಹಿಂದಿನ ದಿವಸ ಹೋಗುತ್ತಾರೆ. ಅಲ್ಲಿಗೆ ಹೋಗಗೆ ಅವರ ಜೊತೆಗಲ್ಲಿ ಎಷ್ಟು ಜನ ಇದ್ದಾರೆ ಎಂದರೆ 18 ಇಲ್ಲ, ಫೋಟೋದಲ್ಲಿ ನೋಡಿದರೆ ಕೇವಲ ಒಂಭತ್ತು ಜನ ಇದ್ದಾರೆ. ಫೋಟೋದಲ್ಲಿ ಕಾಣುತ್ತಾ ಇರತಕ್ಕಂಥ ತಲೆಗಳು ನೋಡಿದರೆ ಕೇವಲ 9 ಜನ ಇದ್ದಾರೆ. ಅದೂ ಅವರು ಯಾರೂ ಕೂಡ ಆ ಸ್ಥಳಕ್ಕೆ ಸಂಬಂಧಪಟ್ಟಂಥವರು ಅಲ್ಲ, ಹುಬ್ಬಳ್ಳಿ ನಗರಕ್ಕೆ ಸಂಬಂಧಪಟ್ಟವರಲ್ಲ, ಹೊರಗಡೆಯಿಂದ ಬಂದಿರತಕ್ಕಂಥವರು, ಮಿಕ್ಕ ವಿಚಾರ ಎಲ್ಲಾ ನಮ್ಮ ಸ್ನೇಹಿತರು ಹೇಳಿದ್ದಾರೆ ನಾನು ಹೇಳುವುದಿಲ್ಲ. ಇವರು ಒಂಭತ್ತು ಜನರು ಮೆರವಣಿಗೆಯಲ್ಲಿ ಹೋಗುತ್ತಾರೆ. ಒಂದು ಕಾಲೇಜಿನ ಹತ್ತಿರ ಹೋಗಿ ಅಲ್ಲಿಯ ವಿದ್ಯಾರ್ಥಿಗಳನ್ನು ಕರೆಯುತ್ತಾರೆ. ಒಬ್ಬ ವಿದ್ಯಾರ್ಥಿ ಕೂಡ ಬರಲಿಲ್ಲ, ಇವರಿಗೆ ಸಹಕರಿಸಲಿಲ್ಲ. ಅಲ್ಲಿ ಬಿಡುತ್ತಾರೆ. ಅಲ್ಲಿಂದ ಮತ್ತೊಂದು ಕಾಲೇಜಿಗೆ ಹೋಗುತ್ತಾರೆ. ಅಲ್ಲೂ ಕೂಡ ಯಾವ ವಿದ್ಯಾರ್ಥಿಗಳೂ ಹೊರಗಡೆ ಬರಲಿಲ್ಲ. ಪಟಾಕಿ ಅಂಟಿಸುತ್ತಾರೆ ಗಲಭೆ ಎಬಿಸುತ್ತಾರೆ. ಕೊನೆಗೆ ಅಲ್ಲೂ ಸಹ ಬರಲಿಲ್ಲ. ಪೊಲೀಸರು ಬಂಧನ ಮಾಡಲಿಲ್ಲ ಎಂದು ಪರಿತಪಿಸಿಕೊಂಡು ರಸ್ತೆಯಲ್ಲಿ ಹೋಗುತ್ತಾರೆ. ಅದೇಕೆ ಅವರನ್ನು ಬಂಧನ ಮಾಡಿದರೋ ಗೊತ್ತಿಲ್ಲ. ಅವರ ಮೆರವಣಿಗೆಯನ್ನು ಹಾಗೆಯೇ ಬಿಡಬೇಕಾಗಿತ್ತು. ನೋಡಬೇಕಾಗಿತ್ತು ಜನ, ಎಷ್ಟು ನಗೆಪಾಟಲಿಗೆ ಈಡಾಗಿದ್ದಾರೆ ಎಂಬುದನ್ನು, ಈ ಒಂಭತ್ತು ಜನ ಬಹಳ ದೂರ ಹೋದಮೇಲೆ ಈ ಮೆರವಣಿಗೆಯ ಮುಖಂಡತ್ವವನ್ನು ವಹಿಸಿರತಕ್ಕಂಥ ಲೋಕಸಭಾ ಸದಸ್ಯರಿಗೆ ಬಹಳ ದಣಿವಾಗಿತ್ತಂತೆ, ಆ ದಣಿವಾದಾಗ ಅವರೇ ಆ ಲೋಕಸಭಾ ಸದಸ್ಯರೇ ಕೇಳಿಕೊಂಡಿರಬೇಕು, ಆಮೇಲೆ ಹೋಗಿ ಅವರನ್ನು ಬಂಧನ ಮಾಡುತ್ತಾರೆ ನನ್ನನ್ನು ಬಂಧನ ಮಾಡಿ ಎಂದು ಆ ಲೋಕಸಭಾ ಸದಸ್ಯರೇ ಕೇಳಿಕೊಂಡಿರಬೇಕು, ಆ ಮೇಲೆ ಅವರನ್ನು ಬಂಧನ ಮಾಡುತ್ತಾರೆ, ಅಲ್ಲಿ ನಡೆದಿರತಕ್ಕಂಥ ಘಟನೆ ಇದು, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯು ಆಗಸ್ಟ್ 15ನೇ ತಾರೀಖಿನ ಸಂಚಿಕೆಯಲ್ಲಿ ಅದು ಬಂದಿದೆ, ಫೋಟೋ ಕೂಡ ಅಚ್ಚಾಗಿದೆ. ಸುದ್ದಿ ಕೂಡ ಅಚ್ಚಾಗಿದೆ. ಇದೇನು ತೋರಿಸುತ್ತದೆ ಎಂದರೆ ಇದು ಯಾರಿಗೂ ಕೂಡ ಇಷ್ಟ ಇಲ್ಲ.

ಹಿಂದೂಗಳಿಗೆ ಆಗಲಿ ಮುಸ್ಲಿಂರಿಗೆ ಆಗಲಿ ಯಾರಿಗೂ ಕೂಡ ಆ ಘಟನೆ ನಡೆಯಬೇಕೆನ್ನುವ ಇಷ್ಟ ಇಲ್ಲ, ಅವರು ಯಾರೂ ಕೂಡ ಇದರಲ್ಲಿ ಭಾಗವಹಿಸಲಿಲ್ಲ. ನಾನು ಆಗಲೇ ಹೇಳಿದಹಾಗೆ, ಇವರಿಗೆ ಅಂದರೆ ನಮ್ಮ ಭಾರತೀಯ ಜನತಾಪಕ್ಷದ ಸ್ನೇಹಿತರಿಗೆ ಕುರ್ಚಿಯ ಆಸೆ. ಕುರ್ಚಿಯ ಆಸೆಗೋಸ್ಕರ ಮುಳುಗುತ್ತಾ ಇರತಕ್ಕಂಥವನು ಹುಲ್ಲು ಕಡ್ಡಿ ಸಿಕ್ಕಿದರೂ ಕೂಡ ತೇಲುವ ಆಸೆಯಿಂದ ಆ ಹುಲ್ಲು ಕಡ್ಡಿಯನ್ನು ಹಿಡಿದುಕೊಳ್ಳುತ್ತಾನೆ. ಆ ರೀತಿ ಆಗಿರತಕ್ಕಂಥ ಪರಿಸ್ಥಿತಿ ಬಂದಿದೆ. ಎದುರುಗಡೆ

ಕುಳಿತಿರತಕ್ಕಂಥ ಸ್ನೇಹಿತರು ಇವರು ನಡೆಸಿದರೂ, ನಡೆಸಿದರೂ ಬಾಬರಿ ಮಸೀದಿಯನ್ನು ರಕ್ಷಣೆ ಮಾಡುತ್ತೇವೆಂದು ಹೇಳಿ ಹೇಳಿ ಇವರಿಗೂ ಕೆಡವಬೇಕಾಗಿತ್ತು. ಬಾಬರಿ ಮಸೀದಿಯನ್ನು ಕೆಡವಿಸಿದರು. ಆ ತಪ್ಪು ಏನಾಗಿದೆ ಆ ರಾಷ್ಟ್ರೀಯ ಅಪಘಾತ ಎನ್ನತಕ್ಕಂಥಾದ್ದು ಏನಾಗಿದೆ ಅದನ್ನು ಮರೆ ಮಾಡುವುದಕ್ಕೋಸ್ಕರ ನಾವೇ ನಿಮ್ಮ ರಕ್ಷಕರು ಎನ್ನುವುದನ್ನು ಉತ್ಪ್ರೇಕ್ಷೆ ಮಾಡಿ ತೋರಿಸಬೇಕು ಎನ್ನುವುದಕ್ಕೋಸ್ಕರ ಹುಬ್ಬಳ್ಳಿಯಲ್ಲಿ ನಡೆಸಿದರು. ಅದನ್ನು ಬಗೆಹರಿಸಬಹುದಾಗಿತ್ತು. ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಅದೇನು ಅಂತಹ ದೊಡ್ಡ ವಿಚಾರ ಅಲ್ಲ. ಯಾವ ಒಬ್ಬ ಮುಸ್ಲಿಂ ಕೂಡ ಅಲ್ಲಿ ಬಾವುಟ ಹಾರಿಸಬಾರದು ಎಂದು ಯಾರೂ ಕೂಡ ಹೇಳಿಲ್ಲ. ಅವರನ್ನು ಕರೆದು ಮಾತನಾಡಿ ಬಗೆಹರಿಸಲು ಅವಕಾಶ ಮಾಡಿಕೊಡುವ ಜವಾಬ್ದಾರಿ ಸರ್ಕಾರದ ಮೇಲೆ ಇತ್ತು ಪ್ರಯತ್ನ ಪಡಬೇಕಾಗಿತ್ತು ಇವರಿಗೆ ಆ ಜವಾಬ್ದಾರಿ ಇಲ್ಲ. ಅವರನ್ನು ಮಾತನಾಡಿಸತಕ್ಕಂಥ ಕೆಲಸ ಮಾಡಲಿಲ್ಲ. ಅಲ್ಲಿ 1992ರಿಂದ ಘಟನೆಗಳು ನಡೆದಿವೆ. ಅಲ್ಲಿ ಸಮಸ್ಯೆ ಇದೆ ಎನ್ನುವುದು ಸರ್ಕಾರಕ್ಕೆ ಅರಿವು ಇದೆ. ಅಲ್ಲಿ ಸಮಸ್ಯೆ ಇದೆ ಎನ್ನುವ ಅರಿವು ಇದ್ದರೂ ಕೂಡ ನಿಮ್ಮ ರಕ್ಷಣೆಗೆ ನಾವು ಇದ್ದೇವೆ ಎನ್ನತಕ್ಕಂಥಾ ಬಲಪ್ರದರ್ಶನವನ್ನು ಮಾಡತಕ್ಕಂಥ ಒಂದು ಪ್ರಯತ್ನ ನಡೆಸಿದರೇ ವಿನಾ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಪ್ರಯತ್ನ ಮಾಡಲಿಲ್ಲ. ಅದು ಇವರಿಗೂ ಸಹ ಬೇಕಾಗಿತ್ತು. ಇವರು ಮುಸ್ಲಿಂ ಬಂಧುಗಳ ಬೆಂಬಲವನ್ನು ಕಳೆದುಕೊಂಡಿರತಕ್ಕಂಥಾದ್ದನ್ನು ಪುನಃ ನಾವು ನಿಮ್ಮ ಬೆಂಬಲಕ್ಕೆ ಇದ್ದೇವೆ ಎನ್ನತಕ್ಕಂಥಾದ್ದನ್ನು ತೋರಿಸಿಕೊಳ್ಳಬೇಕಾಗಿತ್ತು. ಆದ್ದರಿಂದ ಆ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಪ್ರಯತ್ನ ಇವರು ಮಾಡಲಿಲ್ಲ. ಅದು ಇನ್ನು ಕಠಿಣವಾಗತಕ್ಕಂಥಾದ್ದಕ್ಕೆ ಅದು ಇನ್ನೂ ಉಗ್ರವಾಗತಕ್ಕಂಥಾದ್ದಕ್ಕೆ ಉರಿಯುತ್ತಾ ಇರತಕ್ಕಂಥ ಬೆಂಕಿಗೆ ಸೀಮೆ ಎಣ್ಣೆ ಪೆಟ್ರೋಲ್ ಸುರಿಯತಕ್ಕಂಥ ಕೆಲಸ ಸರ್ಕಾರದ ಕಡೆಯಿಂದ ನಡೆದಿದೆ. ಸರ್ಕಾರ ಮನಸ್ಸು ಮಾಡಿದ್ದರೆ ಇಂತಹ ಯಾವುದೇ ಘಟನೆಗಳಿಗೆ ಅವಕಾಶ ಇರುತ್ತಿರಲಿಲ್ಲ. ಇನ್ನು ಮುಂದಾದರೂ ಕೂಡ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜನವರಿ 26ರ ಒಳಗಾಗಿ ಬೇರೆ ಸರ್ಕಾರ ಇರುತ್ತದೆ.

ಏನೋ ನಮ್ಮ ಯಡಿಯೂರಪ್ಪನವರು ಕನಸಿನ ಮಾತುಗಳನ್ನು ಹೇಳಿದ್ದಾರೆ. ಅದೆಲ್ಲಾ ಅವರು ಕನಸಿನಲ್ಲಿ ಹೇಳತಕ್ಕಂಥ ಮಾತುಗಳು ಇರಬೇಕು. ಅದಕ್ಕೆ ಅವಕಾಶ ಇಲ್ಲ. ಈ ರಾಜ್ಯದಲ್ಲಿ ಆ ರೀತಿಯಾದಂಥ ಸಂದರ್ಭ ಇಲ್ಲ. ಕನಸುಗಾರರು ಯಡಿಯೂರಪ್ಪನವರು ಕನಸು ಕಂಡುಕೊಂಡು ಇರಬೇಕಾಗುತ್ತದೆ. ಮುಂದೆ ಯಾವ ಸರ್ಕಾರ ಬರುತ್ತದೆಯೋ ಗೊತ್ತಿಲ್ಲ. ಸರ್ಕಾರ ಈಗಾಗಲೇ ಹೇಳಿದೆ. ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವರು ಎಲ್ಲಿಯವರೆಗೂ ಮುಖ್ಯಮಂತ್ರಿಗಳಾಗಿ ಇರುತ್ತಾರೆ ಅವರು ಯಾರೇ ಆಗಲಿ ಈ ರೀತಿಯಾದಂತಹ ಮತೀಯ ಭಾವನೆಗಳನ್ನು ಕಲ್ಪಿಸಿ ಇದನ್ನು ಉದ್ವೇಗಗೊಳಿಸತಕ್ಕಂಥ ಅವಕಾಶ ಇಲ್ಲದೆ ಎಲ್ಲಾ ಮತಬಾಂಧವರು ಸಹ ಈ ದೇಶದ ದೇಶ ಭಕ್ತರು ಈ ದೇಶದ ಪ್ರಜೆಗಳು ಅವರ ಹಕ್ಕುಗಳನ್ನು ಚಲಾವಣೆಮಾಡುವುದಕ್ಕೆ ಯಾವ ಅಡ್ಡಿ ಕೂಡ ಇಲ್ಲದಂಥ ರೀತಿಯಲ್ಲಿ ಸರ್ಕಾರ ನಡೆಸಬೇಕು ಎನ್ನತಕ್ಕಂಥ ಮಾತನ್ನು ಸರ್ಕಾರಕ್ಕೆ ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ, ನಾನ ಈ ಸೂಚನೆಗೆ ಸಹಿ ಹಾಕಿಲ್ಲದಿದ್ದರೂ ಅವಕಾಶ ಕೊಟ್ಟಿದ್ದೀರಿ, ಧನ್ಯವಾದಗಳು. ನಾನು ಮಾತನಾಡುವ ಅವಶ್ಯಕತೆ ಇರಲಿಲ್ಲ. ಆದರೆ ಸನ್ಮಾನ್ಯ ಸದಸ್ಯರಾದ ಚಂದ್ರೇಗೌಡರು ಒಂದು ಶಾಶ್ವತ ಪರಿಹಾರದ ಮಾತನ್ನು ಹೇಳಿದರು. ಆ ಕಾರಣ ನಾನು ಮಾತನಾಡಬೇಕಾಗಿದೆ. ಏಕೆಂದರೆ ನಾವು ಇವತ್ತು ಒಂದು ವಿಚಿತ್ರ ಪರಿಸ್ಥಿತಿಯಲ್ಲಿದ್ದೇವೆ. ಕೆಲವರು ರಾಷ್ಟ್ರಧ್ವಜ ಹಾರಿಸಿದ್ದೇವೆ ದೊಡ್ಡ ಸಾಹಸ ಮಾಡಿದ್ದೇವೆ ಎನ್ನುವ ಮಾತನ್ನು ಆಡುತ್ತಾರೆ. ಮತ್ತೆ ಕೆಲವರು ರಾಷ್ಟ್ರಧ್ವಜ ಹಾರಿಸುವುದನ್ನು

ತಡೆದಿದ್ದೇವೆ ಒಂದು ಸಾಹಸ ಮಾಡಿದ್ದೇವೆ ಎನ್ನುವ ಮಾತನ್ನು ಆಡುತ್ತಾರೆ. ಇದು ನಿಜವಾಗಲೂ ಒಂದು ವಿಚಿತ್ರ ಪರಿಸ್ಥಿತಿ. ಇದಕ್ಕೆ ಮೂಲ ಕಾರಣ ಒಂದು ಇದೆ. ನಾವು ಇದಕ್ಕಿಂತ ಹೆಚ್ಚು ವಿಚಿತ್ರ ಪರಿಸ್ಥಿತಿಯಲ್ಲಿ ಮುಂದುವರಿಯುತ್ತಿದ್ದೇವೆ ಒಂದು ದೇಶವಾಗಿ. ಬೇರೆ ದೇಶದ ಸಾಮಾಜಿಕ ವಿಜ್ಞಾನಿಗಳು ಅಥವಾ ರಾಜಕೀಯ ವಿಜ್ಞಾನಿಗಳು ಬಂದು ನಮ್ಮ ದೇಶವನ್ನು ನೋಡಿದಾಗ ಒಂದು ಮಾತು ಹೇಳುತ್ತಾರೆ. That India is a soft state; we are running as a soft State. ಮೃದುವಾದ ರಾಷ್ಟ್ರ . ಅದರ ಅರ್ಥ ಇನ್ನೇನೂ ಇಲ್ಲ. ನಮ್ಮ ದೇಶದ ಕಾನೂನುಗಳಿಗೆ ಒಂದು ರಿಗರ್ ಇಲ್ಲ. ಎಲ್ಲಿಗೆ ಬೇಕಾದರೆ ಅಲ್ಲಿಗೆ ಬಗ್ಗುತ್ತವೆ ನಮ್ಮ ಕಾನೂನುಗಳು.ಬೈರೇಗೌಡರು ಹೇಳುತ್ತಿದ್ದರು, ಇಂಗ್ಲೆಂಡಿನಲ್ಲಿ ಕಳ್ಳತನ ಮಾಡಲು ಹೋಗುತ್ತಿದ್ದವನು ರಾಷ್ಟ್ರಗೀತೆ ತನ್ನ ಕಿವಿಗೆ ಬಿದ್ದ ಕೂಡಲೇ ಎದ್ದು ನಿಲ್ಲುತ್ತಾನೆ ಎಂದು. ನಮ್ಮ ದೇಶದಲ್ಲಿ ಕೆಲವರು ಇದ್ದಾರೆ. ರಾಷ್ಟ್ರ ಗೀತೆ ನಡೆಯುತ್ತಾ ಇದ್ದಾಗಲೂ ಕೂಡ ಎದ್ದು ಹೇಳದೇ ಇರುವವರು. ಎದ್ದು ಇಂಥ ಕೆಲಸಕ್ಕೆ ತೆರ ಹಾಕುತ್ತಾರೆ. ಅವರ ಬಗ್ಗೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ. ಏನೂ ಕ್ರಮ ತೆಗೆದುಕೊಂಡಿಲ್ಲ. ಕಾವಿ ಧರಿಸುವವರು, ಮಠಾಧೀಶರುಗಳು ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲುವುದಿಲ್ಲ. ಇವರ ಬಗ್ಗೆ ನಾವು ಕಾನೂನು ಕ್ರಮ ತಗೆದುಕೊಂಡಿಲ್ಲ. ಅದಕ್ಕೂ ಮತ್ತೆ ಹುಬ್ಬಳ್ಳಿಯಲ್ಲಿ ನಡೆಯುತ್ತಾ ಇರುವಂತಹ ಚಟುವಟಿಕೆ ಬೇರೆ ಕಡೆ ನಡೆಯುತ್ತಾ ಇರುವಂಥಹ ಚಟುವಟಿಕೆ ಎಷ್ಟರ ಮಟ್ಟಿಗೆ ಕಾನೂನು ಬದ್ಧವಾಗಿದೆ. ಸಂವಿಧಾನ ಬದ್ಧವಾಗಿದೆ ಎಷ್ಟರ ಮಟ್ಟಿಗೆ ಸಂವಿಧಾನ ಬಾಹಿರವಾಗಿದೆ ಇದನ್ನು ಗಣನೆಗೆ ತೆಗೆದುಕೊಂಡು ನಮ್ಮಲ್ಲಿ ಇರುವಂತಹ ಕಾನೂನನ್ನು ನಾವು ಯಾವುದೇ ಮುಲಾಜು ಇಲ್ಲದೆ ಜಾರಿಗೆ ತರುವುದಾದರೆ ಇದಕ್ಕೆ ಒಂದು ಶಾಶ್ವತ ಪರಿಹಾರ ಕಂಡುಕೊಳ್ಳಬಹುದು. ಇವತ್ತು ನಾನು ಅಶೋಕ ಚಕ್ರ ಇರುವಂತಹ ತ್ರಿವರ್ಣ ಧ್ವಜ ರಾಷ್ಟ್ರ ಬಾವುಟ, ರಾಷ್ಟ್ರ ಧ್ವಜ ಎಂದು ಒಪ್ಪಿದ ಮೇಲೆ ಆ ಮಾತು ಈಚೆ ಬಂತೇ ಹೊರತು ಇಷ್ಟು ದಿವಸ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದಾಗ ತ್ರಿವರ್ಣ ಧ್ವಜ, ತ್ರಿವರ್ಣ ಧ್ವಜ ಎಂದು ಬರುತ್ತಾ ಇತ್ತು. ಇದು ಜಗತ್ತಿಗೆ ಗೊತ್ತಿರತಕ್ಕಂಥ ವಿಚಾರ.ಅವರ ಶಾಖೆಗಳಲ್ಲಿ ಅವರು ತ್ರಿವರ್ಣ ಧ್ವಜ. ಕನಿಷ್ಟ ಗಣರಾಜ್ಯ ದಿನ ಆಗಲಿ ಅಥವಾ ಸ್ವಾತಂತ್ರ್ಯದಿನ ಆಗಲಿ ಅವರು ಹಾರಿಸುವುದು.

ಮತ್ತೆ ಜನಗಣಮನ ನಾವು ಎಲ್ಲಾ ಒಪ್ಪಿರುವಂತಹ ರಾಷ್ಟ್ರಗೀತೆ. ಇದನ್ನು ರಾಷ್ಟ್ರಗೀತೆ ಅಂತಲೂ ಒಪ್ಪುವುದಿಲ್ಲ ಅವರು, 'ನಮಸ್ತೇ ಸದಾ ವತ್ಸಲೇ ಮಾತೃಭೂಮಿ' ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕಾವಿ ಧ್ವಜವನ್ನು ರಾಷ್ಟ್ರಧ್ವಜ ಅಂತ ಪರಿಗಣಿಸುವುದು, ಅಥವಾ ಒಂದೇ ವರ್ಗದ ಒಂದು ಪ್ರಭುತ್ವ ಸ್ಥಾಪನೆ ಮಾಡುವುದಕ್ಕೋಸ್ಕರ ನಮಸ್ತೇ ಸದಾ ವತ್ಸಲೇ ಮಾತೃ ಭೂಮಿ ಅಂತ ಹಾಡುವುದು. ಇದನ್ನು ಸಿಂಧ್ಯಾರವರು ಅಲ್ಲೇ ಇದ್ದು ಬಹಳ ಹತ್ತಿರದಿಂದ ಅದರ ಜ್ಞಾನ ಪಡೆದವರು. ಯಾವುದೋ ಒಂದು ವರ್ಗದ ಪ್ರಭುತ್ವವನ್ನು ಈ ದೇಶದಲ್ಲಿ ಸ್ಥಾಪನೆ ಮಾಡುವುದಕ್ಕೋಸ್ಕರ ಕಾವಿ ಧ್ವಜವೇ ಭಗವಾಧ್ವಜ ಎಂದು ಹೇಳುವುದು, ಅದನ್ನೇ ನಾವು ರಾಷ್ಟ್ರಧ್ವಜ ಎಂದು ಹೇಳುತ್ತೇವೆ ಎಂದು ಹೇಳಿದರೆ ಇದನ್ನು ಈ ದೇಶದ ನನ್ನಂತಹ ಬಹು ಸಂಖ್ಯಾತ ವರ್ಗಕ್ಕೆ ಸೇರಿದವರು ಒಪ್ಪುವಂತಹ ಮಾತಲ್ಲ. ಇದನ್ನು ಸಂವಿಧಾನ ವಿರೋಧಿಚಟುವಟಿಕೆ ಎಂದು ಹೇಳಲೇಬೇಕಾಗುತ್ತದೆ. ಏಕೆಂದರೆ, ಕಾವಿ ಬಟ್ಟೆಗೂ ಈ ದೇಶದ ಮೂಲ ಭಾರತೀಯರಿಗೂ ಏನೂ ಸಂಬಂಧ ಇಲ್ಲ. ಈ ಮೂಲ ಭಾರತೀಯರು ಎಂದು ನಾವು ಏನು ಹೇಳುತ್ತೇವೆ ಈ ಮೂಲ ಭಾರತೀಯರ ಧ್ವಜ ಬೇರೆ ಬೇರೆ ಚಿಹ್ನೆಗಳನ್ನು ಇಟ್ಟುಕೊಂಡತಹ ಬೇರೆ ಬೇರೆ ಬಣ್ಣದ ಧ್ವಜಗಳು. ನಾವು ಬೆಂಕಿಯನ್ನು ಧ್ವಜವನ್ನು ಹಾರಿಸಿದವರು. ಸಿಂಹವನ್ನು ಧ್ವಜದಲ್ಲಿ ಹಾರಿಸಿದವರು, ಹಾಡನ್ನು ಧ್ವಜದಲ್ಲಿ ಇಟ್ಟುಕೊಂಡು ಹಾರಿಸಿದವರು, ಹುಲಿಯನ್ನು ಧ್ವಜದಲ್ಲಿ ಹಾರಿಸಿದವರು. ಈ ದೇಶದ ಬಹುಸಂಖ್ಯಾತ ಜನ ಏನು ಇದ್ದೇವೆ, ಮೂಲ ಭಾರತೀಯರು ನಮ್ಮ ಸಂಸ್ಕೃತಿ

ಬೇರೆ. ಆ ಕಾರಣ ಇವರು ನಡೆಸುತ್ತಾ ಇರುವಂತಹ ಚಟುವಟಿಕೆಗಳು ಏನು ಇವೆ ಇವರು ಬೇಕಾದರೆ ಖಾವಿ ಧ್ವಜಕ್ಕೆ ಸಮಾನ ಗೌರವ ಕೊಡುತ್ತೇವೆ ಎಂದು ಹೇಳುವಂತಹ ಹಕ್ಕು ಉಂಟು ನನಗೆ ಗೊತ್ತು.

ಸಂವಿಧಾನದಲ್ಲಿ ಅವರಿಗೆ ಕೊಡಲೇಬೇಕು. ಅಮೇರಿಕಾದಲ್ಲಿ ಒಂದು ಜನಾಂಗ ಇದೆ. ಜಹೋವ ವಿಟ್ನೆಸೆಸ್ ಜಹೋವ ವಿಟ್ನೆಸೆಸ್ ಅಂತ ಅದನ್ನು ಯಹೋವ ವಿಟ್ನೆಸೆಸ್ ಅಂತ ಹೇಳಬೇಕು. ಅದು ಕ್ರಿಶ್ಚಿಯನ್ ಜನಾಂಗದಲ್ಲಿ ಒಂದು ಭಾಗ. ಅವರು ಮತ್ತು ಅವರ ಮಕ್ಕಳು ಶಾಲೆಗಳಲ್ಲಿ ರಾಷ್ಟ್ರಗೀತೆ ಹಾಡುವಾಗ ನಮಸ್ಕಾರ ಮಾಡುವುದಿಲ್ಲ. ಅವರು ಕೂಡ ರಾಷ್ಟ್ರಧ್ವಜಕ್ಕೆ ನಮಸ್ಕಾರ ಮಾಡುವುದಿಲ್ಲ. ಇದರ ಬಗ್ಗೆ ಚರ್ಚೆ ನಡೆದು ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಉಂಟು. ಅವರ ನಿಜವಾದ ನಂಬಿಕೆ ಯಾವುದೇ ಚಿಹ್ನೆಗೆ ನಮಸ್ಕಾರ ಮಾಡುವುದಿಲ್ಲ ಎನ್ನುವುದಾದರೆ ಅವರು ಮಾಡಬೇಕಾಗಿಲ್ಲ ಎಂದು ಕೂಡ ಆಗಿದೆ. ಅದೇ ರೀತಿ ಇವರು ಖಾವಿ ಧ್ವಜಕ್ಕೆ ಸಮಾನ ಗೌರವ ಕೊಡಬಹುದು, ಅದು ಬೇರೆ ವಿಚಾರ.

6.55 ಪಿ.ಎಂ.

~~ಆದರೆ ಅಪಾರ್ಥಘೋಷಿತನಮಾಡಿ ಈ ರಾಷ್ಟ್ರಧ್ವಜವನ್ನು ಯಾವುದೋ ಉದ್ದೇಶಕ್ಕೆ~~ ಬಳಸಿಕೊಳ್ಳುವಂತಹ ಪ್ರಯತ್ನ ನಡೆಸುತ್ತಿದ್ದರೆ ಅದರಿಂದ ಸಾಮಾಜಿಕ ಕ್ಷೋಭೆ ತರುವಂತಹ ಪರಿಣಾಮಗಳಾಗುತ್ತಿದ್ದರೂ ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲದೇ ಇರುವಂತಹ ಸ್ವಾಮೀಜಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದೇ ರೀತಿ ಇಂತಹವರ ಮೇಲೂ ಕ್ರಮ ತೆಗೆದುಕೊಳ್ಳಬೇಕಾಗಿದೆ. ಅಂಥಾದ್ದನ್ನು ಸರ್ಕಾರ ದಯಮಾಡಿ ಆಲೋಚನೆ ಮಾಡಬೇಕು. ನಾನ್ಯಾಕೆ ವಿಚಿತ್ರ ಪರಿಸ್ಥಿಯಲ್ಲಿದ್ದೇವೆಂದು ಹೇಳಿದೆಯೆಂದರೆ, Unfortunately, this Government is making a big issue out of a non-issue. ಶಾವಿದನ್ನು ಬಗೆಹರಿಸಬಹುದಿತ್ತು. ಏನು ಸಮಸ್ಯೆ ಇಲ್ಲ, ಮುಖ್ಯಮಂತ್ರಿಗಳ ಜೊತೆ ಹೋದ ಗಣರಾಜ್ಯೋತ್ಸವದ ಎರಡು ದಿವಸ ಮುಂಚೆ ಮಾತನಾಡಿದ್ದೆ. ಅದಕ್ಕೆ ಮುಂಚೆ ಸನ್ಮಾನ್ಯ ಹಿಂಡಸಗೇರಿಯವರ ಜೊತೆಯೂ ನಾನು ಚರ್ಚೆ ಮಾಡಿದ್ದೆ. ಅಲ್ಲಿ ಮುಸ್ಲೀಮರ ಯಾರೂ ವಿರೋಧ ಇಲ್ಲ. ರಾಷ್ಟ್ರಧ್ವಜ ಹಾರಿಸುವುದಕ್ಕೆ. ಅವರೆಲ್ಲ ಸಿದ್ಧವಾಗಿದ್ದಾರೆ. ಅವರು ರಾಷ್ಟ್ರಪ್ರೇಮಿಗಳು. ನನ್ನ ದೃಷ್ಟಿಯಲ್ಲಿ ಅವರೂ ಮೂಲಭಾರತೀಯರೇ. ಇದನ್ನು ನಾನು ಮುಸ್ಲಿಂ ಬಾಂಧವರಿಗೂ ಹೇಳಲೇಬೇಕು. ಅವರೇನು ಹೊರಗಡೆಯಿಂದ ಬಂದವರೇನಲ್ಲ, ಅವರೆಲ್ಲ ನಮ್ಮ ದೇಶದವರೇ. ಈ ಹಿಂದೂಧರ್ಮದ ಹೇಸಿಗೆ ತಡೆಯಲಾರದೆ ಮತಾಂತರ ಆದವರು. ಕೇರಳದಲ್ಲಿ ಇವತ್ತು ಬಹಳ ದೊಡ್ಡಸಂಖ್ಯೆಯಲ್ಲಿ ಮುಸ್ಲೀಮರಿದ್ದರೆ ಅಲ್ಲಿ ನಂಬೂದಿರಿ-ಹಿಂದೂ ಆಚರಣೆಗಳನ್ನು ಸಹಿಸಲಾರದೆ ಮತಾಂತರ ಆದವರು. ಕೇರಳದ ಕ್ರಿಶ್ಚಿಯನ್ನರೂ ಮೂಲಭಾರತೀಯರೇ, ಅವರು ಹಿಂದೂಧರ್ಮದ ಹೇಸಿಗೆ ತಡೆಯಲಾದರೆ ಮತಾಂತರರಾದವರು. ನಾನು ಆಕಸ್ಮಿಕವಾಗಿ ವೀರಶೈವ ಧರ್ಮಕ್ಕೆ ಸೇರಿದವನು. ನಾನು ಅದರಲ್ಲೆಲ್ಲ ನಂಬಿಕೆ ಇಲ್ಲದೇ ಇದ್ದರೂ ನಾನೊಬ್ಬ ರ್‍ಯಾಶನಲಿಷ್ಟ್, ನಮ್ಮ ಸದಸ್ಯರಿಗೆ ತಿಳಿಸುವುದಕ್ಕೋಸ್ಕರ ಇದು, ನಾನು ಯಾವತ್ತೂ ಇದನ್ನು ಹೇಳಿಕೊಂಡಿಲ್ಲ, ಆದರೆ ಇವತ್ತು ಏಕೆ ಹೇಳುತ್ತಿದ್ದೇನೆ ಎಂದರೆ ವೀರಶೈವ ಧರ್ಮ ಕೂಡ ಕರ್ನಾಟಕದಲ್ಲಿ ಹಿಂದೂಧರ್ಮದ ಹೇಸಿಗೆ ತಡೆಯಲಾರದೆ ಹುಟ್ಟಿಕೊಂಡ ಒಂದು ಧರ್ಮ. ನನಗೂ ಹಿಂಡಸಗೇರಿಯವರಿಗೂ ಏನೂ ವ್ಯತ್ಯಾಸ ಇಲ್ಲ, ನಾನೂ ಮೂಲಭಾರತೀಯ, ಹಿಂಡಸಗೇರಿಯವರೂ ಮೂಲಭಾರತೀಯರು, ಸಗೀರ್ ಅಹಮದ್ ಮೂಲಭಾರತೀಯರು. ಆ ಕಾರಣ ಪರಿಹಾರ ಕಂಡುಕೊಳ್ಳಬೇಕಾದರೆ ನಮ್ಮ ಉಚ್ಚನ್ಯಾಯಾಲಯದ ತೀರ್ಪಿನ ಕೊನೇ ಅಂಶ ಒಂದು ಓದಿ ಹೇಳುತ್ತೇನೆ. ಸರ್ಕಾರಕ್ಕೇನು ತಡೆಯಾಜ್ಞೆಯಿಲ್ಲ ಹೈ ಕೋರ್ಟಿನಿಂದ, ಹಿಂಡಸಗೇರಿಯವರ ಜೊತೆ ನಾನು ಮಾತನಾಡಿದಾಗ ನಮಗೆ ತಡೆಯಾಜ್ಞೆ ಇದೆ ಅದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದರು, ನಿಜ.

ಸರ್ಕಾರದ ವಿರುದ್ಧ ತಡೆಯಾಜ್ಞೆ ಇಲ್ಲ. ಕೊನೆಯದಾಗಿ, ಸಾರ್ವಜನಿಕರಿಗೆ ಇನ್‌ಬ್ರಾಕೆಟ್ ಮುಸ್ಲಿಂ ಸಮುದಾಯದವರನ್ನೂ ಒಳಗೊಂಡು ಈ ಮೈದಾನವನ್ನು ತಮಗೆ ತಿಳಿದಂತೆ ಬಳಸಲು ಯಾವುದೇ ಸಾಂಪ್ರದಾಯಿಕ ಹಕ್ಕುಗಳು (Customary rights) ಇಲ್ಲ. ಸಾರ್ವಜನಿಕರಿಗಿಲ್ಲ, ಸರ್ಕಾರಕ್ಕಿದೆ. ತಮಗೆ ಕಳೆದ ಗಣರಾಜ್ಯೋತ್ಸವಕ್ಕೆ ಎರಡು ದಿವಸದ ಹಿಂದೆ ಹೇಳಿದ್ದು ನೆನಪಿರಬೇಕು. ಸರ್ಕಾರಿ ಕಾರ್ಯಕ್ರಮ ಮಾಡಿ ಧ್ವಜ ಹಾರಿಸಿ ಈ ಸಮಸ್ಯೆ ಮುಗಿಸಿ; ಇವತ್ತೂ ಮಾಡಬಹುದು. ಸರ್ವಪಕ್ಷಗಳದ್ದಾದರೂ ಆಗಬಹುದು, ಸರ್ಕಾರಿ ಕಾರ್ಯಕ್ರಮವೇ ಆಗಬಹುದು. ನಾವೆಲ್ಲ ಭಾಗವಹಿಸುತ್ತೇವೆ. ಇಂತಹ ಒಂದು ಕೆಲಸ ತಾವು ದಯವಿಟ್ಟು ಮಾಡಬೇಕು. ಮತ್ತೆ ಸಂಘ ಪರಿಹಾರದ ಬಳಗ ಏನಿದೆ ಅವರು ಏನು ಚಟುವಟಿಕೆ ಮಾಡುತ್ತಿದ್ದಾರೆ ಅವುಸಂವಿಧಾನಬದ್ಧವೋ ಸಂವಿಧಾನಬಾಹಿರವೋ ಇದನ್ನು ಕೂಡಲೇ ತಾವು ಗಮನಕ್ಕೆ ತೆಗೆದುಕೊಂಡು ಸರಿಯಾದ ಕ್ರಮ ಜರುಗಿಸಬೇಕು. ಇದನ್ನು ನಾವು ಪ್ರಾರಂಭದಲ್ಲೇ ಮಾಡದಿದ್ದರೆ Even under the representation of the peoples' Act. these organisations could have been banned long time back. ನಮ್ಮ ಪ್ರಿಯಾಂಬಲ್‌ಗೆ ವಿರುದ್ಧವಾದ ಚಟುವಟಿಕೆ ನಡೆಸುತ್ತಿರುವ ಸಂಘಗಳು ಇವು; ಫಂಡಮೆಂಟಲ್ ಡ್ಯೂಟೀಸ್ ಎಂದು ಸಂವಿಧಾನದಲ್ಲಿ ಏನು ಹೇಳಿದ್ದೇವೋ ಫಂಡಮೆಂಟಲ್ ರೈಟ್ಸ್‌ಗೆ ಕೊಟ್ಟಿರುವ ಸ್ಥಾನಮಾನ ಫಂಡಮೆಂಟಲ್ ಡ್ಯೂಟೀಸ್‌ಗೂ ಇದೆ. ಅದರ ವಿರುದ್ಧ ಕೆಲಸ ಮಾಡುವಂತಹ ಯಾವುದೇ ಸಂಘ ಈ ದೇಶದಲ್ಲಿರಬಾರದು. ಅದಕ್ಕೆ ಕೂಡಲೇ ನಿಷೇಧ ಹಾಕುವಂತಹ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಬೇಕೆಂದು ಹೇಳಿ, ನನ್ನ ಮಾತು ಮುಗಿಸುತ್ತೇನೆ.

ಶ್ರೀ ಚೌಡರೆಡ್ಡಿ (ಗೃಹಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 15-8-94ರಂದು ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಬಗ್ಗೆ ಹೇಳಿಕೆ ನೀಡುತ್ತಿದ್ದೇನೆ.

ಹುಬ್ಬಳ್ಳಿಯ ಈದ್ಗಾ ಮೈದಾನವು ಸುಮಾರು ಒಂದು ಎಕರೆ ಐದು ಗುಂಟೆ 76 ಚದುರ ಗಜಗಳು ಇದ್ದು, ಹುಬ್ಬಳ್ಳಿ ನಗರದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದ ಸಮೀಪದಲ್ಲಿದೆ. ಈ ಜಮೀನನ್ನು ಅಂದಿನ ಹುಬ್ಬಳ್ಳಿ ಪುರಸಭೆಯು ಗುತ್ತಿಗೆ ಆಧಾರದ ಮೇಲೆ ವರ್ಷಕ್ಕೆ ಒಂದು ರೂಪಾಯಿಯಂತೆ 999 ವರ್ಷಗಳಿಗೆ ಅಂಜುಮಾನ್-ಇ-ಇಸ್ಲಾಂ ಸಂಸ್ಥೆಗೆ ನೀಡಲು 5-8-21 ರಂದು ಠರಾವು ಮಾಡಲಾಗಿತ್ತು. ಸದರಿ ಕ್ರಮವನ್ನು ಅಂದಿನ ಮುಂಬಾಯಿ ಸರ್ಕಾರವು ದಿನಾಂಕ 11-1-1922ರಲ್ಲಿ ದೃಢೀಕರಿಸಿತು. ತದನಂತರ 1960ರಲ್ಲಿ ಅಂದಿನ ಪುರಸಭಾ ಆಡಳಿತಾಧಿಕಾರಿಯು ಒಂದು ಮಾರ್ಪಾಡು ಆಜ್ಞೆಯನ್ನು ಹೊರಡಿಸಿ ಮೇಲೆ ಹೇಳಿದ ಸಂಸ್ಥೆಗೆ ಅಂಗಡಿಗಳನ್ನು ಕಟ್ಟಲು ಪರವಾನಿಗೆಯನ್ನು ನೀಡಿದರು. ದಿನಾಂಕ 30-3-1962 ರಂದು ಈ ಸಂಸ್ಥೆಯು ಒಂದು ಬಾಡಿಗೆ ಕರಾರನ್ನು ಹುಬ್ಬಳ್ಳಿ ಪುರಸಭಾಧಿಕಾರಿಯ ಪರವಾಗಿ ಅಂದಿನ ಸರ್ಕಾರದ 9-2-1962ರ ಆಜ್ಞೆಯಂತೆ ಕರಾರು ಮಾಡಿಕೊಂಡಿತು.

ದಿನಾಂಕ 18-6-1971ರಲ್ಲಿ ಈ ಸಂಸ್ಥೆಯು ಪುರಸಭೆಯಿಂದ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆಯನ್ನು ಪಡೆಯಿತು. ಸದರಿ ಪರವಾನಿಗೆಯ ಅವಧಿಯನ್ನು ದಿನಾಂಕ 17-6-1972ರ ವರೆಗೆ ವಿಸ್ತರಿಸಲಾಗಿತ್ತು. ಈ ಸಂಸ್ಥೆಯು ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದಾಗ ಕೆಲವು ಸ್ಥಳೀಯ ಜನರು ವಿರೋಧಿಸಿದರು. ಈ ವಿವಾದವು ಅಂದಿನಿಂದ ನಡೆಯುತ್ತಲೇ ಇದೆ.

ದಿನಾಂಕ 31-7-1972ರಂದು ಸ್ಥಳೀಯ ವ್ಯಾಪಾರಸ್ಥರು ಹುಬ್ಬಳ್ಳಿ ಮುನ್ಸಿಫ್ ನ್ಯಾಯಾಲಯದಲ್ಲಿ ಹುಬ್ಬಳ್ಳಿ ಪುರಸಭೆಯ ಆದೇಶವನ್ನು ಪ್ರಶ್ನಿಸಿ ದಾವೆ ಹೂಡಿದರು (ದಾವೆ ಸಂಖ್ಯೆ : 359 :72). ಸದರಿ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಅಂಜುಮಾನ್-ಇ-ಇಸ್ಲಾಂ ಸಂಸ್ಥೆಯು ಹುಬ್ಬಳ್ಳಿ ಅಪರ ಸಿವಿಲ್ ನ್ಯಾಯಾಲಯದಲ್ಲಿ

ಮೇಲ್ಮನವಿ ಸಲ್ಲಿಸಿತು. ದಿನಾಂಕ 12.10.1982ರಲ್ಲಿ ಸದರಿ ನ್ಯಾಯಾಲಯವು ತೀರ್ಪು ನೀಡಿತು. ಈ ತೀರ್ಮಾನದ ವಿರುದ್ಧ ಮೇಲೆ ಹೇಳಿದ ಸಂಸ್ಥೆಯು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದಾಗ, ದಿನಾಂಕ 18-6-1992ರಂದು ಸದರಿ ನ್ಯಾಯಾಲಯವು ಹುಬ್ಬಳ್ಳಿ ಅಪರ ಸಿವಿಲ್ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. ಸಂಸ್ಥೆಯು ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ನ್ಯಾಯಾಲಯವು ದಿನಾಂಕ 23-9-1992ರಲ್ಲಿ ತಡೆಯಾಜ್ಞೆ ನೀಡಿ ಸಂಸ್ಥೆಯು ಕಟ್ಟಿರುವ ಕಟ್ಟಡಗಳನ್ನು ಕೆಡವದಿರುವಂತೆ ಆಜ್ಞೆ ಮಾಡಿರುತ್ತದೆ. ಈ ವಿವಾದವು ಇನ್ನೂ ಇತ್ಯರ್ಥವಾಗಬೇಕಾಗಿದೆ.

ಭಾರತೀಯ ಜನತಾ ಪಾರ್ಟಿಯವರು ದಿನಾಂಕ 26-1-1992 ರಂದು ಕಾಶ್ಮೀರದಲ್ಲಿ ಧ್ವಜಾರೋಹಣ ಮಾಡುವ ಸಮಯದಲ್ಲಿಯೇ ಹುಬ್ಬಳ್ಳಿಯಲ್ಲೂ ರಾಷ್ಟ್ರಧ್ವಜ ಹಾರಿಸಲು ಕರೆ ನೀಡಿದರು. ಆದರೆ, ಈ ಸ್ಥಳವು ವಿವಾದಗ್ರಸ್ತವಾಗಿರುವುದರಿಂದ ಇದನ್ನು ತಡೆಯಲಾಯಿತು. ಮುಂದೆ ದಿನಾಂಕ 15-8-1992 ಮತ್ತು 26-1-1993ರಂದು ಪುನಃ ಧ್ವಜಾರೋಹಣ ಮಾಡಲು ಕರೆಕೊಟ್ಟಾಗಲೂ ಕೂಡ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಯಿತು. ರಾಷ್ಟ್ರಧ್ವಜ ಸಂರಕ್ಷಣಾ ಸಮಿತಿಯ ಸದಸ್ಯರು 1993ರಲ್ಲಿ ಈ ವಿಷಯವನ್ನು ಕರ್ನಾಟಕದ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಿ ಈ ಸ್ಥಳದಲ್ಲಿ ರಾಷ್ಟ್ರಧ್ವಜ ಹಾರಿಸಲು ಅನುಮತಿ ನೀಡಬೇಕೆಂದು ರಿಟ್ ಮೂಲಕ ಕೋರಿತು. ಆದರೆ, ನ್ಯಾಯಾಲಯವು ಮಧ್ಯಂತರ ಆದೇಶ ನೀಡಿ, ಭಾರತೀಯ ಜನತಾ ಪಕ್ಷದವರ ಕೋರಿಕೆಯನ್ನು ಪರಿಶೀಲಿಸಬೇಕೆಂದು ಸರ್ಕಾರಕ್ಕೆ ತಿಳಿಸಿತು. ಆದರೆ, ಈ ವಿವಾದವು ನ್ಯಾಯಾಲಯದಲ್ಲಿರುವುದರಿಂದ, ಸರ್ಕಾರವು ಅನುಮತಿ ನೀಡದೇ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿತು. 15-8-1993 ಹಾಗೂ 26-1-1994 ರಂದು ಪುನಃ ಧ್ವಜಾರೋಹಣ ಮಾಡಲು ಕರೆ ಕೊಟ್ಟಾಗಲೂ ಕೂಡ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಯಿತು.

ಹುಬ್ಬಳ್ಳಿ ನಗರದಲ್ಲಿ ಸಾಂಪ್ರದಾಯಕವಾಗಿ ನೆಹರು ಮೈದಾನದಲ್ಲಿ ಸರ್ಕಾರದ ವತಿಯಿಂದ ಸ್ವಾತಂತ್ರೋತ್ಸವವನ್ನು ಆಚರಿಸಲಾಗುತ್ತಿದೆ. ಅಲ್ಲಿ ಎಲ್ಲೆಡೆಯೂ ನಡೆಯುವಂತೆ ಗೌರವ ರಕ್ಷೆ ಮತ್ತು ಇತರ ವಿವಿಧ ಪ್ರದರ್ಶನಗಳೊಂದಿಗೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ದಿವಸವೂ ಸಹ ಅಲ್ಲಿ ಧ್ವಜಾರೋಹಣ ನಡೆಯಿತು. ಗಣ ರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿವಸದಂದು ಎಲ್ಲಾ ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಿಗದಿ ಪಡಿಸಿದ ಸ್ಥಳದಲ್ಲಿ ಧ್ವಜಾರೋಹಣವನ್ನು ಮಾಡಲಾಗುತ್ತಿದೆ. ಅಲ್ಲಿ ಸಾರ್ವಜನಿಕರನ್ನು ಆಹ್ವಾನಿಸಿ ಇಂತಹ ರಾಷ್ಟ್ರ ಉತ್ಸವದ ದಿನಗಳಲ್ಲಿ ಅವರಿಗೆ ಭಾಗವಹಿಸಲು ಅನುವು ಮಾಡಿಕೊಡಲಾಗುತ್ತಿದೆ. ಈ ಸ್ಥಳವು ವಿವಾದಗ್ರಸ್ತವಾಗಿರುವುದರಿಂದ ಇಲ್ಲಿ ಧ್ವಜಾರೋಹಣಕ್ಕೆ ಕೆಲವು ರಾಜಕೀಯ ಪಕ್ಷಗಳು ಕರೆ ನೀಡಿದ್ದರಿಂದ ಅದನ್ನು ತಡೆಹಿಡಿಯದಿದ್ದಲ್ಲಿ ಅದರ ಪರಿಣಾಮವು ಬಹಳ ಗಂಭೀರವಾಗಿ ರಾಜ್ಯಾದ್ಯಂತ ಹಬ್ಬುವ ಸಂಭವ ಇತ್ತು. ಆದುದರಿಂದ ಇದನ್ನು ತಡೆಗಟ್ಟಲು ಎಲ್ಲಾ ತರಹದ ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗಿತ್ತು.

ದಿನಾಂಕ 15-8-1994ರಂದು ವಿವಾದಗ್ರಸ್ತ ಈದ್ಗಾ ಮೈದಾನದಲ್ಲಿ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಮತ್ತು ಇತರೆ ಮುಖಂಡರು ಧ್ವಜ ಹಾರಿಸುವ ಕರೆ ಕೊಟ್ಟ ಬಗ್ಗೆ ಮುಂಜಾಗ್ರತೆ ಕ್ರಮವಾಗಿ ಹುಬ್ಬಳ್ಳಿ ನಗರದಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು ಮತ್ತು ಕೆಲವು ಮುಖಂಡರನ್ನು ಬಂಧಿಸಲಾಗಿತ್ತು. ದಿನಾಂಕ 15-8-1994ರ ಬೆಳಿಗ್ಗೆ ಸುಮಾರು 6.30 ರಿಂದ 7.30 ಗಂಟೆಯ ಸಮಯದಲ್ಲಿ ಕೆಲವು ಜನರು ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲು ಪ್ರಯತ್ನಿಸಿದಾಗ ಪೋಲೀಸರು ಸದರಿ ಪ್ರಯತ್ನವನ್ನು ವಿಫಲಗೊಳಿಸಿದರು. ಅದೇ ದಿನ ಸುಮಾರು 10.55ರ ಸಮಯದಲ್ಲಿ ನಿಷೇಧಾಜ್ಞೆಯನ್ನು ಉಲ್ಲಂಘಿಸಿದ್ದಾಗಿ ಕುಮಾರಿ ಉಮಾಭಾರತಿ ಹಾಗೂ ಅವರ ಅನುಯಾಯಿಗಳನ್ನು ಬಂಧಿಸಲಾಯಿತು.

ಸುಮಾರು 12-30ರ ವೇಳೆಗೆ ವಿಧಾನಸಭಾ ಸದಸ್ಯರಾದ ಶ್ರೀ ಯಡಿಯೂರಪ್ಪ ಅವರು 5000 ಬೆಂಬಲಿಗರೊಂದಿಗೆ ಬೆಂಡಿಗೇರಿ ಪೋಲೀಸ್ ಠಾಣೆಯ ವ್ಯಾಪ್ತಿಯ ರಾಧಾಕೃಷ್ಣ ಗಲ್ಲಿಯಲ್ಲಿ ಕಾಣಿಸಿಕೊಂಡರು. ಆ ಜನರ ಗುಂಪು ಕರ್ಫ್ಯೂ ಆದೇಶವನ್ನು ಉಲ್ಲಂಘಿಸಿ ಕಾನೂನುಬಾಹಿರವಾಗಿ ಸಭೆ ಸೇರಿದರು ಮತ್ತು ಈದ್ಗಾ ಮೈದಾನದತ್ತ ನಡೆದರು. ಪೋಲೀಸರು ಅಶ್ರುವಾಯುಗಳನ್ನು ಪ್ರಯೋಗಿಸಿ, ಲಾಠಿ ಪ್ರಹಾರಗಳನ್ನು ಪ್ರಯೋಗಿಸುವ ಮೂಲಕ ಜನರನ್ನು ತಡೆಯಲು ಪ್ರಯತ್ನಿಸಿದರು. ಅವು ಉದ್ರಿಕ್ತ ಜನಜಂಗುಳಿಯನ್ನು ನಿಯಂತ್ರಿಸಲು ಈ ಕ್ರಮ ಪರಿಣಾಮಕಾರಿಯಾಗದೆ ಇದ್ದುದರಿಂದ, ಪೋಲೀಸರು ಗಾಳಿಯಲ್ಲಿ ಗುಂಡುಹಾರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಬೇಕಾಯಿತು. ಈ ಪ್ರಕ್ರಿಯೆಯಲ್ಲಿ 28 ಮಂದಿ ಪೋಲೀಸರಿಗೆ ಕಲ್ಲೇಟಿನ ಗಾಯಗಳಾದವು. ಶ್ರೀ ಯಡಿಯೂರಪ್ಪನವರು ಇತರರೊಂದಿಗೆ ದಸ್ತಗಿರಿಯಾದರು.

ಸುಮಾರು 12-30ರ ಸಮಯದಲ್ಲಿ 3 ರಿಂದ 4 ಸಾವಿರ ಜನರು ಗುಂಪು ಸೇರಿಕೊಂಡು ವಿಜಯೋತ್ಸವವನ್ನು ಆಚರಿಸುವಂತೆ ತಿಳಿಸಿ, ಕುಮಾರಿ ಉಮಾ ಭಾರತಿಯವರ ಭಾಷಣ ಕೇಳಲು ದೇಶಪಾಂಡೆ ನಗರದ ಹತ್ತಿರದಲ್ಲಿದ್ದ ಸವಾಯಿ ಗಂಧರ್ವ ಕಲಾ ಮಂದಿರದ ಮುಂದ ನರದಿದ್ದರು. ಈ ಸ್ಥಳವು ಈದ್ಗಾ ಮೈದಾನದಿಂದ ಸುಮಾರು 1.5 ಕಿ.ಮೀ. ದೂರದಲ್ಲಿದೆ. ಕುಮಾರಿ ಉಮಾ ಭಾರತಿಯವರನ್ನು ಈಗಾಗಲೇ ದಸ್ತಗಿರಿ ಮಾಡಿದ್ದು, ಭಾಷಣ ಮಾಡಲು ಅವಕಾಶ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದಾಗ, ಜನಜಂಗುಳಿಯಲ್ಲಿ ವಿಧ್ವಂಸಕ ಕೃತ್ಯಗಳು ಕಾಣಿಸಿಕೊಂಡವು. ಕೂಡಲೇ ಸುಮಾರು 40 ಜನರನ್ನು ಬಂಧಿಸಿ, ನ್ಯಾಯಾಂಗ ಸುಪರ್ದಿಗೆ ಒಪ್ಪಿಸಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸೊಂದರಲ್ಲಿ ತಾಲ್ಲೂಕು ದಂಡಾಧಿಕಾರಿಗಳ ಮುಂದೆ ಹಾಜರುಪಡಿಸಲು ಕರೆದುಕೊಂಡು ಹೋಗಬೇಕೆನ್ನುವಾಗ, ಜನರ ಗುಂಪು ಬಸ್ಸನ್ನು ಸುತ್ತುವರೆದು, ಪೋಲೀಸರನ್ನು ಕಂಗೆಡಿಸಿ ದಸ್ತಗಿರಿಯಾದ 40 ಜನರನ್ನು ಒತ್ತಾಯಪೂರ್ವಕವಾಗಿ ಬಿಡಿಸಿಕೊಂಡಿತು. ಈ ದಸ್ತಗಿರಿಯಾದವರನ್ನು ಕರೆದುಕೊಂಡು ಹೋಗಲು ಬಂದಿದ್ದ ಮುಂಗಾವಲು ಪೋಲೀಸರನ್ನು ಜನರು ಸುತ್ತುವರೆದು, ಅವರ ಮೇಲೆ ಕಲ್ಲು ತೂರಾಟ ಮತ್ತು ಅವರಿದ್ದ ವಾಹನಕ್ಕೆ ಅವರ ಸಮೇತ ಬೆಂಕಿಹಚ್ಚುವ ಯತ್ನಗಳು ನಡೆದವು. ಇದನ್ನು ತಡೆಯಲು ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿದರು. ಆದರೂ ಸಹ ಪರಿಸ್ಥಿತಿ ಹತೋಟಿಗೆ ಬರಲಿಲ್ಲ, ಮತ್ತೇ ಲಾಠಿ ಚಾರ್ಜ್ ಮಾಡಿ, ರಬ್ಬರ್ ಗುಂಡುಗಳ ಪ್ರಯೋಗ ಮಾಡಲಾಯಿತು. ಇವೆಲ್ಲದರಿಂದ ಉದ್ರಿಕ್ತ ಗುಂಪನ್ನು ನಿಯಂತ್ರಿಸಲು ಸಾಧ್ಯವಾಗದಿದ್ದಾಗ, ಗೋಲೀಬಾರ್ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಯಿತು. ಈ ಗೋಲೀಬಾರ್ನಿಂದ ನಾಲ್ಕು ಜನರು ಮರಣ ಹೊಂದಿದ್ದು, ಒಬ್ಬ ಅಸಿಸ್ಟೆಂಟ್ ಕಮಾಂಡಂಟ್, ಒಬ್ಬ ಪೋಲೀಸ್ ಅಧೀಕ್ಷಕ ಹಾಗೂ 22 ಮಂದಿ ಪೋಲೀಸ್ ಸಿಬ್ಬಂದಿಯವರು ಕಲ್ಲು ತೂರಾಟದಲ್ಲಿ ಗಾಯಗೊಂಡರು. ಉದ್ರಿಕ್ತ ಗುಂಪಿನಿಂದ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು, ಪೋಲಿಸ್ ವಾಹನಗಳು ಜಖಂಗೊಂಡವು.

ತದನಂತರ, ಉದ್ರಿಕ್ತ ಗುಂಪೊಂದು ಅಶೋಕನಗರ, ದೇಶಪಾಂಡೆ ನಗರ, ವಿದ್ಯಾನಗರ, ಮಾರ್ಗವಾಗಿ ಕೆ.ಎಂ.ಸಿ. ಆಸ್ಪತ್ರೆಯ ಕಡೆಗೆ ಧಾವಿಸಿ, ಆಸ್ಪತ್ರೆಯ ಶವಾಗಾರವನ್ನು ಸುತ್ತುವರಿದು ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಯವರ ಮೇಲೆ ಕಲ್ಲುತೂರಿತ್ತಲ್ಲದೆ ಅವರ ಮೇಲೆ ಕೈ ಮಾಡಿತು. ಹಾಗೂ ಸದರಿ ಅಧಿಕಾರಿಗಳ ವಾಹನಗಳನ್ನು ಸುಟ್ಟು ಹಾಕಿತು. ಆಸ್ಪತ್ರೆಯ ಹತ್ತಿರದಲ್ಲೇ ಇದ್ದ ಒಂದು ಪೋಲಿಸ್ ತುಕ್ಕಡಿಯು ಕೂಡಲೇ ಅಲ್ಲಿಗೆ ಧಾವಿಸಿ ಲಾಠಿ ಪ್ರಹಾರ ಹಾಗೂ ಟಿ.ಜಿ. ಶೆಲ್ಗಳನ್ನು ಉಪಯೋಗಿಸಿ ಗುಂಪನ್ನು ಚದುರಿಸಲು ಪ್ರಯತ್ನಿಸಿತಾದರೂ ಹತೋಟಿ ತಪ್ಪಿದಾಗ ಅನಿವಾರ್ಯವಾಗಿ ಗೋಲೀಬಾರ್ ಮಾಡಲಾಯಿತು. ಈ ಪ್ರಕರಣದಲ್ಲಿ ಮೂರು ಜನರಿಗೆ ಗಾಯಗಳಾಗಿ ಅವರೊಲ್ಲೊಬ್ಬರಾದ ಶಿರಹಟ್ಟಿಯ 22 ವಯಸ್ಸಿನ ಶ್ರೀ

ಪ್ರಸನ್ನಕುಮಾರ್ ದೋಂಡಿಸಾ ರಾನಡೆ ಅವರು ಕೆ.ಎಂ.ಸಿ. ಆಸ್ಪತ್ರೆಯ ಆವರಣದಲ್ಲಿ ಮೃತಪಟ್ಟರು.

ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು ಮೇಲ್ವಿಚಾರಣೆ ಮಾಡಲು ದಿನಾಂಕ: 15-8-1994ರಂದು ಹುಬ್ಬಳ್ಳಿಗೆ ಧಾವಿಸಿದರು. ಹೆಚ್ಚುವರಿ ಪೊಲೀಸ್ ಪಡೆಯನ್ನು ಸಹ ಒದಗಿಸಲಾಯಿತು.

ಭಾರತೀಯ ಜನತಾ ಪಕ್ಷದವರು ದಿನಾಂಕ : 16-8-1994ರಂದು ಹುಬ್ಬಳ್ಳಿ ಬಂದ್ ಆಚರಣೆಗೆ ಮತ್ತು ರಾಜ್ಯದ ಎಲ್ಲಾ ಕಡೆ ಕಪ್ಪುಬಾವುಟ ಪ್ರದರ್ಶನಕ್ಕೆ ಕರೆ ನೀಡಿದ್ದರಿಂದಾಗಿ, ಎಲ್ಲಾ ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ, ಪೊಲೀಸ್ ಆಯುಕ್ತರುಗಳಿಗೆ ಮತ್ತು ಪೋಲಿಸ್ ಅಧೀಕ್ಷಕರುಗಳಿಗೆ ಯಾವುದೇ ಅನುಚಿತ ಘಟನೆಯು ನಡೆಯುವುದನ್ನು ತಡೆಯುವಂತೆ ಅದರಲ್ಲೂ ವಿಶೇಷವಾಗಿ ಗಲಭೆ ಸಂಭವನೀಯ ಪ್ರದೇಶಗಳಲ್ಲಿ ಅಗತ್ಯ ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಯಿತು.

ದಿನಾಂಕ : 17-8-1994 ರಂದು ಹುಬ್ಬಳ್ಳಿಯಲ್ಲಿ ಜನ ಜೀವನ ಸಾಮಾನ್ಯವಾಗಿತ್ತು. ಅಂದು ಶಾಲಾ-ಕಾಲೇಜುಗಳು ತೆರೆದಿದ್ದವು. ಯಾವ ತರಹದ ಅಹಿತಕರ ಘಟನೆಗಳು ನಡೆದಿಲ್ಲ.

ದಿನಾಂಕ : 16-8-1994 ರಿಂದ 18-8-1994ರವರೆಗೆ ನಗರದಲ್ಲಿ ಯಾವ ಅಹಿತಕರ ಘಟನೆಯು ನಡೆಯದೆ ಪರಿಸ್ಥಿತಿಯು ಹತೋಟಿಯಲ್ಲಿತ್ತು.

ದಿನಾಂಕ 19-8-1994ರಂದು ಸರ್ಕಾರದ ರಾಜೀನಾಮೆ ಕೇಳಿ ಸುಮಾರು 2000 ರಿಂದ 3000 ಜನರ ಗುಂಪು ಸೇರಿ ಹುಬ್ಬಳ್ಳಿಯ ಮೇದರ್ ಓಣಿಯಲ್ಲಿ ಸಭೆ ನಡೆಸಿದರು. ಈ ಸಭೆ ಮುಗಿದು ಗುಂಪು ಹೋಗುತ್ತಿರುವಾಗ ತುಳಜಾ ಭವಾನಿ ಗುಡಿಯ ಹತ್ತಿರ ಸುಮಾರು 1.30ರ ಸಮಯದಲ್ಲಿ ಪೋಲೀಸರ ವ್ಯಾನಿಗೆ ಕಲ್ಲುತೂರಿ, ಸುತ್ತುವರಿದು ಪೋಲೀಸ್ ವ್ಯಾನಿನ ಚಾಲಕನ ಗುಂಡೇಟಿನಿಂದ ಶ್ರೀಮತಿ ಸುಬ್ಬವ್ವ ಫಕೀರಪ್ಪ ಶಿರಗುಪ್ಪಿ ಎಂಬ ಮಹಿಳೆಯು ಮರಣ ಹೊಂದಿದಳು. ಈ ಸಂದರ್ಭದಲ್ಲಿ ಚಾಲಕನನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆ. ಇಲ್ಲಿಯವರೆಗೆ ಒಟ್ಟು 13 ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ.

ಸರ್ಕಾರವು ಸಾರ್ವಜನಿಕರಿಂದ ಪ್ರತಿಕೂಲ ಪ್ರತಿಕ್ರಿಯೆ ಮತ್ತು ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ಉಚ್ಛ ನ್ಯಾಯಾಲಯದ ನಿವೃತ್ತ ಅಥವಾ ಹಾಲೀ ನ್ಯಾಯಾಧೀಶರ ನೇತೃತ್ವದಲ್ಲಿ ಹುಬ್ಬಳ್ಳಿಯ ಘಟನೆಯ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯುವಂತೆ ನಿರ್ಧರಿಸಿದೆ.

ಈ ಘಟನೆಯಲ್ಲಿ ಮೃತ ಪಟ್ಟವರಿಗೆ ಹಾಗೂ ಗಾಯಗೊಂಡವರಿಗೆ ಪರಿಹಾರ ನೀಡಲು ತೀರ್ಮಾನ ತೆಗೆದುಕೊಂಡಿರುತ್ತದೆ.

+ ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೃಹ ಸಚಿವರು ವಿವರವಾದಂಥ ಹೇಳಿಕೆಯನ್ನು ಈ ಚರ್ಚೆಗೆ ಉತ್ತರವಾಗಿ ಮತ್ತು ಘಟನೆಯ ವಾಸ್ತವ ಪರಿಸ್ಥಿತಿಯನ್ನು ಈ ಸದನದ ಗಮನಕ್ಕೆ ತಂದಿದ್ದಾರೆ. ನಾನು ಹೆಚ್ಚು ಮಾತುಗಳನ್ನು ಲಂಬಿಸದೆ ಕೆಲವಾರು ಪ್ರಶ್ನೆಗಳು ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಹಿರಿಯ ಸದಸ್ಯರು ಎತ್ತಿರುವ ಕಾರಣದಿಂದ ಕೆಲವು ಅಂಶಗಳನ್ನು ಮಾತ್ರ ಪೂರಕವಾಗಿ ಈಗ ಉತ್ತರ ಕೊಡುವುದಕ್ಕೆ ನಾನು ಅಪೇಕ್ಷೆಪಡುತ್ತಿದ್ದೇನೆ. ಈಗ ಏನು ನಿಲುವಳಿ ಸೂಚನೆಯನ್ನು ಎತ್ತಬೇಕು ಎಂದು ಹೇಳಿ ಇಲ್ಲಿ ಪ್ರಾಸ್ತಾವಿಕವಾಗಿ ಚರ್ಚೆ ನಡೆಯಿತು. ಈ ಪ್ರಶ್ನೆಯನ್ನು ಬಹಳ ವಿಸ್ತಾರವಾಗಿ ನಮ್ಮ ಮಾನ್ಯ ಬಿಜೆಪಿ ಸದಸ್ಯರಾರಂಥ, ನಾಯಕರಾದಂಥ ಯಡಿಯೂರಪ್ಪನವರು

ಎತ್ತಿದ್ದಾರೆ. ಈ ಚರ್ಚೆಯಿಂದ ಒಂದು ಪ್ರಶ್ನೆ ಬಹಳ ನಿಚ್ಚಳವಾಗಿ ಉದ್ಭವವಾಗಿದೆ; ಒಡಮೂಡಿದೆ. ಅದೇನು ಎಂದು ಹೇಳಿದರೆ, ಈದ್ಗಾ ಮೈದಾನದಲ್ಲಿ ಗೋಲಿಬಾರ್ ಆದದ್ದು ಬಾವುಟವನ್ನು ಹಾರಿಸುವುದರಿಂದಲ್ಲ ಆ ಸಂದರ್ಭದಲ್ಲಿ ಗೋಲೀಬಾರ್ ಆಗಲಿಲ್ಲ. ಈಗಾಗಲೇ ಹೇಳಿಕೆ ಕೊಟ್ಟಂತೆ ದೇಶಪಾಂಡೆ ನಗರದಲ್ಲಿ ಗೋಲಿಬಾರ್ ಆಯಿತು. ಅವರು ಹೇಳುವಂಥ ಹೇಳಿಕೆ ಪ್ರಕಾರ ವಿಜಯೋತ್ಸವ ನಡೆಸುವಾಗ ಗೋಲಿಬಾರ್ ಆಯಿತು. ಫ್ಲಾಗ್ ಹಾಯಿಸ್ಟಿಂಗ್ ಮಾಡತಕ್ಕಂಥ ಸಂದರ್ಭದಲ್ಲಿ ಅಲ್ಲ. ಆ ಪರಿಸರದಲ್ಲೂ ಆಗಲಿಲ್ಲ. ಆ ಜಾಗದಲ್ಲೂ ಕೂಡ ಆಗಲಿಲ್ಲ. ಆದ್ದರಿಂದ ಬಿಜೆಪಿ ನಾಯಕರು ಈ ದೇಶದಲ್ಲಿ ನಾಡಿನಲ್ಲಿ ಅಂದರೆ ಅಲ್ಲಿ ಈದ್ಗಾ ಮೈದಾನದಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸುವಾಗ, ಅದಕ್ಕೆ ಪ್ರಯತ್ನ ಮಾಡಿದಾಗ ಗೋಲಿಬಾರ್ ಆಗಿದೆ ಎಂದು ಏನು ತಾವು ತೋರಿಸುವುದಕ್ಕೆ ಇವತ್ತು ಹೋಗುತ್ತಿದ್ದೀರಿ, ಇದು ಯಥಾಸ್ಥಿತಿಯಲ್ಲ. ಇದು ವಾಸ್ತವಾಂಶವಲ್ಲ. ಇದನ್ನು ಇವತ್ತು ಈ ಸ್ವರೂಪಕ್ಕೆ ಕೊಂಡು ಹೋಗತಕ್ಕಂಥ ಒಂದು ಕಟ್ಟುಕತೆ ಇದು. ಏಕೆಂದರೆ ಅವರ ಹೇಳಿಕೆಯ ಪ್ರಕಾರವೇ ಆರುಮುಕ್ಕಾಲು ಗಂಟೆಗೆ ನಾವು ಮಾಡಿದ್ದೇವೆ. ಇದು ಒಂದು ಕಡೆ ನಿರ್ಮಿಸುವುದಕ್ಕೆ ಪ್ರಯತ್ನ ಮಾಡಿದೆ. 6-45ಕ್ಕೆ ಬೆಳಿಗ್ಗೆ ಧ್ವಜಾರೋಹಣ. 11-30 ರಿಂದ 12-30 ರವರೆಗೆ ವಿಜಯೋತ್ಸವ. ಇದು ಎಲ್ಲಾ ಕಡೆ ನಡೆದಿದೆ. ನಮ್ಮ ಪ್ರತಾಪಚಂದ್ರಶೆಟ್ಟರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದರು. ಅಲ್ಲಿ ಐದು ಜನರು ಸತ್ತಿದ್ದಾರೆ. ನೀವು ಹೇಳಿದ ಹಾಗೆ ನಿಮ್ಮ ಪಕ್ಷಕ್ಕಾಗಿ ಬಲಿ ಕೊಟ್ಟಿದ್ದಾರೆ. ತಮ್ಮ ಜೀವನವನ್ನು ಬಲಿಕೊಟ್ಟಿದ್ದಾರೆ. ಇಡೀ ಕರ್ನಾಟಕ ರಾಜ್ಯದ ಎಲ್ಲೆಡೆ 11-30, 12-00 ಗಂಟೆಗೆ ಪಟಾಕಿ ಹಾಕಿದಿರಿ. ಅವರ ಮರಣದ ವಿಜಯೋತ್ಸವವನ್ನು ನಡೆಸಿದಿರಿ. ಸ್ವಲ್ಪ ಇದನ್ನು ಅರ್ಥ ಮಾಡಿಕೊಳ್ಳಬೇಕು. ರಾಜ್ಯದ ಜನರು ಇದನ್ನು ಅರ್ಥಮಾಡಿಕೊಳ್ಳಬೇಕು. ಇವತ್ತು ನಿಜವಾದಂಥ ಒಂದು ತಮಗೆ ಆ ಸತ್ತವರ ಮೇಲೆ ಒಂದು ಮರುಕ ಇದ್ದಿದ್ದರೆ ನಿಮ್ಮಲ್ಲಿ ಆ ಹೃದಯ ಇರುತ್ತಿದ್ದರೆ 11-30, 12-30, 1-00 ಗಂಟೆಗೆ ಎಲ್ಲಾ ಕಡೆಗೆ ಮಧ್ಯಾಹ್ನ ಪಟಾಕಿ ಹೊಡೆಸಿ ಎಲ್ಲಾ ಕಡೆಯೂ ನೀವು ವಿಜೃಂಭಣೆಯಿಂದ ವಿಜಯೋತ್ಸವವನ್ನು ನಡೆಸುತ್ತಿರಲಿಲ್ಲ. ಸಂಜೆತನಕ ಪಟಾಕಿಯನ್ನು ಎಲ್ಲಾ ಕಡೆಯಲ್ಲೂ ಹೊಡೆದಿದ್ದಾರೆ. ವರದಿಯನ್ನು ತರಿಸಿ ನಿಮ್ಮ ಹೃದಯಶೂನ್ಯತೆಯನ್ನು ಒಂದು ಸಾಕ್ಷಾತ್ಕಾರವನ್ನು ಇವತ್ತು ನಾಡಿನಲ್ಲಿ ತೋರಿಸಿಕೊಟ್ಟಿದ್ದೀರಿ. ಅದನ್ನು ನಾನು ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ಎರಡು ಲಕ್ಷ ಜನರನ್ನು ಹುಬ್ಬಳ್ಳಿಗೆ ಕಳುಹಿಸಬೇಕು ಎಂದು ಈ ಬಾರಿ ಆಲೋಚನೆಯನ್ನು ನೀವು ಮಾಡಿದ್ದೀರಿ. ಅದರ ಬಗ್ಗೆ ಸಾಕಷ್ಟು ಹೇಳಿಕೆಗಳು ಇವೆ.

ಎರಡು ಲಕ್ಷ ಜನ ನಾವು ಹೋಗುತ್ತೇವೆ. ಫೈರಿಂಗ್ ಆದರೂ ಎದುರಿಸುತ್ತೇವೆ, ಲಾಠಿ ಛಾರ್ಜ್ ಆದರೂ ಎದುರಿಸುತ್ತೇವೆ ಎಂದು ಹೇಳಿದ್ದೀರಿ. ಫ್ಲಾಗ್ ಹಾಯಿಸ್ಟಿಂಗ್ ಎರಡು ಲಕ್ಷ ಜನ ಏಕೆ? ಇದು ಫ್ಲಾಗ್ ಹಾಯಿಸ್ಟಿಂಗ್ ಎರಡು ಲಕ್ಷ ಜನಾನೋ ಅಥವಾ ಈ ರಾಜ್ಯದ ಜನರ ಮಾರಣ ಹೋಮ ಮಾಡಲಿಕ್ಕೆ ಎರಡು ಲಕ್ಷ ಜನರನ್ನು ಕೊಂಡು ಹೋಗುತ್ತಿದ್ದೀರೋ? ತಾವು ದಯಮಾಡಿ ಉತ್ತರವನ್ನು ದೇಶಕ್ಕೆ ಕೊಡಬೇಕು. ಈ ನಾಡಿಗೆ ಕೊಡಬೇಕಾಗುತ್ತದೆ. ಬಾಬರಿ ಮಸೀದಿಯ ದುರಂತ ಈಗಲೂ ಕೂಡ ನಮ್ಮ ಮುಂದೆ ಇದೆ. ನಮ್ಮ ರಾಜ್ಯದಲ್ಲಿ ಏನೂ ಆಗಿಲ್ಲ ಎಂದು ನೀವು ಹೇಳುತ್ತೀರಿ. ಬಾಬರಿ ಮಸೀದಿಯಿಂದ ಏನು ಇಡೀ ದೇಶದಲ್ಲಿ ದೇಶ ಬೆಂಕಿ ಹತ್ತಿ ಉರಿಯತಕ್ಕಂಥ ರೀತಿಯಲ್ಲಿ ಸಾವಿರಾರು ಜನರು ಇವತ್ತು ಸತ್ತಿದ್ದಾರೆ, ಇದಕ್ಕೆ ನೀವು ನೇರವಾಗಿ ಹೊಣೆ. ಸುಪ್ರೀಂ ಕೋರ್ಟ್ ಜಾತಿವಾದಿಯ ಪಕ್ಷಗಳು ನೀವು ಎಂದು ಸರ್ಟಿಫಿಕೇಟ್ ಕೊಟ್ಟಿದೆ; ಕೋಮುವಾದಿ ಶಕ್ತಿಗಳು ಎಂದು ಹೇಳಿದೆ. ಏಕೆಂದರೆ ಮಧ್ಯಪ್ರದೇಶ, ಉತ್ತರ ಪ್ರದೇಶ ಇಂತಹ ರಾಜ್ಯಗಳನ್ನು ಕೇಂದ್ರ ಸರ್ಕಾರ ಬರ್ಖಾಸ್ತು ಮಾಡಿದಾಗ ಅದರ ಮೇಲೆ ನೀವು ಶ್ರೇಷ್ಠ ನ್ಯಾಯಾಲಯಕ್ಕೆ

ಅಪೀಲು ಕೊಟ್ಟಾಗ ಅವರು ಏನು ತೀರ್ಪು ಕೊಟ್ಟರು. ದೆ ಆರ್ ರೈಟ್ ಇನ್ ಡಿಸ್ಮಿಸಿಂಗ್. ಏಕೆಂದರೆ ಈ ದೇಶದ ಸಂವಿಧಾನದಲ್ಲಿ ಜಾತಿಯ, ಕೋಮುವಾದಿಯ ಆಡಳಿತಕ್ಕೆ ಇಲ್ಲಿ ಅಧಿಕಾರ ಇಲ್ಲ ಎಂದು ತೀರ್ಪು ಕೊಟ್ಟ ಮೇಲೆ ನಿಮಗೆ ಮರ್ಯಾದೆಯಿದ್ದರೆ ನಿಮ್ಮ ಪಕ್ಷವನ್ನು ಬರ್ಖಾಸ್ತು ಮಾಡಬೇಕು. ನಿಮಗೆ ಮರ್ಯಾದೆ ಇದ್ದರೆ ನಿಮ್ಮ ನಾಯಕರೆಲ್ಲ ರಾಜೀನಾಮೆ ಕೊಡಬೇಕು. ಸುಪ್ರೀಂ ಕೋರ್ಟಿನ ರಾಷ್ಟ್ರದ ಅತ್ಯುನ್ನತವಾದಂತಹ ನ್ಯಾಯಾಲಯದ ತೀರ್ಪಿನಲ್ಲಿ, ನಿಮಗೆ ಕಾನೂನು ಬೇಕಾಗಿಲ್ಲ. ಸುಪ್ರೀಂ ಕೋರ್ಟ್ ನಿಮಗೆ ಗಣ್ಯ ಅಲ್ಲ. ಸುಪ್ರೀಂ ಕೋರ್ಟಿಗೆ ಅಶ್ಯೂರೆನ್ಸ್ ಕೊಟ್ಟು ಬಾಬರಿ ಮಸೀದಿಯನ್ನು ಉರುಳಿಸುವುದಿಲ್ಲ ಎಂದು ಹೇಳಿ ನಿಮ್ಮ ಸರ್ಕಾರ ಯು.ಪಿ.ಯಲ್ಲಿದ್ದಂತಹುದು ಮಾಡಿದಂತಹ ಕೆಲಸ, ಸುಪ್ರೀಂ ಕೋರ್ಟಿನ ಸಮಾಧಿ ಮಾಡಿದಂತಹ ಕೆಲಸ. ರಾಜ್ಯದ ಜನರ ಸಮಾಧಿ ಮಾಡುತ್ತೀರಿ. ರಾಷ್ಟ್ರದ ಜನರ ಸಮಾಧಿ ಮಾಡುತ್ತೀರಿ; ಸುಪ್ರೀಂ ಕೋರ್ಟಿನ ಸಮಾಧಿ ಮಾಡುತ್ತೀರಿ. ಆ ಉಚ್ಚ ನ್ಯಾಯಾಲಯವನ್ನು ಸಮಾಧಿ ಮಾಡುತ್ತೀರಿ. ನೀವು ಬಾಬರಿ ಮಸೀದಿ ಕೆಡವಿದ್ದು ಅಲ್ಲ. ಸುಪ್ರೀಂ ಕೋರ್ಟನ್ನು ಕೆಡವಿದ್ದು. ಈ ವಿಚಾರ ಸ್ವಲ್ಪ ನೆನಪು ಮಾಡಿಕೊಳ್ಳಿ. ಇನ್ನಾದರೂ ನಿಮ್ಮಲ್ಲಿ ಆಲೋಚಾದರೂ ವಿವೇಕ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸನ್ಮಾನ್ಯ ವಾಜಪೇಯಿ ಅವರ ಹೇಳಿದ್ದರು. ನಾನು ಪಶ್ಚಾತ್ತಾಪ ಪಡುತ್ತೇನೆ, ದೇಶದ ಜನರ ಮುಂದೆ ಕ್ಷಮಾಪಣೆ ಬೇಡುತ್ತೇನೆ ಎಂದು ಹೇಳಿದ್ದರು. ಆ ಕ್ಷಮಾಪಣೆ ಇವತ್ತು ಎಲ್ಲಿ ಹೋಯಿತು? ನಿಮಗೆ ಆ ರಕ್ತದ ದಾಹ ಇನ್ನೂ ಹಿಂಗಿಲ್ಲ.

ಸಾಕಾಗಿಲ್ಲ ನಿಮಗೆ. ಇನ್ನೂ ನಿಮಗೆ ಬಾಚಿ ತಿನ್ನಬೇಕು ಈ ದೇಶದ ಜನರ ಜೀವವನ್ನು. ಅದಕ್ಕೆ ನಾವು ಪ್ರೋತ್ಸಾಹ ಕೊಡಬೇಕು, ಬೆಂಬಲ ಕೊಡಬೇಕು, ಅಲ್ಲಿ ನಿಮ್ಮನ್ನು ಮೆರವಣಿಗೆಯಲ್ಲಿ ಸ್ವಾಗತ ಮಾಡಬೇಕು. ಇದನ್ನು ನಿರೀಕ್ಷೆ ಮಾಡಿದ್ದರೆ ಇದು ಸಾಧ್ಯ ಇಲ್ಲ. ಇದು ಸಾಧ್ಯತೆ ಇಲ್ಲದೇ ಇರತಕ್ಕದ್ದು. ತಾವು ಕ್ರೊನಾಲಜಿ ನೋಡಿ. ಏನು ಘಟನೆ ನಡೆದಿದೆ ಎಂದು. 6.45 ಕ್ಕೆ ಫ್ಲಾಗ್ ಹಾಯಿಸ್ಟಿಂಗ್ ಆಗಿದೆ ಎಂದು ಫ್ಲಾಗ್ ಹಾಯಿಸ್ಟ್ ಮಾಡಿದ್ದರೆ, ಫ್ಲಾಗ್ ಹಾಯಿಸ್ಟಿಂಗ್ ಮಾಡಿದ ಮೇಲಾದರೂ ನೀವು ಹೊರಗೆ ಬರಬಹುದಿತ್ತಲ್ಲ. ಏಕೆ 11.30, 12.30ವರೆಗೆ ಕಾದಿದ್ದಿರಿ, ಏಕೆ ಯಾರ ಮನೆಯಾಳಗೋ ಕದ್ದು ಕುಳಿತುಕೊಳ್ಳಬೇಕಿತ್ತು, ಕುಮಾರಿ ಉಮಾ ಭಾರತಿ ಏಕೆ ಕದ್ದು ಕುಳಿತುಕೊಳ್ಳಬೇಕಾಗಿತ್ತು? ವಿಜಯೋತ್ಸವ. ಫ್ಲಾಗ್‌ಹಾಯಿಸ್ಟ್ ಆದ ಮೇಲೆ ನಿಮ್ಮ ಕೆಲಸ ಆಯಿತಲ್ಲ. ಏಳು ಗಂಟೆಗೆ ಬರಬೇಕಿತ್ತಲ್ಲ. ಮೆರವಣಿಗೆ ಹೋಗಬಹುದಿತ್ತು. ಏಕೆ 12.30 ಕ್ಕೆ ಬಂದಿರಿ. This itself will falsify the case. Why should they wait upto 12.30 PM?

12.30 ರವರೆಗೆ ಏಕೆ ಕಾಯಬೇಕಿತ್ತು? ಅಂದರೆ ನೀವು 12.30 ಕ್ಕೆ ಹೊರಗೆ ಬಂದಿದ್ದು ನೀವು ಹತಾಶ ಭಾವನೆಯಿಂದ .As a desparte leaders, you have to come out. ಹೊರಗೆ ಬಂದಿದ್ದೀರಿ ಏಕೆ, ಇವತ್ತು ಆ ಜನರ ಪ್ರಾಣ ತೆಗೆಯಲಿಕ್ಕೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ...

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ಎಲ್ಲಾ ಹೇಳಿದ್ದೀರಿ. ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವಾಗ ಯೀಲ್ಡ್ ಆಗಿದ್ದೆ, ತಾವು ಆ ಸೌಜನ್ಯ ತೋರಿಸಿ.

ಶ್ರೀ ಎಂ.ವೀರಪ್ಪ ಮೊಯಿಲಿ : ಸೌಜನ್ಯತೆ ತೋರಿಸುತ್ತೇವೆ. ಸೌಜನ್ಯತೆ ನಮ್ಮಲ್ಲಿ ಬಹಳ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವಾಗ ಯೀಲ್ಡ್ ಆಗಿದ್ದೀರಿ. ತಾವು ಆವೇಶಕ್ಕೆ ಒಳಗಾಗಬೇಡಿ : ತಾವು ಹೇಳಿದಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಮಾಡಿದ ಕೆಲಸಕ್ಕೆ ದುಃಖದಿಂದ ನಾವು ಹೇಳುತ್ತಿದ್ದೇವೆ. ನಮ್ಮ ಕಣ್ಣೀರು ಇನ್ನೂ ಬತ್ತಲ್ಲ : ಇನ್ನೂ ಉಳಿದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದಿರಿ. ಅವತ್ತು 11.30 ಕ್ಕೆ ವಿಜಯೋತ್ಸವ ಆಚರಿಸಿದಿರಿ : ಅಲ್ಲಿ ಗುಂಡು ಬಿದ್ದು ಜನ ಸಾಯುತ್ತಿದ್ದರೆ ಎಂದು. ತಮಗೆ ಗೊತ್ತಿರಲಿ, ಗುಂಡು ಹಾರಿಸಿದ್ದುದು 12.30 ರ ನಂತರ ; ಎರಡನೆಯದು ತಾವು ಕೇಳಿದಿರಿ, 12.30ರವರೆಗೆ ಅಡಗಿದ್ದಿರಿ ಎಂದು. 12.30ಕ್ಕೆ ನಾವೆಲ್ಲ ಹೊರಗಡೆ ಹೊರಡಬೇಕೆಂದು ತೀರ್ಮಾನ ಮಾಡಿದ್ದೆವು. ಅದರಂತೆ ಹೊರಗಡೆ ಹೊರಟೆವು ಆದರೆ ವಿರುದ್ಧ ದಿಕ್ಕಿನಲ್ಲಿ ವಿಜಯೋತ್ಸವ ಆಚರಿಸುವುದಕ್ಕೆ ಹೋದೆವು, ರಾಷ್ಟ್ರ ಧ್ವಜ ಹಾರಿಸಿದ್ದಕ್ಕೆ. ಆಗ ಗೋಲೀಬಾರ್ ಮಾಡಿ ಮಾರಣ ಹೋಮ ಮಾಡಿ, ಕೊಲೆಗಡುಕ ಕೆಲಸ ಮಾಡಿದಂತಹವರು ಈ ನಾಡಿನ ಜನರ ಮುಂದೆ ನೀವು ಕ್ಷಮಾಪಣೆ ಕೇಳಬೇಕು. ಪ್ರಾಯಶ್ಚಿತ್ತ ನೀವು ಅನುಭವಿಸಬೇಕು : ಯಡಿಯೂರಪ್ಪ ಅಲ್ಲ.

ಗುಂಡು ಹಾರಿಸಿದ್ದು ನಾನೇ? ಸರ್ಕಾರ ನನ್ನದಿದೆಯೇ? ಶಾಂತವಾಗಿದ್ದು ದೇಶಪಾಂಡೆ ನಗರದಲ್ಲಿ ವಿನಾಕಾರಣ ಗುಂಡು ಹಾರಿಸಿದಿರಿ. ಈ ಹಿನ್ನೆಲೆಯಲ್ಲಿ ರಾಜ್ಯದ ಜನತೆಯಲ್ಲಿ ಕ್ಷಮಾಪಣೆ ಕೇಳಿ ಕುರ್ಚಿ ಬಿಟ್ಟು ಮನೆಗೆ ಹೋಗಬೇಕಾಗಿರುವಂಥ ನೀವು ಆವೇಶ ಭರಿತರಾಗಿ ಏನೇನೋ ಮಾತನಾಡುತ್ತಿದ್ದೀರಿ. ಪೋಲೀಸ್ ಇಲಾಖೆಯನ್ನು ದುರುಪಯೋಗಪಡಿಸಿಕೊಂಡು ರಾಷ್ಟ್ರ ಧ್ವಜಾರೋಹಣ ಮಾಡುವುದನ್ನು ತಡೆದು ಇವೊತ್ತು ರಾಜ್ಯದ• ನಾಲ್ಕೂವರೆ ಕೋಟಿ ಜನರು ತಲೆತಗ್ಗಿಸುವಂಥ ಕೆಲಸ ಮಾಡಿದ್ದೀರಿ,• ಐದು ಜನ ಅಮಾಯಕರನ್ನು ಗುಂಡಿಟ್ಟು ಕೊಂದಿದ್ದೀರಿ. ಇದರ ಬಗ್ಗೆ ನೀವು ಏನು ಉತ್ತರ ಕೊಡುತ್ತೀರಿ? ಒಬ್ಬ ಮುಖ್ಯಮಂತ್ರಿಯಾಗಿ ಜವಾಬ್ದಾರಿಯಿಂದ ಮಾತನಾಡಿ. ಅದು ವಿವಾದಿತ ಸ್ಥಳವೆನ್ನುವುದಕ್ಕೆ ದಾಖಲೆ ಎಲ್ಲಿದೆ? ಈ ಕುರಿತು ಯಾವ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ? Please come out with documents. Don't misguide the House.

ಶ್ರೀ ಆರ್.ವಿ. ದೇಶಪಾಂಡೆ : ಯಡಿಯೂರಪ್ಪನವರು ಒಂದು ಮಾತನ್ನು ಈಗ ಹೇಳಿದರು : ಏನೆಂದರೆ, ಆಗಸ್ಟ, 15 ರಂದು 11.30 ಗಂಟೆಗೆ ಹೊರಗಡೆ ಬರಬೇಕೆಂಬ ನಿರ್ಣಯ ಮಾಡಿಕೊಂಡಿದ್ದೆವು ಎಂದು ಹೇಳಿದರು ಅವರು ಆ ನಿರ್ಣಯವನ್ನು ಆಗಸ್ಟ 13 ಇಲ್ಲವೇ 14 ನೇ ತಾರೀಖು ಮಾಡಬಹುದು. ಈ ರಾಷ್ಟ್ರದ ಎಲ್ಲಾ ಕಡೆಗಳಲ್ಲಿಯೂ ಆಗಸ್ಟ 15 ರಂದು ಬೆಳಿಗ್ಗೆ 9 ಗಂಟೆಯೊಳಗಾಗಿ ಧ್ವಜರೋಹಣ ಕಾರ್ಯಕ್ರಮವನ್ನು ಮುಗಿಸಿಲಾಗುತ್ತದೆ. ಇವರಿಗೆ ನಿಜವಾದ ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿ ಇದ್ದಿದ್ದರೆ 11.30 ಗಂಟೆ ನಂತರ ಹೊರಗಡೆ ಏಕೆ ಬರಬೇಕಾಗಿತ್ತು?

ಶ್ರೀ ಬಿ.ಎಸ್. ಯಡಿಯೂರಪ್ಪ : ಕರ್ಫ್ಯೂ ಇದ್ದಂಥ ಸಮಯದಲ್ಲಿ ಹೊರಗಡೆ ಯಾವಾತ್ತಾದರೂ ಬಂದು ಹೋರಾಟ ಮಾಡಿದ್ದರೆ ಏನೆಂದು ನಿಮಗೆ ಗೊತ್ತಾಗುತ್ತಿತ್ತು. ಮನೆಯಲ್ಲಿ ಕುಳಿತುಕೊಂಡು ರಾಜಕಾರಣ ಮಾಡುವಂಥ ನಿಮ್ಮಂಥ ವಿರೋಧಪಕ್ಷದ ನಾಯಕರು ಜನರ ಮುಂದೆ ಯಾವತ್ತಾದರೂ ಬಂದಿದ್ದೀರಾ? ಹೋರಾಟ ಮಾಡುವುದಕ್ಕೆ ಗೊತ್ತಿದೆಯೆ? ಜೀವನದಲ್ಲಿ ಎಂದಾದರೂ ಒಂದು ಸಲ ಹೋರಾಟ ಮಾಡಿದ್ದೀರಾ?

ಶ್ರೀ ಆರ್.ವಿ. ದೇಶಪಾಂಡೆ : ಚುನಾವಣೆಯಲ್ಲಿ ಕೆಳಮನೆಗೆ ನಾನು ಮೂರು ಬಾರಿ ಆರಿಸಿ ಬಂದಿದ್ದೇನೆ.ನಾನೊಬ್ಬ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿ. ನನ್ನ ಕ್ಷೇತ್ರದಲ್ಲಿ ಅಲ್ಪ ಸಂಖ್ಯಾತರ 700 ಮತಗಳಿದ್ದು, ನಿಮ್ಮ ಕ್ಷೇತ್ರದಲ್ಲಿ 50,000 ಮತಗಳಿದ್ದರೂ ತಾವು ಗೆದ್ದು ಬರುವುದಕ್ಕೆ ಕಷ್ಟವಿದೆ, ಇದನ್ನು ಸ್ವಲ್ಪ ವಿಚಾರ ಮಾಡಿ.

ಶ್ರೀ ಎಂ. ವಿ. ವೀರಪ್ಪಮೊಯಿಲಿ : ಆಗಸ್ಟ್ 15 ರಂದು ಬೆಳಗ್ಗೆ 11.30 ಅಥವ 12.30 ರ ನಂತರ ವಿಜಯೋತ್ಸವ ಆಚರಿಸುವ ಕಾರ್ಯಕ್ರಮದ ಬಗ್ಗೆ ನಿರ್ಣಯವನ್ನು ಬಿಜೆಪಿಯವರು ಮೊದಲೇ ಮಾಡಿದ್ದರು. ಅಲ್ಲಿಯತನಕ ಜನರು ಸಾಯಲಿ, ಅವರೆಲ್ಲಾ ಸತ್ತ ನಂತರ ನಿಶ್ಚಿಂತೆಯಿಂದ ಹೊರಗಡೆ ಬಂದು ವಿಜಯೋತ್ಸವ ಆಚರಿಸಬೇಕೆಂದು! ಇದರ ಬಗ್ಗೆ ಹೆಚ್ಚು ವಿಸ್ತಾರವಾಗಿ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಗೋಲೀಬಾರ್ ನಡೆದ ಘಟನೆ ಕುರಿತು ನ್ಯಾಯಾಂಗ ತನಿಖೆ ನೇಮಕ ಮಾಡಲು ಈಗಾಗಲೇ ನಿರ್ಧಾರ ತೆಗೆದುಕೊಂಡಿದ್ದೇವೆ. ಈ ಬಗ್ಗೆ ಶ್ರೇಷ್ಠ ನ್ಯಾಯಾಧೀಶರಿಗೆ ಪತ್ರ ಬರೆಯಲಾಗುತ್ತಿದೆ ಮತ್ತು ಒಬ್ಬರು ಸಿಟ್ಟಿಂಗ್ ಜಡ್ಜ್ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಸಿಟ್ಟಿಂಗ್ ಜಡ್ಜ್ ಆಗದಿದ್ದರೆ. We will go for a retired Judge ಅದರಲ್ಲಿ ತಾವು ಹೇಳಿದ ಎಲ್ಲಾ ವಿಚಾರಗಳಿವೆ.

"Inquiry into the sequence of events ; Circumstances leading to police firing on 15/8/1994 which resulted in death of five persons ...."

ಇವರು ಏನೇನು ಮಾಡಿದ್ದಾರೋ ಅದೆಲ್ಲವೂ ಬರಬಹುದು ಮತ್ತು ನಾವೇನಾದರೂ ತಪ್ಪು ಮಾಡಿದ್ದರೆ ಅದು ಸಹ ಬರುತ್ತದೆ. ತಾವು ಹೇಳುವುದಕ್ಕಿಂತ ಮೊದಲೇ ನಾವು ನ್ಯಾಯಾಂಗ ತನಿಖೆಗೆ ಆದೇಶ ಹೊರಡಿಸಿದ್ದೇವೆ. ಏಕೆಂದರೆ, ಯಾವುದೇ ವಿಚಾರವನ್ನು ಅಡಗಿಸಿಡತಕ್ಕಂಥ ಅಗತ್ಯವಿಲ್ಲ, ಸತ್ಯ ಏನೆಂದು ನಿಚ್ಚಳವಾಗಿ ಎಲ್ಲರ ಮುಂದೆ ಬರಲಿ. ಹಿಂದೆ ಮಧ್ಯಪ್ರದೇಶದಲ್ಲಿ ಯಾವ ಸತ್ಯ ಹೊರಗಡೆ ಬಂತೋ, ಪಾಪ, ನೀವೇನಾದರೂ ಉಳಿಯುತ್ತೀರೋ ಎಂಬ ಭಾವನೆ ನಮ್ಮದಾಗಿದ್ದರೆ ನಿಮ್ಮ ಸತ್ಯ ಕೂಡ ಹೊರಗೆ ಬಂದರೆ ಯಡಿಯೂರಪ್ಪನವರ ಗತಿ ಏನಾಗುತ್ತದೆಂದು ನನಗೆ ಗೊತ್ತಿಲ್ಲ. ಅಂದರೆ, ಚುನಾವಣೆ ಬರಲಿ,ಅದು ಎಷ್ಟು ಬೇಗ ಬರುತ್ತದೆಯೇ ಅಷ್ಟು ಬೇಗ ಬರಲಿ.

ಶ್ರೀ ವಾಟಾಳ್ ನಾಗರಾಜ್ : ತಾವೂ ಏನಾದರೂ ಮಾಡಿ ಒಂದು ತಿಂಗಳೊಗಾಗಿ ವರದಿ ತರಿಸಿ.

Sri M. Verrappa Moily : Whether the quantum of force used was necessary, justified or excess; whether there was any negligence or error of judgement on the part of the police or Excutive Magistrate in dealing with the situation ; and any other matter which is arises from or is connected with the incidents relating to the firing.

ಆದುದರಿಂದ, ಯಾವುದೇ ವಿಚಾರವನ್ನು ಅಡಗಿಸಿಡತಕ್ಕಂಥ ಅಗತ್ಯವೂ ಇಲ್ಲ, ಸತ್ಯ ಏನೆಂದು ಹೊರಗೆ ಬರಲಿ. ಅದನ್ನು ಎದುರಿಸತಕ್ಕಂಥ ನೈತಿಕ ಸ್ಥೈರ್ಯ ನಮಗಿದೆ. ಅದೇ ನೈತಿಕ ಸ್ಥೈರ್ಯ ನಿಮಗಿದೆಯೇ? ಇಲ್ಲವೇ? ಎಂಬ ಬಗ್ಗೆ ತಾವೇ ಆತ್ಮಾವಲೋಕನ ಮಾಡಿಕೊಂಡು ಇದನ್ನು ಎದುರಿಸಬೇಕಾಗುತ್ತದೆ.

ಪ್ರೊ : ಎಂ.ಡಿ. ನಂಡುಂಡಸ್ವಾಮಿ : ಟರ್ಮ್ಸ್ ಆಫ್ ರೆಫೆರೆನ್ಸ್‌ನಲ್ಲಿ ಇನ್ನೊಂದು ವಿಷಯವನ್ನು ಸೇರಿಸಬೇಕು. ಇವರ ಕಾರ್ಯಕ್ರಮಗಳೇನಿತ್ತು, ರಾಷ್ಟ್ರ ಧ್ವಜ ಹಾರಿಸುವುದರಲ್ಲಿ ಅವರು ಬಳಸಬೇಕಾಗಿದ್ದುದು ಅಥವಾ ಬಳಸಿದ್ದು, ವಿಧಾನಗಳು, ರಾಷ್ಟ್ರ ಧ್ವಜಕ್ಕೆ ಸಂಬಂಧಿಸಿದಂತೆ ಕಾನೂನಿನ ಉಲ್ಲಂಘನೆ ಮಾಡಿ ರಾಷ್ಟ್ರ ಧ್ವಜಕ್ಕೇನಾದರೂ ಅಗೌರವವುಂಟು ಮಾಡಿದ್ದಾರೆಯೇ? ಏಕೆಂದರೆ, ಇವರು ಮಂಗಗಳ ಕೈಯಲ್ಲೂ ಸಹ ರಾಷ್ಟ್ರ ಧ್ವಜವನ್ನು ಹಾರಿಸುತ್ತೇವೆಂದು ಘೋಷಿಸಿದ್ದರು !ಮತ್ತು ಎಷ್ಟು ಸಂಖ್ಯೆಯಲ್ಲಿ ಹಾರಿಸುತ್ತೇವೆಂದೂ ಸಹ ಹೇಳಿದ್ದರು. ಇದು ರಾಷ್ಟ್ರ ಧ್ವಜಕ್ಕೆ ಮಾಡುವ ಅವಮಾನ. ಆದ ಕಾರಣ ಇದರಿಂದಾಗಿ ರಾಷ್ಟ್ರ ಧ್ವಜಕ್ಕೆ ಅವಮಾನವೇನಾದರೂ ಆಗಿದೆಯೇ? ಇದು ಟರ್ಮ್ಸ್ ಆಫ್‌ರೆಫೆರೆನ್ಸ್‌ಗೆ ಸೇರಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯಿಲಿ : ಅದನ್ನು ನಾವು ಜನರಲ್ ಆಗಿ ಇಟ್ಟಿದ್ದೇವೆ, ಅದು ಕೊನೆಯ ಅಂಶವಾಗಿ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 19ನೇ ತಾರೀಖಿನಂದು ನಡೆದ ಗೋಲಿಬಾರ್‌ನ ಬಗ್ಗೆ ಸಹಿತ ತನಿಖೆಯಲ್ಲಿ ಸೇರಿಸಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಆ ವಿಷಯ ಇಲ್ಲಿ ಪ್ರಸ್ತಾಪವಾಗಿರುವುದರಿಂದ ನಾನು ಇದರ ಬಗ್ಗೆ ಹೇಳಬೇಕಾಗಿದೆ. There are three firing incidents. The first, second and third firing incidents took place on 15th. The fourth firing took place on 19-8-1994. In the first firing, number of teargas shells used was 32. very heavy teargas shells were used, Rubber Bullets have also been used for four times. Revolver rounds-six times; 303 Rifle Bullets-two times.

All Bullets were fired in the air. They were not fired direct. In the first firing there was no death. No death has taken place. In the second firing the number of teargas cells used-33 rounds Rubber bullets 16 times ; 3 special Bullets-15 times; 303 Bullets-10 times. At that time four deaths have taken place. Number of persons injured-8; There were details regarding injuries due to lathis, stone-felling etc, Large number of police personnel were also hurt. In the third firing near Kmc Hospital-they gone violent. ಅವರು ಕಿತ್ತೂರಿನಲ್ಲಿ ಏನು ಪ್ರತಿಜ್ಞೆ ಮಾಡಿದ್ದಾರೆ ಎನ್ನತಕ್ಕದು ನ್ಯಾಯಾಂಗ ತನಿಖೆಯಲ್ಲಿ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಾಬರಿ ಮಸೀದಿಯನ್ನು ಉರುಳಿಸತಕ್ಕ ಸಂದರ್ಭದಲ್ಲಿ ಅವರು ವಾಯೊಲೇಟ್ ಮಾಡುತ್ತಾರೆ ಎನ್ನುವ ಬಗ್ಗೆ ತಮಗೆ ಅನುಭವವಿತ್ತು, ಅದನ್ನು ತಾವು ನೋಡಿದ್ದೀರಿ. ಆದರೆ ಇವರು ಕಳೆದ ಒಂದೂವರೆ, ಎರಡು ತಿಂಗಳುಗಳಿಂದ ಇದಕ್ಕಾಗಿ ಮಾಡಿದ್ದ ತಯಾರಿಯಿಂದ ಇಡೀ ರಾಜ್ಯದಿಂದ ಜನರನ್ನು ಇದಕ್ಕಾಗಿ ಕರೆಸುತ್ತಾರೆಂದೂ ಸಹ ತಮಗೆ ಗೊತ್ತಿತ್ತು. ಅವರು ವ್ಯಾಯೊಲೇಟ್ ಆಗಿ ಇರುತ್ತಾರೆಂದು ಸಹ ತಮಗೆ ಗೊತ್ತಿತ್ತು. ಆದರೆ ಇದಕ್ಕೆ ತಾವು ಏಕೆ ತಯಾರಾಗಲಿಲ್ಲ? Why did you not prepare for that? What we accuse you of is, that the failure of the Government is here. ನಿಮ್ಮ ಹತ್ತಿರ ಇಂಟಲಿಜೆಂಟ್ಸ್ ವ್ಯವಸ್ಥೆ ಇದೆ, ಹಾಗಿದ್ದರೂ ಸಹ ಇದನ್ನು ಏಕೆ ನಿರೀಕ್ಷೆ ಮಾಡಲಿಲ್ಲ? ನೀವು ಬ್ಲಾಕ್ಕ್ಯಾಟ್ಸ್ ಕಮಾಂಡರ್ಸ್ 10-12 ಜನರನ್ನು ಇಟ್ಟಿದ್ದೀರಿ. you should have thrown them out of Hubli, on the previous night itself.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, In all they had organised about two lakhs people to march into Hubli.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಸ್ಟ್ರೆಂಥ್ನನ್ ನೋಡಿ ಅರ್ಥಮಾಡಿಕೊಳ್ಳಿ. ನಿಮ್ಮ ಗೋಲಿಬಾರ್, ನಿಮ್ಮ ಕರ್ಫ್ಯೂ, ಈ ದೇಶದ ಜನರನ್ನು ಬಗ್ಗಿಸುವುದಕ್ಕೆ ಆಗುವುದಿಲ್ಲ, ಅದಕ್ಕೆ ವಾಪಸ್ ಉತ್ತರವನ್ನು ಕೊಡತಕ್ಕ ಶಕ್ತಿ ಬಿಜೆಪಿಗೆ ಇದೆ ಎನ್ನತಕ್ಕದ್ದನ್ನು ತಾವು ಒಪ್ಪಿಕೊಳ್ಳಿ. You must admit that first.

ಶ್ರೀ ಎಂ. ವೀರಪ್ಪಮೊಯಿಲಿ : ನೀವು ಮರೆತು ಬಿಟ್ಟಿರಿ. You wanted to organise two lakhs people. But ultimately the number of people who came there, may be a few hundreds. It is not all those people who came from outside gathered there. ಹುಬ್ಬಳ್ಳಿಯಲ್ಲಿ ಜನಸಂಖ್ಯೆ ಸಾಕಷ್ಟು ಇದೆ. ಆದರೆ ಕಂಡವರ

ಮಕ್ಕಳನ್ನು ಬಾವಿಗೆ ಹಾಕತಕ್ಕ ಕೆಲಸವಾಯಿತು. ಅಲ್ಲಿ ಕಂಡವರ ಮಕ್ಕಳಿಗೆ ಪ್ರಚೋದನೆಯನ್ನು ಕೊಟ್ಟರು. ಪಾಪದ ಮಕ್ಕಳನ್ನು ಹೊರಗಡೆ ಕಳಿಸಿ ತಾವು ಆರಾಮವಾಗಿ ಉಮಾಭಾರತಿ ಮುಂತಾದವರು ಒಳಗೆ ಸೇರಿಕೊಂಡು ಅಡಗಿ ಕುಳಿತುಕೊಂಡಿರಿ. ಏಕೆ ಈ ಕೆಲಸ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನದಲ್ಲಿ ಮಾತನಾಡಬೇಕಾದರೆ ಗೌರವದಿಂದ ಮಾತನಾಡಬೇಕು. ತಾವೇನು ಮಾತನಾಡಿದ್ದೀರಿ ಅದು ಕಡತಕ್ಕೆ ಹೋಗಿದೆಯೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಅದೆಲ್ಲ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಅದನ್ನು ಸರಿಯೆಂದು ಒಪ್ಪಿಕೊಳ್ಳುವುದಾದರೆ ನನ್ನ ಅಭ್ಯಂತರವೇನಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ನೀವು ಅಮಾಯಕರನ್ನು ಹೊರಗೆ ಕಳುಹಿಸಿ ಹಿಂಬೇಡಿಯಾಗಿ ಏಕೆ ಒಳಗಡೆ ಕುಳಿತುಕೊಳ್ಳಬೇಕಾಗಿತ್ತು? ಇಂಥ ರಾಜಕೀಯವನ್ನು ಏಕೆ ಮಾಡುತ್ತೀರಿ? ಧೈರ್ಯವಿಲ್ಲದ ಕುಹಕತನದ ರಾಜಕೀಯವನ್ನು ಮಾಡಿ ಒಳಗೆ ಕುಳಿತುಕೊಂಡು ಅಮಾಯಕರನ್ನು ಪ್ರಚೋದಿಸಿ ಹೊರಕ್ಕೆ ಕಳಿಸಿ, ಬೆಂಕಿಯನ್ನು ಹಚ್ಚತಕ್ಕ ಕೆಲಸವನ್ನು ಏಕೆ ಮಾಡಿದಿರಿ?

7.25 ಪಿ.ಎಂ.

I know, but I don't want to give the details.

ಬಾಟಲಿ ಒಳಗೆ ಪೆಟ್ರೋಲ್ ಹಾಕಿ they threw at the police ಬಾಟಲ್ ಬಾಂಬ್ಸ್ ಹಾಕಿದರು. ಇದೆಲ್ಲಾ ಸಾಕಷ್ಟು ಆಗಿದೆ. ರಾಜ್ಯದ ಜನತೆಗೆ ಇದು ಗೊತ್ತಾಗಿದೆ. They lost the sympathy of the Hubli people now.... ಮಾಡಿ ಎಸೆದಿದ್ದಾರೆ. They exploded as bombs. ಸೀಮೆಎಣ್ಣೆ, ಪೆಟ್ರೋಲ್ ಹಾಕಿ ಬೆಂಕಿ ಹಚ್ಚಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಬಹುಶಃ ಅವರನ್ನು ಬಿಡುತ್ತಿದ್ದರೆ, ಇಡೀ ಹುಬ್ಬಳ್ಳಿ ಬೆಂಕಿ ಹತ್ತಿ ಉರಿಯುತ್ತರೆ. It is not the question of Muslims or Hindus. It is the question of all the citizens. ವಯಲೆಂಟಾಗಿ ಮಾಡಿದ್ದಾರೆ. K.S.R.P. ಪ್ಲೆಟೂನ್ ಇದೆ. ಬಸ್ಸೆ ಬೆಂಕಿ ಹಾಕಿ ಅವರನ್ನು ಸುಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. Who is responsible for it? They burnt the bus. ನಮ್ಮ ಎಸ್ಕಾರ್ಟ್ಸ್ ಏನು ಇತ್ತು ಆ ಎಸ್ಕಾರ್ಟ್ಸವರನ್ನು They wrongfully confined them and statred attacking them.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೂಳೆ ಗುಡ್ಡದಲ್ಲಿ ನನ್ನನ್ನು ಬಂಧನ ಮಾಡಿ ಏಕೆ ಬಿಟ್ಟಿರಿ? ಡಿ.ವೈ.ಎಸ್.ಪಿ.ಯವರನ್ನು, ನಿಮ್ಮ ಅಸಿಸ್ಟೆಂಟ್ಗಳನ್ನು ಕಳುಹಿಸಿ, ಅಧ್ಯಕ್ಷರೇ ನನ್ನನ್ನು ಅರೆಸ್ಟ್ ಮಾಡಿದ ವಿಷಯ ಬಂದಿದೆಯೇ? ಇಷ್ಟೆಲ್ಲಾ..

Sri M. Veerappa Moily : I am not yielding.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ ಬಿಟ್ಟೆರಿ. 9ನೇ ತಾರೀಖು ರಾತ್ರಿ 11.30ಕ್ಕೆ ಗುಳೇಗುಡ್ಡದಲ್ಲಿ ನನ್ನನ್ನು ಬಂಧನ ಮಾಡಿ ಗೆಸ್ಟ್ ಹೌಸ್ನಲ್ಲಿ ಇಟ್ಟು ಬೆಳಿಗ್ಗೆ ಬಿಟ್ಟಿರಲ್ಲಾ, ಏಕೆ ಬಿಟ್ಟರಿ? ಏಕೆ ಎಂದರೆ, ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿ ಗುಂಡು ಇಟ್ಟು ಕೊಲ್ಲಬೇಕೆಂದು ಸಂಚು ಇತ್ತು. That is your intention.

(Interruptions)

Sri B.S. Yediyurappa : That is your intention. I know that.

(ಗೊಂದಲ)

ಶ್ರೀ ಎನ್.ಬಿ. ನಾಯಕ್ : ಯಡಿಯೂರಪ್ಪನವರು ಏನು ಹೇಳಿಕೊಂಡು ಬಂದಿದ್ದಾರೆ ನೋಡಿ, ಅಮಾಯಕರನ್ನು ಜೈಲಿಗೆ ಕಳುಹಿಸಿ....

(Interruptions)

ಶ್ರೀ ಎಂ. ವೀರಪ್ಪಮೊಯಿಲಿ : ಯಾರ ಮೇಲೆ ಯಾರ ಸಂಚು ಎಂದು ಹೇಳಿ, ಅದು ನಿಮ್ಮ ನಾಲಿಗೆಯಿಂದ ಹೊರಗೆ ಬರುತ್ತಿದೆ. ಅದನ್ನು ಬಾಕಿಯವರು ಹೇಳಬೇಕಾಗಿಲ್ಲ, ನೀವು ಬೆಂಗಳೂರಿಗೆ ಬಂದು ಏನು ಹೇಳಿದಿರಿ. ವೀರಪ್ಪಮೊಯಿಲಿಯವರು ಗೋಲಿಬಾರ್ ನಡೆದ ದಿನ ಹುಬ್ಬಳ್ಳಿಗೆ ಬಂದಿದ್ದರೆ ಜನರು ಅವರನ್ನು ಜೀವಂತವಾಗಿ ಸುಟ್ಟು ಬಿಡುತ್ತಿದ್ದರು.

(ಗೊಂದಲ)

Sri M. Veerappa Moily : That means you wanted it.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವೊತ್ತು ನೀವು ಅಲ್ಲಿಗೆ ಬಂದಿದ್ದರೆ ಜನರು ನಿಮ್ಮನ್ನು ಜೀವಂತವಾಗಿ ಬಿಡುತ್ತಿರಲಿಲ್ಲ; ಕೊಲೆಗಡುಕರಾದ ಮುಖ್ಯಮಂತ್ರಿಯವರನ್ನು ಜನರು ಜೀವಂತವಾಗಿ ಬಿಡುತ್ತಿದ್ದರಾ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೈತಿಕ ಸ್ಥೈರ್ಯ ಇಲ್ಲ, ನೀವು ಅಪರಾಧಿ ಸ್ಥಾನದಲ್ಲಿ ಇದ್ದೀರಿ......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಜೀವಂತ ಬಿಡದೆ ಸುಟ್ಟು ಬಿಡುತ್ತಿದ್ದರು. ಈಗಲೂ ಹೇಳುತ್ತಿದ್ದೇನೆ ಕೊಲೆಗಡುಕರು...

Sri Kagodu Thimmappa : He is brute... Are you human beings....

(ಗೊಂದಲ)

Sri Kagodu Thimmappa : He represents the Government.

(Interruptions)

ಶ್ರೀ ಡಿ.ಬಿ. ಚಂದ್ರೇಗೌಡ : ಕುಲವನ್ನು ನಾಲಿಗೆ ಹೇಳಿತು. ಯಡಿಯೂರಪ್ಪನವರ ಭಾಷೆ ಇದೆಯಲ್ಲಾ ಇದು ಈ ರಾಜ್ಯದ ಮುಖ್ಯಮಂತ್ರಿಯವರನ್ನು ಸುಡುವಷ್ಟು ......

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಶ್ಚಿತವಾಗಿ, ಈ ಅಪರಾಧ ಮಾಡಿದ್ದರೆ ಬಿಡುತ್ತಿರಲಿಲ್ಲ, ಅವೊತ್ತು ನಿಮ್ಮನ್ನು ಬಿಡುತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಲ್ಪ ದಿನ ತಡೆಯಿರಿ, ಗೊತ್ತಾಗುತ್ತದೆ, ಯಾರನ್ನು ಕುರಿತು ಹೇಳುತ್ತಿರುವುದು ಎಂದು ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ತಾವು ಈಗ ಮಾತನಾಡುವುದು ಯಾವುದೂ ಕಡತದಲ್ಲಿ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ ಸ್ವಲ್ಪ ......

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ತಾವು ಕುಳಿತುಕೊಳ್ಳಿ. ತಾವು ಈಗ ಮಾತನಾಡುವುದು ಯಾವುದು ಕಡತದಲ್ಲಿ ಹೋಗುತ್ತಿಲ್ಲ. ಯಾವುದೂ ಕಡತದಲ್ಲಿ ಹೋಗಬಾರದು ಎಂದು ನಾನು ಹೇಳುತ್ತೇನೆ. ತಾವು ಮಾತನಾಡುವುದು ಯಾವುದೂ ಕಡತದಲ್ಲಿ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಹೇಳುತ್ತೇನೆ, ತಾವು ದಯಮಾಡಿ ಕುಳಿತುಕೊಳ್ಳಿ. ಯಡಿಯೂರಪ್ಪನವರೇ, ತಾವು ಕುಳಿತುಕೊಳ್ಳಿ ಸ್ವಲ್ಪ ಹೊತ್ತು.

(ಗೊಂದಲ)

ಅಧ್ಯಕ್ಷರು : ತಾವು ಗಲಾಟೆ ಮಾಡಿದ್ದಲ್ಲಿ ಅದು ಯಾವುದೂ ಕಡತದಲ್ಲಿ ಹೋಗಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ತಾವೆಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅದು ಯಾವುದೂ ಕಡತದಲ್ಲಿ ಹೋಗಿಲ್ಲ, ಕಾಗೋಡು ತಿಮ್ಮಪ್ಪನವರೇ, ತಾವು ಕುಳಿತುಕೊಳ್ಳಿ. ತಾವು ನಾನು ಹೇಳುವುದನ್ನು ಕೇಳುತ್ತೀರೋ ಅಥವಾ ತಾವೇ ಮಾತನಾಡುತ್ತೀರೋ? ಈ ರೀತಿ ನೀವು ನೇರವಾಗಿ ನಿಮ್ಮ ನಿಮ್ಮ ಭಾಷಣಗಳನ್ನು ಶುರು ಮಾಡಿದರೆ ಈ ಕಲಾಪವನ್ನುನಡೆಸುವುದು ಕಷ್ಟವಾಗುತ್ತದೆ.

ಮಾನ್ಯ ಸದಸ್ಯರೊಬ್ಬರು : ಅವರು ಹೇಳುವುದನ್ನು ಬಿಡುತ್ತೀರಿ....

(ಗೊಂದಲ)

ಅಧ್ಯಕ್ಷರು : ಅದು ಅವರಿಗೂ ಅನ್ವಯವಾಗುತ್ತದೆ, ನಿಮಗೂ ಅನ್ವಯವಾಗುತ್ತದೆ. ಯಡಿಯೂರಪ್ಪನವರೇ, ತಾವು ನೇರವಾಗಿ ಯಾವುದೇ ಸದಸ್ಯರ ಬಗ್ಗೆ ಮಾತನಾಡುವುದಕ್ಕಿಂತ ತಮ್ಮದು ಏನಿದೆ ಅದನ್ನು ನನಗೆ ಹೇಳಿ. ಈಗ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುತ್ತಿದ್ದಾರೆ. ಸಮಾಧಾನ ರೀತಿಯಿಂದ ಕೇಳಿ. ತಮಗೆ ಏನಾದರೂ ಉಪಪ್ರಶ್ನೆ ಕೇಳುವುದು ಇದ್ದರೆ .... ನಾನು ಹೇಳುವುದನ್ನು ಸ್ವಲ್ಪ ದಯವಿಟ್ಟು ಕಿವಿಗೊಟ್ಟು ಕೇಳಿ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಯವರನ್ನು ಕೊಲೆ ಮಾಡುತ್ತೇವೆ ಎಂದು ಹೇಳಿದ ಮೇಲೆ, ಈಗ ಅದರ ಬಗ್ಗೆ ಚರ್ಚೆಯಾಗಬೇಕು. ಈಗ ಅವರು ಕ್ಷಮಾಪಣೆ ಕೇಳಬೇಕು. ಸದನದಲ್ಲಿ ಒಬ್ಬ ಮುಖ್ಯಮಂತ್ರಿಯವರನ್ನು ಕೊಲೆ ಮಾಡುತ್ತೇನೆ ಎಂದು ಹೇಳಿದ ಮೇಲೆ ಈ ದೇಶದಲ್ಲಿ ಯಾರು ರಕ್ಷಿಸಬೇಕು ಸ್ವಾಮಿ. ಕೊಲೆಗಡುಕರು ಇವರು. ಅದರ ಬಗ್ಗೆ ಈಗ ಹೇಳಬೇಕು. ಕೊಲೆ ಮಾಡಿಸುತ್ತೇವೆಂದು ಒಪ್ಪಿಕೊಂಡ ಮೇಲೆ ಅವವು ಕ್ಷಮಾಪಣೆ ಕೇಳಿಕೊಳ್ಳಬೇಕು.

ಶ್ರೀ ಎ. ಕೃಷ್ಣಪ್ಪ : ಸದನದಲ್ಲಿ ಈ ಮಾತು ಹೇಳುತ್ತಿದ್ದಾರಲ್ಲ ಇವರಿಗೆ ಎಷ್ಟು ಗರ್ವ ಇರಬೇಕು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ ಕೇಳಿ, ನಾನು ತಮಗೆ ಉಪಪ್ರಶ್ನೆ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ತಾವು ಪದೇಪದೇ ಮಾತನಾಡಿದರೆ ಯಾವ ಕಲಾಪವೂ ಸರಿಹೋಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಮತ್ತೆ ಮತ್ತೆ ಹೇಳಿದರು. ಅದನ್ನು ಅವರು ನಿರಾಕರಣೆ ಮಾಡಲಿಲ್ಲ. "ಸುಡುತ್ತಿದ್ದಿವಿ ಮುಖ್ಯಮಂತ್ರಿಯವರನ್ನು" ಎಂದು.

ಶ್ರೀ ಎಂ.ಪಿ. ವೆಂಕಟೇಶ್ : ಅದು ಚರ್ಚೆಯಾಗಬೇಕು. ಮಾನ್ಯ ಮುಖ್ಯಮಂತ್ರಿಯವರನ್ನು ಸುಡುತ್ತೇವೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಅದನ್ನು ಹೇಳಲಿಲ್ಲ. ಜನ ಸುಡುತ್ತಿದ್ದರು ಎಂದು ಹೇಳಿದೆ. ಜನ ಆ ದಿನ ಜೀವಂತವಾಗಿ ಸುಡುತ್ತಿದ್ದರು ಎಂದು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಏನಾದರೂ ಹುಬ್ಬಳ್ಳಿಗೆ ಹೋಗಿದ್ದರೆ ಜನರು ಜೀವಂತವಾಗಿ ಸುಟ್ಟು ಬಿಡುತ್ತಿದ್ದರು ಎಂದು ಯಡಿಯೂರಪ್ಪನವರು ಸ್ಟೇಟ್ಮೆಂಟ್ ಕೊಟ್ಟಿದ್ದು ನಿಜವೇ ಎನ್ನತಕ್ಕ ಪ್ರಶ್ನೆ ಬಂದಿದೆ. ಅದಕ್ಕೆ ನಾನು, ಹುಬ್ಬಳ್ಳಿಯಲ್ಲಿ ಜನ ಆವತ್ತು ಆಕ್ರೋಶಗೊಂಡಿದ್ದರು, ಅಂತಹ ವಾತಾವರಣದಲ್ಲಿ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದರೆ ಅವರನ್ನು ಜೀವಂತವಾಗಿ ಜನರು ಸುಡತಕ್ಕ ಒಂದು ಪರಿಸ್ಥಿತಿ ಇತ್ತು ಎಂದು ಹೇಳಿದ್ದುದು ನಿಜ. ಇದರ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವುದೂ ನಿಜ, ನಾನು ಆ ರೀತಿ ಹೇಳಿರುವುದು ನಿಜ ಎಂದು ಈಗಲೂ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್: ಅವರು ಜನರಿಗೆ ಪ್ರಚೋದನೆ ಕೊಟ್ಟು ಕೆಲಸ ಮಾಡಿದ್ದಾರೆ. ಇವರಲ್ಲಿ ದೋಷದ ವಿಚಾರವಿದೆ. ರಾಜ್ಯದ ನಾಲ್ಕುವರೆ ಕೋಟಿ ಜನ ಶಾಂತಪ್ರಿಯರಾಗಿದ್ದಾರೆ. ಜಾತ್ಯಾತೀತ ಭಾವನೆ ಈ ರಾಜ್ಯದ ಜನರಲ್ಲಿದೆ. ಅದನ್ನು ಕದಡುವುದೇ ಇವರ ದುಷ್ಕೃತ್ಯ. ಇವರ ಈ ಕುಚೋದ್ಯ ಕಾರ್ಯಕ್ಕಾಗಿ ಮಾತ್ರ. ಯಾವುದನ್ನು ಜನರು ಮಾಡಲು ಇಚ್ಛಿಸುವುದಿಲ್ಲವೋ ಅದನ್ನು ಮಾಡಿಸಬೇಕು ಎನ್ನುವ ರೀತಿಯಲ್ಲಿ ಈ ಸದನದ ಮೂಲಕ ಬಹಿರಂಗವಾಗಿ ತಮಗೆ ವದಂತಿ ಕೊಡುತ್ತಾರೆ. ಈಗಲಾದರೂ ಯಡಿಯೂರಪ್ಪನವರು ಇದನ್ನು ಬಿಟ್ಟು ರಾಜಕೀಯ ವ್ಯವಸ್ಥೆಯಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಂದುವರಿಯಬೇಕೇ ವಿನಃ ಈ ಜಾತ್ಯಾತೀತ ರಾಷ್ಟ್ರದ ಪ್ರಜಾಸತ್ತೆಯನ್ನು ನಿರ್ನಾಮ ಮಾಡತಕ್ಕ ಕೆಲಸ. ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕವಾಗಲೀ, ಮಸೀದಿಯನ್ನು ಕೆಡುವ ಮೂಲಕವಾಗಲೀ ಇದನ್ನು ಮಾಡಬಾರದು. ಅಂತಹ ಕೆಲಸವನ್ನು ನಿಲ್ಲಿಸಿ ಜನಪ್ರಿಯ ಕಾರ್ಯಕ್ರಮವನ್ನು, ಜನರನ್ನು ಸ್ಪಂದಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಕ್ಕೆ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಅವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರಾಗಿರತಕ್ಕಂಥ ರಂಗನಾಥರವರು ಈ ವಿಚಾರವನ್ನು ಕಡತದಿಂದ ತೆಗೆದುಹಾಕಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಅವರ ಧೋರಣೆ ಏನು ಎನ್ನುವುದನ್ನು ಈ ಸದನದ ಮೂಲಕ ಹೇಳುತ್ತಿದ್ದಾರೆ. ಈಗಲೂ ಅದೇ ಅವರ ಧೋರಣೆಯಾದರೆ ಖಮರುಲ್ ಇಸ್ಲಾಂರವರು ಹೇಳಿದರು, ಅಲ್ಲಿಗೆ ಟಾಡಾ ಹಾಕಬೇಕಾಗಿತ್ತು ಎಂದು ಹೇಳಿದಾಗ ಅವರಿಗೆ ಬಹಳ ಕೋಪ ಬಂತು. ಇಂತಹ ಧೋರಣೆಗೆ ಟಾಡಾ ಹಾಕಬೇಕೆ ಬೇಡವೇ? ಪುನಃ ಅವರು ಪ್ರಜಾಪ್ರಭುತ್ವದ ಬಗ್ಗೆ ರಾಜ್ಯಾಂಗದ ಬಗ್ಗೆ ಹೇಳುತ್ತಾರೆ. ರಾಜ್ಯಾಂಗದ ಪ್ರಕಾರ ಒಂದು ರಾಷ್ಟ್ರಕ್ಕೆ ಒಬ್ಬ ಪ್ರಧಾನಿ, ರಾಜ್ಯಕ್ಕೆ ಒಬ್ಬರು ಮುಖ್ಯಮಂತ್ರಿಗಳು ಇರುತ್ತಾರೆ. ಬಹುಮತ ಯಾವ ಪಕ್ಷಕ್ಕೆ ಬರುತ್ತದೆ ಆ

ಪಕ್ಷಕ್ಕೆ ಆಡಳಿತ ನಡೆಸುವ ಅಧಿಕಾರವನ್ನು ರಾಜ್ಯಾಂಗ ಕೊಟ್ಟಿರುತ್ತದೆ. ನಾವು ಸುಡುತ್ತೇವೆ ಎನ್ನತಕ್ಕ ಧೋರಣೆಯನ್ನು ಅವರು ಅನುಸರಿಸುವುದಾದರೆ, ಪ್ರತಿಪಾದನೆ ಮಾಡುವುದಾದರೆ ನಾನು ಅವರಿಗೆ ಏನೂ ಹೇಳುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇಕಾದರೆ ದಾಖಲೆ ತರಿಸಿ ನೋಡಿ.

ಶ್ರೀ ಕೆ.ಹೆಚ್. ರಂಗನಾಥ್ : ಅವರು ಆ ರೀತಿ ಹೇಳಿದ್ದರೆ ಈ ಸದನಕ್ಕೆ ಕ್ಷಮಾಪಣೆಯನ್ನು ಕೇಳಲೇಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ಬೇರೆ ವಿಚಾರ ಮಾತನಾಡುತ್ತಿದ್ದೇನೆ. ಹಿರಿಯ ಸಚಿವರಾದಂಥ ಮಾನ್ಯ ರಂಗನಾಥ್‌ರವರು ಏನು ಹೇಳಿದ್ದಾರೆ. ಈ ಸದನದ ಕಾರ್ಯಕಲಾಪಗಳನ್ನು ಲಘುವಾಗಿ ನಮ್ಮಲ್ಲಿ ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಇದನ್ನು ಇಡೀ ರಾಜ್ಯದ ಜನರು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದಾರೆ. ಗೌರವಾನ್ವಿತ ಸದಸ್ಯರು ಮುಖ್ಯ ಮಂತ್ರಿಗಳೇನಾದರೂ ಆ ದಿನ ಅಲ್ಲಿಗೆ ಹೋಗಿದ್ದಿದ್ದರೆ ಜನರು ಸುಡುತ್ತಿದ್ದರು ಎಂದು ಹೇಳುವುದಾದರೆ, ಇದರ ಬಗ್ಗೆ ಯಾರೂ ಕೂಡ ಪ್ರಚೋದಿತ ಆಗಬೇಕಾದ ಅವಶ್ಯಕತೆ ಇಲ್ಲವೆಂದು ನನ್ನ ಅಭಿಪ್ರಾಯ. ಈ ಪ್ರಜಾಪ್ರಭುತ್ವದಲ್ಲಿ ಕೇವಲ ಓಟಿಗಾಗಿ ಇವರು ಮಾಡುತ್ತಿರುವ ಕೆಲಸ ಇದು. ನಮ್ಮ ರಾಜ್ಯದ ಜನರು ಇದನ್ನೆಲ್ಲಾ ನೋಡುತ್ತಿದ್ದಾರೆ. ಇವರು ಮಾಡಿಸುತ್ತಿರುವ ಹಿಂಸೆ, ಕೊಲೆ, ದಬ್ಬಾಳಿಕೆ, ಇವುಗಳನ್ನೆಲ್ಲಾ ನೋಡಿ ಇವರನ್ನು ಎಲ್ಲಿ ಇಡಬೇಕೋ ಅಲ್ಲಿ ಇಡುತ್ತಾರೆ. ಆದ್ದರಿಂದ ಅವರು ಹೇಳಿರುವುದನ್ನು ದಯವಿಟ್ಟು ಕಡತದಿಂದ ತೆಗೆದುಹಾಕುವಂತೆ ತಾವು ಹೇಳಿದಿರಿ. ಆದರೆ ದಯವಿಟ್ಟು ಕಡತದಿಂದ ತೆಗೆದುಹಾಕಬಾರದು. ಇದು ಕಡತದಲ್ಲಿ ಇರಬೇಕು. ಇದು ಅವರ ಧೋರಣೆ, ಸಂಸ್ಕೃತಿ ಏನೆಂಬುದು ಈ ರಾಜ್ಯದ ಜನತೆಗೆ ಗೊತ್ತಾಗಲಿ. ಇವರು ಅಧಿಕಾರಕ್ಕೆ ಬಂದರೆ ಏನು ಮಾಡುತ್ತಾರೆಂಬುದು ಅವರಿಗೆ ಗೊತ್ತಾಗಲಿ.

ಶ್ರೀ ಎಂ. ವೀರಪ್ಪಮೊಯಿಲಿ : ಈ ಮಾತಿಗೆ ನನ್ನ ಪ್ರತಿಕ್ರಿಯೆ ಏನೂ ಇಲ್ಲ. ಏಕೆಂದರೆ ಈ ರಾಷ್ಟ್ರದ ನೆಮ್ಮದಿಗಾಗಿ, ಶಾಂತಿಗಾಗಿ, ಕೋಮು ಸೌಹಾರ್ದಕ್ಕಾಗಿ ನಮ್ಮ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರೇ ಬಲಿಯಾಗಿರುವಾಗ ಯಃಕಶ್ಚಿತ್ ನನ್ನ ಬಲಿಯಾದರೆ, ಇದರಿಂದ ದೇಶದ ಶಾಂತಿ, ನೆಮ್ಮದಿ ಆಗುವುದಾದರೆ ಅದಕ್ಕೆ ನಾನು ಸಿದ್ಧವಾಗಿದ್ದೇನೆ. ನನ್ನನ್ನು ಬಲಿ ತೆಗೆದುಕೊಳ್ಳಿ. ನಾನು ಯೋಚನೆ ಮಾಡುವುದಿಲ್ಲ. ಇದರಿಂದಾಗಿ ನಾನು ಒಳ್ಳೆಯ ಉದ್ದೇಶಕ್ಕೆ ಪ್ರಾಣ ಕೊಟ್ಟಂತಾಗುತ್ತದೆ. ನಾವು ಸಾರ್ವಜನಿಕ ಜೀವನಕ್ಕೆ ಬಂದಾಗ ನಮ್ಮ ಪ್ರಾಣ ನಮಗಾಗಿ ಇರತಕ್ಕದ್ದಲ್ಲ. ಇದು ದೇಶಕ್ಕಾಗಿ ಇರತಕ್ಕದ್ದು. ಓಟಿಗಾಗಿ, ಅಧಿಕಾರಕ್ಕಾಗಿ ಯಜ್ಞಕುಂಡದಲ್ಲಿ ಅನೇಕ ಜನರ ಪ್ರಾಣಾಹುತಿ ಆಗುವುದಾದರೆ ನನ್ನನ್ನೂ ಕೂಡ ಆ ಯಜ್ಞಕುಂಡದಲ್ಲಿ ಹಾಕಬೇಕೆಂದು ಯಡಿಯೂರಪ್ಪನವರು ಅಭಿಪ್ರಾಯ ಪಡುವುದಾದರೆ, ಅದರಿಂದ ದೇಶಕ್ಕೆ ಒಳ್ಳೆಯದಾಗುವುದಾದರೆ ಅದೂ ಆಗಲಿ. ನಿಮ್ಮ ಅಧಿಕಾರಕ್ಕಾಗಿ ನನ್ನನ್ನು ಬಲಿ ಕೊಡಬಹುದು. ಆದರೆ ಹಸುಳೆಗಳನ್ನು, ಅಮಾಯಕರನ್ನು ಬಲಿಕೊಡಬೇಡಿ. ಇಂಥ ದುಷ್ಟ ಕೊಲೆಗಡುಕ ರಾಜಕೀಯ ಸಂಸ್ಕೃತಿ ಈ ವಿಂಧ್ಯಪರ್ವತವನ್ನು ದಾಟಿ ದಕ್ಷಿಣ ಭಾರತಕ್ಕೆ ಬರುವುದು ಬೇಡ. ನಮ್ಮ ಕನ್ನಡನಾಡಿಗಂತೂ ಬರುವುದು ಬೇಡ. ಬರುವುದನ್ನು ನಿಲ್ಲಿಸಲು ಬೇರೆ ಅಡ್ಡಗೋಡೆ ಬೇಕಿಲ್ಲ, ಪೋಲೀಸ್ ಬೇಕಿಲ್ಲ, ನನ್ನ ಪ್ರಾಣವನ್ನೇ ಒತ್ತೆ ಇಡುತ್ತೇನೆ. That is ready. You first kill me. Then your communal politics and criminal politics can enter into the territory of Karnataka. Take it from me. This is what I must say. When it is curfew-bounded, we have to enforce the law. The police have gone there.

ಇಡೀ ರಾಜ್ಯದಲ್ಲಿ 10 ಸಾವಿರ ಜನರನ್ನು ಪೋಲೀಸರು ಅರೆಸ್ಟ್ ಮಾಡಿದ್ದಾರೆ. ಆ ಪರಿಸ್ಥಿತಿಗೆ ಸರಿಯಾಗಿ ಪೋಲೀಸರು ನಡೆದುಕೊಂಡಿದ್ದಾರೆ. they don't take direction from me to fire. ಇದು ತಮಗೂ ಗೊತ್ತಿದೆ. I was worried. I was telling them Use all restraint possible. We have been telling them.

ಯಾವುದೇ ರೀತಿಯ ಅನಾಹುತ ಆಗಬಾರದು ಎಂದು ಇದ್ದೆ. ಆದರೆ ಅಲ್ಲಿನ ಪರಿಸ್ಥಿತಿ ಹೇಗಿತ್ತೆಂಬುದು ತಮಗೂ ಗೊತ್ತಿದೆ. You are leaders. You are supposed to be a leader of a political party, leader of Karnataka. Kum. Uma Bharathi is a leader of the country, a Parliament Member. You could not control your people. In your presence it has happened.

ಈ ಘಟನೆ ನಡೆಯುವಾಗ ನೀವು ಅಲ್ಲಿದ್ದೀರಿ, When the petrol bomb was thrown; they are confined. The bus was burnt. What kind of a leader you are when you could not control your own crowd?

ನೀವು ನನ್ನ ರಾಜೀನಾಮೆಯನ್ನು ಕೇಳುವುದು ಅಲ್ಲ. I think such people who cannot control their own followers, control their own crowd, I don't think people will consider them fit enough even for MLA ship; forget your Chief Ministership.

ಆದ್ದರಿಂದ ಅದರ ಬಗ್ಗೆ ಇವತ್ತು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈದ್‌ಗಾ ಮೈದಾನದ ಬಗ್ಗೆ ಒಂದು ಬದಲಾವಣೆಯಾಗಿದೆ. ಇವತ್ತು ಅವರು ಚೆನ್ನಮ್ಮ ಮೈದಾನ ಎಂದು ಹೇಳುತ್ತಿಲ್ಲ, ಈದ್ಗಾ ಮೈದಾನ ಎಂದು ಹೇಳುತ್ತಿದ್ದಾರೆ. ಈದ್ಗಾ ಮೈದಾನದಲ್ಲಿ ಬಿ.ಜೆ.ಪಿಯವರಿಗೆ ಏನು ಕೆಲಸ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೆಲಸ ಇರುವುದೇ ಅಲ್ಲಿ.

ಶ್ರೀ ಎಂ. ವೀರಪ್ಪಮೊಯಿಲಿ : ಇವರಿಗೆ ಕೆಲಸ ಇರುವುದೇ ಅಲ್ಲಿ. I have got the old documents, copy of the documents of 1992 of the Bombay Province. ಇದು ಕೊಟ್ಟಿದ್ದಲ್ಲ. That was in their possession since more than 200 years. Idgah Maidan at Hubli has been in the possession and enjoyment of the Mohammadens for over 200 years.

ಹಿಂದೆ ಸಿಟಿ ಸರ್ವೆ ಮಾಡುವಾಗ ಇದು ಮುನಿಸಿಪಾಲಿಟಿ ಪ್ರಾಪರ್ಟಿ ಎಂದು ಇನ್‌ಕ್ಲೂಡ್ ಮಾಡಿದರು. Actually it was in their possession. when the city survey was conducted, it was included in the city survey. Just because it was included in the city survey, it does not belong to the corporation or the Municipality. It was given to Anjuman on a nominal rent of Re.1/- per year for a period of 999 years, not a licence. It is a lease for 999 years. ಅದಕ್ಕೆ ಬೌಂಡರಿಯನ್ನೆಲ್ಲಾ ಹಾಕಿದ್ದಾರೆ. You should know the genesis of the case.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೈಕೋರ್ಟ್ ಏನು ಹೇಳುತ್ತದೆ?

ಶ್ರೀ ಎಂ. ವೀರಪ್ಪಮೊಯಿಲಿ : ಅದನ್ನೂ ಹೇಳುತ್ತೇನೆ. ಸ್ವಲ್ಪ ಸಮಾಧಾನದಿಂದಿರಿ. ಬಾಡೆ ಪತ್ರ ಅಂದರೆ ಬಾಡಿಗೆ ಪತ್ರ. ಇದರಲ್ಲಿ ಬೌಂಡರಿಯನ್ನೂ ಕೂಡ ಕೊಟ್ಟಿದ್ದಾರೆ. It was a property belonging to them for 999 years, not a licence. ಅಲ್ಲಿಗೆ ಹೋಗಿಬರುವುದಕ್ಕೆ ಇದೇನೂ ಲೈಸೆನ್ಸ್ ಅಲ್ಲ, ಬಾಡಿಗೆ ಕೊಟ್ಟಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ವಿಚಾರ ಈಗ ನ್ಯಾಯಾಲಯದಲ್ಲಿರುವುದರಿಂದ ಇದನ್ನು ಸದನದಲ್ಲಿ ಚರ್ಚೆ ಮಾಡುವುದು ಅಷ್ಟು ಸಮಂಜಸವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಸುಪ್ರೀಂ ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದೆ. ಸುಪ್ರೀಂ ಕೋರ್ಟ್ keeping the main petition pending past ಹೀಗೆ ಹೇಳುತ್ತದೆ Demolition of the buildings in the area which was subject-matter of disputes on the file of the Karnataka High Court, Bangalore in Rs. No. 754/82 is hereby syatyed.'

ಶ್ರೀ ವಾಟಾಳ್ ನಾಗರಾಜ್ : ಈ ಲೀಸ್ ಮುಗಿಯುವಷ್ಟು ಹೊತ್ತಿಗೆ 599 ಜನ ಮುಖ್ಯ ಮಂತ್ರಿಗಳು ಬಂದು ಹೋಗುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಆದ್ದರಿಂದ Supreme Court has stayed it. It is an undisputed title for them. There is no doubt about it. There is an undisputed title in favour of the Anjuman. As far as the structure and buildings are concerned, there was a dispute. Even that demolition was stayed by the Supreme Court, the highest Court of the land. ನಿಮಗೆ ಸುಪ್ರೀಂ ಕೋರ್ಟ್‌ನ ಬಗ್ಗೆ ನಂಬಿಕೆಯೇ ಇಲ್ಲ. ಸುಪ್ರೀಂ ಕೋರ್ಟ್ ಬಗ್ಗೆ ಪುನರುಚ್ಚಾರ ಮಾಡಬೇಕಾದ ಅವಶ್ಯಕತೆಯೇ ಇಲ್ಲ. ಆದರೆ ನನಗೆ ಒಂದು ಆಶ್ಚರ್ಯವಾಗತ್ತದೆ. ಕಾಶ್ಮೀರದ ಲಾಲ್ ಚೌಕಕ್ಕೂ ಹುಬ್ಬಳ್ಳಿಗೂ ಏನು ಸಂಬಂಧ? They take it to that dimension. ಲಾಲ್‌ಚೌಕಕ್ಕೆ ಮುರಳೀ ಮನೋಹರ ಜೋಷಿಯವರು ಹೋಗಿ ಮಾಡಿದರೆ, ಯಡಿಯೂರಪ್ಪನಂಥವರು ಹಬ್ಬಳ್ಳಿಯಲ್ಲಿ ಹೋಗಿ ಮಾಡುವುದು. They started with that. Do you think that the Muslims of Hubli are terrorists? What do you mean by that? You are insulting the entire Muslim community, not the muslim community, by comparing to Karnataka to Kashmir you have made irrepairable damage to the reputation of Karnataka, for the people of *Karnataka. You* compare Kashmir to Karnataka. You are dare enough to do it.

ಸುಡುತ್ತೇವೆಂದು ನೀವು ನನಗೆ ಏನು ಹೇಳಿದಿರಿ, ಬಹುಶಃ ನಿಮ್ಮ ಈ ಧೋರಣೆ ಕರ್ನಾಟಕದ ಜನರಿಗೆ ಗೊತ್ತಾಗಿದ್ದಿದ್ದರೆ ಕರ್ನಾಟಕದ ಬೀದಿಯಲ್ಲಿ ಕನ್ನಡಿಗರು ತಿರುಗಾಡಲೂ ಬಿಡುತ್ತಿರಲಿಲ್ಲ. How dare you compare my Karnakaka , my people of Karnataka to Kashmir? Do you think they arey terrorists in Hubli? The cause of action is that. All this has started in 1992. When Murali Manohar Joshi went to Lal Chowk. They thought that Hubli is comparable to it. What do you mean by that?

ಕನ್ನಡಿಗರು ಅಷ್ಟು ಸುಲಭವಾಗಿ ನಿಮ್ಮ ಬಲೆಗೆ ಸಿಕ್ಕುವುದಿಲ್ಲ. ಬಿ.ಜೆ.ಪಿ.ಗೆ ನಿಮ್ಮ ಜಾತೀಯ ಕೋಮುವಾದದ ಬಲೆಗೆ ಸಿಗತಕ್ಕ ಸ್ವಾಭಿಮಾನಿ ಕನ್ನಡಿಗರು ಇಲ್ಲಿ ಇಲ್ಲ. ಮೂರು ನಾಲ್ಕು ಜನರು ಇಲ್ಲಿ ಆರಿಸಿ ಬಂದಿದ್ದೀರಲ್ಲ, ಯಾವ ಕನ್ನಡಿಗರನ್ನು ಕರ್ನಾಟಕವನ್ನು ಕಾಶ್ಮೀರದ ಮಿಲಿಟೆಂಟ್ಸ್‌ಗೆ ಹೋಲಿಸಿದ್ದೀರಿ ಅಂದು ನಿಮ್ಮ ರಾಜಕೀಯದ ಭವಿಷ್ಯ ಸಮಾಧಿಯಾಗುತ್ತದೆ. Take it from me. People will realise. All his fun will come in the elections. ಓಟ್ ಬ್ಯಾಂಕ್ ಬೇಕು ಅಂದರೆ ಯಾರ ಓಟ್ ಬ್ಯಾಂಕ್? ಕರ್ನಾಟಕದ ಓಟ್ ಬ್ಯಾಂಕ್, ಎಲ್ಲರ ಸ್ವಾಭಿಮಾನದ ಪ್ರಶ್ನೆ. ನಮ್ಮ ಸ್ವಾಭಿಮಾನವನ್ನು ಕೆಣಕಿದ್ದೀರಿ ಯಡಿಯೂರಪ್ಪನವರೆ. ನಿಮ್ಮ ರಾಷ್ಟ್ರದ ನಾಯಕರು ಕರ್ನಾಟಕದ ಸ್ವಾಭಿಮಾನವನ್ನು ಕೆಣಕಿದ್ದೀರಿ.

It should be suitable answered. Wait for two or three months. You know what it is. ಮುಖ್ಯಮಂತ್ರಿ ಆಗತಕ್ಕ ಭ್ರಾಂತು ಬಿಟ್ಟುಬಿಡಿ. ಎಂ.ಎಲ್.ಎ. ಆಗತಕ್ಕ ಪರಿಸ್ಥಿತಿ ನಿಮಗೆ ಬರುತ್ತದೆಯೋ ಇಲ್ಲವೋ ಎಂದು ಶಿಕಾರಿಪುರದ ಜನರ ಹತ್ತಿರ ಹೋಗಿ ಕೇಳಿ. ಸನ್ಮಾನ್ಯ ಅಧ್ಯಕ್ಷರೇ, ನಾನು ಅವರಿಗೆ ಸರ್ಟಿಫಿಕೇಟ್ ಕೊಡಬೇಕಾಗಿಲ್ಲ. ಸುಪ್ರೀಂ ಕೋರ್ಟಿನವರು ಈಗಾಗಲೇ ಇವರ ಪಕ್ಷಕ್ಕೆ ಕೊಟ್ಟಿದ್ದಾರೆ. ನಿಮ್ಮ ಕೆಲಸಕ್ಕೆ ನಾನು ಕೊಡಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಎಂ.ಎಲ್.ಎ. ಆಗಿ ಆಯ್ಕೆ ಆಗುತ್ತೀರೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಿ ಮೊದಲು. ನಿಮ್ಮ ಕ್ಷೇತ್ರದಲ್ಲಿ ನೀವು ನೋಡಿಕೊಳ್ಳಿ. ಆಮೇಲೆ ಯಡಿಯೂರಪ್ಪನವರಿಗೆ ಹೇಳುವಿರಂತೆ. ನೀವು ಠೇವಣಿ ಕಳೆದುಕೊಳ್ಳುವ ಪರಿಸ್ಥಿತಿ ಬಂದಿದೆ.

ಶ್ರೀ ಎಂ. ವೀರಪ್ಪಮೊಯಿಲಿ : ಆಯಿತು, ಆಯಿತು. ನೋಡೋಣ. ನಿಮಗೆ ಏನು ಗೊತ್ತಿದೆ ದಕ್ಷಿಣ ಕನ್ನಡ ಕಾರ್ಕಳ ಜನತೆಯ ಬಗ್ಗೆ. ಪಾಪ, ನಿಮಗೇನು ಗೊತ್ತಿದೆ. ರುಕ್ಮಯ್ಯ ಪೂಜಾರಿಯವರಿಗೆ ಸ್ಪಷ್ಟವಾಗಿ ಗೊತ್ತಿದೆ. ನಿಮಗೆ ಗೊತ್ತಿಲ್ಲ ಅಷ್ಟೆ. ಜನತಾ ದಳದವರು ಮತ್ತು ನಾವು ಬಹಳ ದಾಕ್ಷಿಣ್ಯ ಪ್ರವೃತ್ತಿಯವರು. ಬಹುಶಃ ನಿಮಗೆ ಗೊತ್ತಿದೆ ನಾವೇನಾದರೂ ಧಾಳಿ ಮಾಡುವುದಕ್ಕೆ ಹೊರಟರೆ ಶಿಕಾರಿಪುರದಲ್ಲಿ ಧೂಳೀಪಟ ಆಗುತ್ತೀರಿ. ಈ ಸಾರಿ ನಾವು ಅದನ್ನು ಮಾಡಬೇಕು ಅನ್ನಿಸುತ್ತದೆ.

ಇಂಡಿಯನ್ ಎಕ್ಸ್‌ಪ್ರೆಸ್ ಎಡಿಟೋರಿಯಲ್ ಓದಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಬರುವುದಿಲ್ಲ ನಿಮ್ಮ ಜೊತೆಗೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ನಾವು ನೋಡಿಕೊಳ್ಳುತ್ತೇವೆ. ಆದರೆ ನಿಮ್ಮಂಥ ಪಕ್ಷ ಇಲ್ಲಿ ಬೆಳೆಯಲೇಬಾರದು. ಅದು ಭತ್ತದ ಮಧ್ಯೆ ಬೆಳೆಯುತ್ತದಲ್ಲ ಕಳೆ ಪಾರ್ಥೇನಿಯಂ ತರಹ ಅದು ಬೆಳೆಯಲಿಕ್ಕೆ ನಮ್ಮ ಪವಿತ್ರ ಕನ್ನಡ ನಾಡಿನಲ್ಲಿ ಅವಕಾಶ ಇಲ್ಲ. ನೀವು ಏನೇ ನಾಟಕ ಮಾಡಿ. ಗೊತ್ತಿದೆ, ಹೊಸ ಹೊಸ ವೇಶ ಹಾಕುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಒಂದು ತರಹ ಕಾಂಗ್ರೆಸ್ ಗಿಡ ಎಂದು ಬಂದಿದೆ. ಅದು ಹೇಳುತ್ತಿದ್ದೀರಾ ನೀವು?

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಎಲ್ಲಾ ಎಡಿಟೋರಿಯಲ್ ಓದುವುದಿಲ್ಲ, ಆದರೆ ಇಂಡಿಯನ್ ಎಕ್ಸ್‌ಪ್ರೆಸ್ಸ್‌ನಲ್ಲಿ ಎಡಿಟೋರಿಯಲ್ಲ್‌ನಲ್ಲಿ ಏನು ಹೇಳಿದ್ದಾರೆ ಗೊತ್ತಾ?

Indian Express editorial has said :

> "The BJP was being unnecessarily provocative in its insistence that August 15th be observed specifically on that contentions site in Hubli....
>
> The party has calculated that emotive significance of the national flag will force the Karnataka Government to settle for a compromise which will then be flaunted as a BJP victory.....
>
> ...For that to happen, it is first necessary to take the controversy outside the orbit of party politics...."

Editorial of the Times of India states :

> "The Karnataka Chief Minister Mr. Veerappa Moily was entirely right when he described the BJP's programme to hoist the national

> flag at the Idga Maidan in Hubli as a "sinister game plan to disturb peace."....

Sri D.B. Chandre Gowda : All the papers have thrown them to the dust-bin of the Indian history.

Sri M. Veerappa Moily : Karnataka will be the first state to throw the BJP to the dust-bin so that they will not rise again in the country.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೂ ಬಿ.ಜೆ.ಪಿ. ಭೂತವೇ?

ಶ್ರೀ ಡಿ.ಬಿ. ಚಂದ್ರೇಗೌಡ : ದೇಶಕ್ಕೆ ಭೂತ ಅದು.

We don't care. We are fighting you right from the day one we entered the politics. ದೇಶಕ್ಕೇ ಭೂತ ಎಂದು ಈಗ ವಾದ ನಡೆಯುತ್ತಾ ಇರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : 15 ಜನ ಬೆಂಬಲ ಕೊಟ್ಟು ಮಂತ್ರಿ ಮಾಡಿದಾಗ?

Sri M. Veerappa Moily : Further it says :

> "The Moily Government will, therefore, have to act with firmness and determination to ensure that the situation does not go out of control in a communally sensitive state..."
>
> "The reason why the BJP targeted the Idgah maidan with such fervour is not far to seek. Having been put on the defensive by the centre's maneouvres on the Ram temple front, it has been desparately searching for issues to remain in public eye...."
>
> "A Muslim organization claims to be the owner...."
>
> The Hindu paper editorial says:
>
> "...S
>
> "Provocation for electoral gain :
>
> .... Surely, the ingredients of the situation evolving in Hubli are strikingly similar, even if not identical , to what obtained in Ayodhya except that they are wrapped in the cloak of a national cause."

There it is cloaked with Rama and here it is cloaked in a national cause. You have insulted the national flag. This is what the paper says. They are responsible national papers. Futher it says :

> "... Witness for instance the direct involvement of its national leaders and the advance media build up for the "event." With the Assembly polls round the corner, the BJP perhaps saw in the emotive "flag" issue a great potential for drawing electoral mileage in two ways. On the positive side, it reckoned that championing....."
>
> "What stands out in all these calculations is that the lofty values of partiotism and nationalism are made to subserve rather than prevail over, narrow partisan and sectarian interests..."

Shame to you. Shame to you.

"No Government worth its name....."

Please hear Mr. Yediyurappa.

"No Government worth its name can be expected to permit the BJP or anyone else to commit criminal trespass....."

Can worth the name allow them to commit the criminal trespass.

".... Given this and the communal element in the disputed site together with the BJP's brazenly anit-secular record in Ayodhya, the Veerappa Moily Government cannot be faulted for suspected "sinister and nefarious designs" behind the BJP's game-plan and going all out to frustrate the flag hoisting attempt, although there are some serious misgivings about the police firing itself."

IT is alright. That is why we ordered for it. Even the Deccan Herald has come out with an editorial. Whatever be the paper, I don't want to repeat it.

7.55 ಪಿ.ಎಂ.

ಆದ್ದರಿಂದ ಏನೊಂದು ಜಾತೀಯ, ಕೋಮುವಾದದ ಕರಾಳ ನೃತ್ಯ ಚುನಾವಣೆವರೆಗೆ ಕರ್ನಾಟಕದಲ್ಲಿ ನಡೆಸಬೇಕು ಎಂದು ಬಿಜೆಪಿ ತನಗೆ ಘೊಂದಿಕೊಂಡಂತಹ ರಾಕ್ಷಸಿ ಶಕ್ತಿಗಳು ಏನಿವೆ ಅವುಗಳನ್ನು ಉಪಯೋಗ ಮಾಡಬೇಕೆಂದಿದ್ದರು ಅದಕ್ಕೆ ಕರ್ನಾಟಕದಲ್ಲಿ ಬೆಲೆ ಬರುವುದಿಲ್ಲ, ಅದಕ್ಕೆ ನಾವು ಸ್ಥಾನ ಕೊಡುವುದಿಲ್ಲ, ಅದಕ್ಕೆ ಅವಕಾಶ ಕೊಡುವುದಿಲ್ಲ. Even at the cost of my life, I will not allow you to play this kind of a game. That is all.

ಶ್ರೀ ವಾಟಾಳ್ ನಾಗರಾಜ್ : ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ತಮಗೆ ಒಂದು ಸಲಹೆ ಕೊಟ್ಟಿದ್ದೇನೆ ಅದರ ಬಗ್ಗೆ ಏನಾದರೂ ಒಂದು ಆಲೋಚನೆ ಮಾಡಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ ಎಲ್ಲಿಗೆ ಬಂತೆಂದರೆ, ಬಿಜೆಪಿಯವರನ್ನು ಬೈಯ್ಯುವುದಕ್ಕೆ ಬಂತು. ಗೋಲಿಬಾರ್ ಅನಗತ್ಯವಾಗಿತ್ತು. ಅದು ನಮ್ಮ ಪ್ರಶ್ನೆ. ಸೀಕ್ರೇಟ್ ವರದಿ ಕೊಟ್ಟರು, ನೀವು ನ್ಯಾಯಾಂಗ ತನಿಖೆ ಮಾಡುವುದಕ್ಕೆ ಮುಂಚೆ ಅದು ಏನು? ಎಲ್ಲಕ್ಕಿಂತ ಹೆಚ್ಚಾಗಿ ಅದು ಡಿಸ್ಪ್ಯೂಟ್ ಜಾಗವಿದೆಯೆಂದು ತಿಳಿದುಕೊಳ್ಳುತ್ತೇವೆ ಅಥವಾ ಇಲ್ಲವೆಂದು ತಿಳಿದುಕೊಳ್ಳೋಣ. ನಮಗೆ ಅದಕ್ಕೆ ಸಂಬಂಧವಿಲ್ಲ. ಬಿಜೆಪಿಯವರು ಅಲ್ಲಿ ಬಾವುಟ ಹಾರಿಸುವುದಕ್ಕೆ ಆಸಕ್ತಿಯೇನು? ಇದನ್ನು ಸಾಕಷ್ಟು ಹೇಳಿದ್ದೇವೆ. ಸರ್ಕಮ್ಸ್ಟೆನ್ಸಸ್ ಲೀಡಿಂಗ್ ಟುದಿ ಗೋಲಿಬಾರ್ ಅದರ ಬಗ್ಗೆ ನಾಳೆ ವಿಚಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಮೊದಲು ಗೋಲಿಬಾರನ್ನು ಡಿಫೆಂಡ್ ಮಾಡಿ, ಪೋಲೀಸರನ್ನು ರಕ್ಷಣೆ ಮಾಡಿ. ಆಮೇಲೆ ಮಾರನೆಯ ದಿವಸ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡತಕ್ಕ ಪರಿಸ್ಥಿತಿ ಇದೆಯಲ್ಲ ಅವುಗಳಿಗೆ ನಮಗೆ ವಿವರಣೆ ಬೇಕು. ಮಾನ್ಯ ಯಡಿಯೂರಪ್ಪನವರು ಚಂದ್ರೇಗೌಡರು ನೀವು ಯಾವಾಗ ಕಾಂಗ್ರೆಸ್ಗೆ ಹೋಗುತ್ತೀರಿ ಎಂದು ಹೇಳಿದರು. ನನಗೆ ಇನ್ನು ಯಾರು ಡೆಪ್ಯುಟಿ ಸ್ಪೀಕರ್‌ಶಿಪ್ ಆಫರ್ ಮಾಡಿಲ್ಲ. ಆಫರ್ ಮಾಡಲಿ ಆಮೇಲೆ ಆಲೋಚನೆ ಮಾಡೋಣ ಎಂದು ಹೇಳಿದೆ.

ಶ್ರೀ ಸಿ. ಬೈರೇಗೌಡ : ಅದು ಹಾಗಲ್ಲ ಸ್ವಾಮಿ, ದೆಹಲಿಯಲ್ಲಿ ಇವರು ಇಬ್ಬರೂ ಒಂದೇ ಮೊನ್ನೆ ಒಂದು ಪೋಟೋ ಬಂದಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾತ್ರಿಹೊತ್ತು ಹೋಗುತ್ತಾರೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಎಂದು ಎಸ್.ಎಂ. ಕೃಷ್ಣಾರವರು ಹೇಳಿದರು.

ಶ್ರೀ ಸಿ. ಬೈರೇಗೌಡ : ಈ ಘಟನೆಯನ್ನು ತಪ್ಪಿಸುವುದಕ್ಕೆ ಸರ್ಕಾರದವರು ಸಂಬಂಧಪಟ್ಟವರನ್ನು ಕರೆಯಿಸಿ ಮಾಡಿರತಕ್ಕ ಪ್ರಯತ್ನವೇನು?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಬೈರೇಗೌಡರು ಹೇಳಿದ ಪ್ರಕಾರ ಈ ಪ್ರಶ್ನೆ ಪ್ರಯತ್ನದ್ದಲ್ಲ. Issue is not be national..ಅವರು ಏನು ಮಾಡಿದ್ದಾರೆಂದು ತಮಗೆ ಗೊತ್ತಿದೆ. ಹೇಳುತ್ತಿದ್ದೇನೆ, ಹುಬ್ಬಳ್ಳಿಯಲ್ಲಿ ಮಾತ್ರ ಪ್ರಯತ್ನ ಮಾಡಲಿಲ್ಲ, ಮುಧೋಳದಲ್ಲಿ ವಕ್ಫ್ ಪ್ರಾಪರ್ಟಿಯಲ್ಲಿ ಪ್ರಯತ್ನ ಮಾಡಿದ್ದಾರೆ. ಚಾಮರಾಜನಗರದಲ್ಲಿ ಪ್ರಯತ್ನ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಅಪ ಪ್ರಚಾರ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳು ಈ ಸದನಕ್ಕೆ ಸುಳ್ಳು ಮಾಹಿತಿಯನ್ನು ಕೊಡುತ್ತಾ ಇದ್ದರೆ ಜವಾಬ್ದಾರಿ ಸ್ಥಾನದಲ್ಲಿದ್ದು ಈ ತರಹ ಹೇಳುವುದು ಸರಿಯಲ್ಲ.

Sri M. Veerappa Moily : It is a sinister move. Don't think it will confine to Hubli. They will create 5 lakh Hublies in Karnataka. Don't forget about it.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರಿಗೆ ಹೇಳುವುದಕ್ಕೆ ಏನೇನೂ ಇಲ್ಲ. ಸುಳ್ಳು ಹೇಳುತ್ತಾ ಇದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ : ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಈ ಸದನದಲ್ಲಿ ಹಿರಿಯರು ಏನು ವಿಚಾರ ಮಾಡುತ್ತೀರಿ ಏನು ಸಲಹೆ ಕೊಡುತ್ತೀರಿ, ಯಾವ ಪ್ರಕಾರ ಅಲ್ಲಿ ನೆಮ್ಮದಿ ಬರಬೇಕು, ಅಲ್ಲಿ ಸಮಾಧಾನ ಬರಬೇಕು, ಏನು ಐದು ಜನರ ಪ್ರಾಣ ಹೋಗಿದೆ. We are really sorry for it but we are sorry that you could plant their death bed at the alter of your selfish, narrow, partisan and fundamental attitude. I am very sorry for it and our herat beats for them. ಅದಕ್ಕೆ ನಾನು ಹೇಳಿದೆ, there is no brand for the people who died.. ಒಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಟ್ಟಿದ್ದೇವೆ. ಒಂದು ಲಕ್ಷ ರೂಪಾಯಿಂದ ಪ್ರಾಣ ಬರುವುದಿಲ್ಲ. ಈಗ ಅಲ್ಲಿ ಡಿಸ್ಪ್ಯುಟ್ ಇದೆ. ನಾವು ಜುಡಿಸಿಯಲ್ ಎನ್ಕ್ವಾಯರಿ ಮಾಡುತ್ತಿದ್ದೇವೆ. ತನ್ಮೂಲಕ ಹುಬ್ಬಳ್ಳಿಯಲ್ಲಿ ಶಾಂತಿ ಸಮಾಧಾನ ನೆಲೆಸುವುದಕ್ಕೆ ಏನು ಪ್ರಯತ್ನ ಮಾಡಬೇಕು ಅದನ್ನು ಮಾಡುವುದಕ್ಕೆ ನಾವು ಯಾವಾಗಲೂ ಸಿದ್ಧರಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ. ಮೇಲ್ಮನೆಯ ಶಾಸಕರಾದ ಮೈಖೇಲ್ ಫರ್ನಾಂಡಿಸ್‌ರವರನ್ನು ಮತ್ತು 1500 ಜನ ಅಂಗನವಾಡಿ ಕಾರ್ಯಕರ್ತೆಯರನ್ನು ಪೋಲೀಸರು ಅರೆಸ್ಟ್ ಮಾಡಿ ದೊಡ್ಡ ಬಳ್ಳಾಪುರ ಮತ್ತು ಜೆಪಿ ನಗರದಲ್ಲಿ ಇಟ್ಟಿದ್ದಾರೆ. ದಯಮಾಡಿ ಅವರನ್ನು ರಿಲೀಸ್ ಮಾಡಿ. ಆಗಿನ ಸಮಾಜ ಕಲ್ಯಾಣ ಸಚಿವರಾದ ಧರ್ಮಸಿಂಗ್ ಅವರು ಅವರ ಬೇಡಿಕೆಗಳ ಬಗ್ಗೆ ಭರವಸೆಯನ್ನು ಕೊಟ್ಟಿದ್ದರು. ತಾವು ಮನೋರಮಾ ಮಧ್ವರಾಜ್‌ರವರನ್ನು ಕರೆಸಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಪಾಪ ಹೆಣ್ಣುಮಕ್ಕಳು, ಅವರನ್ನು ದಯಮಾಡಿ ಬಿಡುಗಡೆ ಮಾಡಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಂಗನವಾಡಿ ಕಾರ್ಯಕರ್ತೆಯರು ರಾಜ್ಯದ ಮೂಲೆ ಮೂಲೆಯಿಂದ ಬಂದಿದ್ದಾರೆ ಬಿಡುಗಡೆ ಮಾಡಿಸಿ.

ಶ್ರೀ ಎಂ. ವೀರಪ್ಪಮೊಯಿಲಿ : ಯಾರನ್ನು ಯಾವ ರೀತಿಯಲ್ಲಿ ಬಂಧಿಸಬೇಕಾದ ಅವಶ್ಯಕತೆಯಿಲ್ಲ, ಆದರೆ ಅವರು ಎಲ್ಲಿ ಎಜಿಟೇಶನ್ ಮಾಡಬೇಕೋ ಅಲ್ಲಿ ಮಾಡಬೇಕೋ ವಿಧಾನಸೌಧದೊಳಗೆ ಬಂದು ಕೂರುತ್ತೇವೆ, ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ ಈ ತರಹ in the oearly hours they wanted to storm Vidhana Soudha. ಯಾವುದಕ್ಕೂ ಒಂದು ಮಿತಿಯಿದೆ.

ಶ್ರೀ ವಾಟಾಳ್ ನಾಗರಾಜ್ : ಸಾಮಾನ್ಯವಾಗಿ ಚಳುವಳಿ ಮಾಡತಕ್ಕವರು ಹೇಳುತ್ತಾರೆ. ಅದನ್ನೇ ನೀವು ದೊಡ್ಡದು ಮಾಡಿಕೊಂಡು ಈ ರೀತಿ ಮಾಡುವುದು ಸರಿಯಿಲ್ಲ, ಅವರನ್ನು ಬೇಗ ಬಿಡುಗಡೆ ಮಾಡಿಸಿ.

ಅಧ್ಯಕ್ಷರು : ದಿನಾಂಕ 15-8-94ರಂದು ಹುಬ್ಬಳ್ಳಿಯಲ್ಲಿ ನಡೆಯಿತೆನ್ನಲಾದ ಗೋಲಿಬಾರ್ ಬಗ್ಗೆ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡಲು ಅನುಮತಿ ಕೋರಿ ಮಾನ್ಯ ಶ್ರೀ ಆರ್.ವಿ. ದೇಶಪಾಂಡೆ, ಡಿ.ಬಿ. ಚಂದ್ರೇಗೌಡ, ಬಿ.ಎಸ್. ಯಡಿಯೂರಪ್ಪ, ವಾಟಾಳ್ನಾಗರಾಜ್ ಇತರ ಸದಸ್ಯರು ಪ್ರಸ್ತಾವವಾಗಿ ಪ್ರಸ್ತಾಪಿಸಿರುವುದರಿಂದ ಹಾಗೂ ಸರ್ಕಾರ ಈ ಬಗ್ಗೆ ಹೇಳಿಕೆ ನೀಡಿದ್ದರಿಂದ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ.

ಈಗ ಸದನದ ಕಾರ್ಯಕಲಾಪಗಳನ್ನು ಮುಂದೂಡಿ ನಾಳೆ ಮಧ್ಯಾಹ್ನ 12 ಗಂಟೆಗೆ ಸಭೆ ಸೇರುವುದು.

(ಸದನವು ರಾತ್ರಿ 8 ಗಂಟೆ ನಾಲ್ಕು ನಿಮಿಷಗಳಿಗೆ ಮುಕ್ತಾಯವಾಗಿ, ಪುನಃ ದಿನಾಂಕ 26ನೇ ಆಗಸ್ಟ್ ಮಾಹೆ 1994ರ ಶುಕ್ರವಾರದಂದು ಮಧ್ಯಾಹ್ನ 12 ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಸರ್ಕಾರಿ ಹೂರವಲಯ ಮುದ್ರಣಾಲಯ, ಬೆಂಗಳೂರು – ೫೬೦೦೫೯